ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಾರ್ಚ್ 7 ಶನಿವಾರ 2026

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

46

ಸಂಪುಟ: 46 | ಸಂಚಿಕೆ: 316 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಕಾಂಗ್ರೆಸ್ ಸರ್ಕಾರ ಕಿತ್ತೊಗೆಯಲು ರಾಜ್ಯಾದ್ಯಂತ ಪ್ರವಾಸ ಮಾಡ್ತೇನೆ

ಮೈಸೂರಲ್ಲಿ ಮಾಜಿ ಸಿಎಂ ಯಡಿಯೂರಪ್ಪ ಹೇಳಿಕೆ



ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನ ಸುತ್ತೂರು ಶಾಖಾ ಮಠಕ್ಕೆ ಶುಕ್ರವಾರ ಭೇಟಿ ನೀಡಿದ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪ ಅವರು ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರಿಂದ ಆಶೀರ್ವಾದ ಪಡೆದರು.

ಮೈಸೂರು, ಮಾ.6(ಬಿಎಲ್‌ಯು)– ರಾಜ್ಯ ಕಾಂಗ್ರೆಸ್ ಸರ್ಕಾರವನ್ನು ಬದಲಾಯಿಸಲು ಜನರು ಬಯಸಿದ್ದು, ಅದರಂತೆ ಬದಲಾವಣೆ ತರಲು ನಾನು ರಾಜ್ಯಾದ್ಯಾಂತ ಪ್ರವಾಸ ಮಾಡುತ್ತಿದ್ದೇನೆ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ತಿಳಿಸಿದ್ದಾರೆ.

ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನ ಸುತ್ತೂರು ಶಾಖಾ ಮಠದಲ್ಲಿ ಇಂದು ಪತ್ರಕರ್ತರೊಂದಿಗೆ ಮಾತನಾಡಿದ ಅವರು, ರಾಜ್ಯದಲ್ಲಿ ಅಭಿವೃದ್ಧಿ ಕಾರ್ಯಗಳು ನಡೆಯುತ್ತಿಲ್ಲವಾದಕಾರಣ ಈ ಸರ್ಕಾರದ ಬದಲಾವಣೆಗೆ ಜನರು ಅಪೇಕ್ಷೆ ಪಟ್ಟಿದ್ದಾರೆ ಎಂದು ಹೇಳಿದರು.

ಹಲವು ನಿರೀಕ್ಷೆಗಳೊಂದಿಗೆ ಕಾಂಗ್ರೆಸ್ ಪಕ್ಷಕ್ಕೆ ಮತ ಹಾಕಿ ಜನರು ಅಧಿಕಾರಕ್ಕೆ ತಂದಿದ್ದಾರೆ. ಆದರೆ ಈ ಸರ್ಕಾರ ಜನರ ನಿರೀಕ್ಷೆಯನ್ನು ಹುಸಿಗೊಳಿಸಿದ್ದು, ಅಭಿವೃದ್ಧಿ ಶೂನ್ಯವಾಗಿದೆ. ಇದರಿಂದ ಜನರು ಈ ತೀರ್ಮಾನ ಕೈಗೊಂಡಿದ್ದಾರೆ ಎಂದು ಸ್ಪಷ್ಟಪಡಿಸಿದರು.

ಇರಾನ್ ಹಾಗೂ ಇಸ್ರೇಲ್ ನಡುವೆ ಯುದ್ಧ ನಡೆಯುತ್ತಿದ್ದು, ಆ ದೇಶದಲ್ಲಿರುವ ಜನರನ್ನು ತಾಯ್ನಾಡಿಗೆ ಕರೆ ತರುವಲ್ಲಿ ಪ್ರಧಾನಿ ಮೋದಿ ಅವರು ಒಳ್ಳೆಯ ಕೆಲಸ ಮಾಡುತ್ತಿದ್ದಾರೆ. ಆದರೆ ಕಾಂಗ್ರೆಸ್ ಪಕ್ಷದವರು ಜನರಿಗೆ ತಪ್ಪು ಮಾಹಿತಿ ನೀಡಿ ಗೊಂದಲ ಮೂಡಿಸುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ವಿಧಾನಸಭಾ ಚುನಾವಣೆಗೆ ಇನ್ನು ಎರಡು ವರ್ಷ ಇರುವಾಗಲೇ ದಾವಣಗೆರೆಯಲ್ಲಿ ಬಿಜೆಪಿ ಅಭ್ಯರ್ಥಿಗಳನ್ನು ಘೋಷಣೆ ಮಾಡಿರುವ ವಿವಾದ ಸೇರಿದಂತೆ ಬಿಜೆಪಿಯ ಪ್ರಸಕ್ತ ರಾಜಕೀಯ ಬೆಳವಣಿಗೆ ಬಗ್ಗೆ ಉತ್ತರಿಸಲು ನಿರಾಕರಿಸಿ, ಅಲ್ಲಿಂದ ನಿರ್ಗಮಿಸಿದರು.

ನಿನ್ನೆಯೇ ಮೈಸೂರಿಗೆ ಆಗಮಿಸಿದ್ದ ಯಡಿಯೂರಪ್ಪ ಅವರು ರಾತ್ರಿ ಖಾಸಗಿ ಹೋಟೆಲ್‌ನಲ್ಲಿ ವಾಸ್ತವ್ಯ ಹೂಡಿದ್ದರು. ಇಂದು ಬೆಳಗ್ಗೆ ಚಾಮುಂಡಿಬೆಟ್ಟಕ್ಕೆ ತೆರಳಿ ನಾಡದೇವತೆ ತಾಯಿ ಚಾಮುಂಡೇಶ್ವರಿ ದೇವಿಗೆ ವಿಶೇಷ ಪೂಜೆ ಸಲ್ಲಿಸಿದರು.

ತರುವಾಯ ಚಾಮುಂಡಿಬೆಟ್ಟದ ತಪ್ಪಲಿನ ಸುತ್ತೂರು ಶಾಖಾ ಮಠಕ್ಕೆ ಆಗಮಿಸಿದರು. ಈ ವೇಳೆ ಯಡಿಯೂರಪ್ಪ ಅವರಿಗೆ ಪೂರ್ಣಕುಂಭ ಸ್ವಾಗತ ಕೋರಲಾಯಿತು. ತರುವಾಯ ಯಡಿಯೂರಪ್ಪ ಅವರು ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಅವರನ್ನು ಭೇಟಿ ಮಾಡಿ ಆಶೀರ್ವಾದ ಪಡೆದರು.

ತರುವಾಯ ಯಡಿಯೂರಪ್ಪ ಸೇರಿದಂತೆ ಬಿಜೆಪಿ ಮುಖಂಡರು ಹಾಗೂ ಕಾರ್ಯಕರ್ತರಿಗೆ ಸುತ್ತೂರು ಮಠದಲ್ಲಿ ಉಪಹಾರದ ವ್ಯವಸ್ಥೆ ಮಾಡಲಾಗಿತ್ತು. ಈ ವೇಳೆ ಯಡಿಯೂರಪ್ಪ ಅವರು ಪಕ್ಷದ ಮುಖಂಡರು ಹಾಗೂ ಕಾರ್ಯಕರ್ತರೊಡನೆ ಉಪಹಾರ ಸೇವಿಸಿದರು.

ಭೇದ–ಭಾವವಿಲ್ಲದೆ ಶುಶ್ರೂಷಕರು ಸೇವೆ ಮಾಡಬೇಕು

ಕರ್ನಾಟಕ ರಾಜ್ಯ ಶುಶ್ರೂಷ ಪರಿಷತ್ ಕುಲಸಚಿವ ಡಾ.ಕೆ.ಮಲ್ಲು ಸಲಹೆ



ಮೈಸೂರಿನ ಜೆ.ಕೆ ಮೈದಾನದ ಅಮೃತ ಮಹೋತ್ಸವ ಭವನದಲ್ಲಿ ಮೈಸೂರು ವೈದ್ಯಕೀಯ ಕಾಲೇಜು–ಸಂಶೋಧನಾ ಸಂಸ್ಥೆ, ಸರ್ಕಾರಿ ಶುಶ್ರೂಷ ಮಹಾವಿದ್ಯಾಲಯ 2025–26ನೇ ಸಾಲಿನ ನರ್ಸಿಂಗ್ ಪ್ರವೇಶಾತಿ ವಿದ್ಯಾರ್ಥಿಗಳಿಗೆ ಜ್ಯೋತಿ ಬೆಳಗುವಿಕೆ ಹಾಗೂ ಪ್ರತಿಜ್ಞಾವಿಧಿ ಸ್ವೀಕಾರ ಕಾರ್ಯಕ್ರಮ ನಡೆಸಲಾಯಿತು.

ಮೈಸೂರು,ಮಾ.6(ಜಿಎ)–ಶುಶ್ರೂಷೆ ಮಾಡುವಾಗ ಯಾವುದೇ ಭೇದ–ಭಾವವಿಲ್ಲದೇ, ಅಂತಃಕರಣದಿಂದ ಸೇವೆ ಸಲ್ಲಿಸಬೇಕು. ಸೇವಾ ಮನೋಭಾವವೇ ನಿಮ್ಮ ಧ್ಯೇಯವಾಗಬೇಕು ಎಂದು ಕರ್ನಾಟಕ ರಾಜ್ಯ ಶುಶ್ರೂಷ ಪರಿಷತ್ ಕುಲಸಚಿವ ಡಾ.ಕೆ.ಮಲ್ಲು ಸಲಹೆ ನೀಡಿದರು.

ಮೈಸೂರಿನ ಜೆ.ಕೆ ಮೈದಾನದ ಅಮೃತ ಮಹೋತ್ಸವ ಭವನದಲ್ಲಿ ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಸರ್ಕಾರಿ ಶುಶ್ರೂಷ ಮಹಾವಿದ್ಯಾಲಯ 2025–26ನೇ ಸಾಲಿನ ನರ್ಸಿಂಗ್ ಪ್ರವೇಶಾತಿ ವಿದ್ಯಾರ್ಥಿಗಳಿಗೆ ಜ್ಯೋತಿ ಬೆಳಗುವಿಕೆ ಹಾಗೂ ಪ್ರತಿಜ್ಞಾವಿಧಿ ಸ್ವೀಕಾರ ಸಮಾರಂಭ ಉದ್ಘಾಟಿಸಿ ಮಾತನಾಡಿದ ಅವರು, ಭಾರತೀಯರಲ್ಲಿ ಶುಶ್ರೂಷ ವಿಚಾರದಲ್ಲಿ ಅಪಾರ ಜ್ಞಾನವಿದ್ದು, ಭಾರತೀಯ ಶುಶ್ರೂಷಕರಿಗೆ ವಿದೇಶಗಳಲ್ಲಿ ಸಾಕಷ್ಟು ಬೇಡಿಕೆಯಿದೆ. ಈ ಅವಕಾಶಗಳನ್ನು ಶುಶ್ರೂಷ ವ್ಯಾಸಂಗದ ವಿದ್ಯಾರ್ಥಿಗಳು ಸದುಪಯೋಗಪಡೆದುಕೊಳ್ಳಿ ಎಂದರು.

ರೋಗಿಗಳ ಆರೈಕೆಯಲ್ಲಿ ಉತ್ಕೃಷ್ಟ, ಗುಣಮಟ್ಟದ ಶುಶ್ರೂಷತೆಯನ್ನು ನೀಡುವುದರಿಂದ ತಮ್ಮ ಭವಿಷ್ಯಕ್ಕೆ ಹೆಚ್ಚಿನ ಲಾಭವಾಗಲಿದೆ. ವಿದೇಶಗಳಿಗೆ ತೆರಳುವುದರಿಂದ ಕುಟುಂಬದ ಶ್ರೇಯೋಭಿವೃದ್ಧಿಯಾಗಲಿದ್ದು, ದೇಶಕ್ಕೆ ಆರ್ಥಿಕ ಕೊಡುಗೆ ಹೆಚ್ಚಾಗುತ್ತದೆ. ಶುಶ್ರೂಷ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ದೊರೆಯುತಿದ್ದು, ತಮ್ಮ ವೃತ್ತಿಪರತೆಯನ್ನು ತಾವೇ ಹೆಚ್ಚಿಸಿಕೊಳ್ಳಬೇಕಿದೆ. ಇದರಿಂದ ವ್ಯಕ್ತತ್ವ ವಿಕಸವಾಗಲಿದೆ ಎಂದು ತಿಳಿಸಿದರು.

ಕೊರೊನದ ನಂತರ ಭಾರತೀಯ ಶುಶ್ರೂಷಕರಿಗೆ ವಿದೇಶಗಳಲ್ಲಿ ಸಾಕಷ್ಟು ಬೇಡಿಕೆಯಿದ್ದು, ನೇರವಾಗಿ ಕಾಲೇಜುಗಳಿಂದ ನೇಮಕ ಮಾಡಿಕೊಳ್ಳುವ ಪ್ರಕ್ರಿಯೆಗಳು ನಡೆಯುತ್ತಿವೆ. ಈ ನಿಟ್ಟಿನಲ್ಲಿ ಸರ್ಕಾರವು ಸಾಕಷ್ಟು ಬೆಂಬಲ ನೀಡುತ್ತಿದೆ. ಶಿಕ್ಷಣ ಮುಗಿದ ನಂತರವೇ ವಿದೇಶಗಳಲ್ಲಿ ಉದ್ಯೋಗ ಪಡೆದುಕೊಳ್ಳುವ ಸದಾವಕಾಶಗಳಿವೆ ಎಂದು ತಿಳಿಸಿದರು.

ರಾಜ್ಯದಲ್ಲಿ ಒಳ ಮೀಸಲಾತಿ ಗೊಂದಲದಿಂದ 3 ವರ್ಷಗಳಿಂದ ಯಾವುದೇ ಶುಶ್ರೂಷಕರಿಗೆ ಸರ್ಕಾರಿ ಉದ್ಯೋಗ ಸಿಕ್ಕಿಲ್ಲ. ಮುಂದಿನ ದಿನಗಳಲ್ಲಿ ನೇಮಕಾತಿಯಾಗಲಿದ್ದು, 4 ಸಾವಿರಕ್ಕೂ ಹೆಚ್ಚಿನ ಸರ್ಕಾರಿ ಹುದ್ದೆಗಳು ಸಿಗಲಿವೆ. ವಿದ್ಯಾರ್ಥಿ ದೆಸೆಯಲ್ಲಿ ಶಿಕ್ಷಣದ ಜತೆಗೆ ಹೆಚ್ಚಿನದಾಗಿ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಒತ್ತು ನೀಡಬೇಕಿದೆ. ಇದೇ ಕ್ಷೇತ್ರದಲ್ಲಿ ಉನ್ನತ ಹುದ್ದೆಗಳನ್ನು ಅಲಂಕರಿಸಬೇಕು ಎಂದು ಹೇಳಿದರು.

ರಾಜ್ಯದಲ್ಲಿ 31 ಸರ್ಕಾರಿ ಶುಶ್ರೂಷ ಕಾಲೇಜುಗಳಲ್ಲಿ ಪ್ರತಿ ಕಾಲೇಜಿನಲ್ಲಿ 100 ಸೀಟ್‌ಗಳಿದ್ದು, ರಾಜ್ಯ ಸರ್ಕಾರ 2026ನೇ ಸಾಲಿನಲ್ಲಿ 250 ಸೀಟುಗಳಿಗೆ ಹೆಚ್ಚಿಸಿದ್ದು, ರಾಜ್ಯದಲ್ಲಿ 2000 ಸಾವಿರ ಸೀಟುಗಳು ಹೆಚ್ಚಾಗಿವೆ ಬೇಡಿಕೆ ದುಪ್ಪಟ್ಟಾಗಿದ್ದು, ಇದರಿಂದ ಗ್ರಾಮೀಣ ಭಾಗದ ಪ್ರತಿಭೆಗಳಿಗೆ ಅನುಕೂಲವಾಗಲಿದೆ. ಶುಶ್ರೂಷ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಕಡಿತವಾಗಿದ್ದು, ವಿದ್ಯಾರ್ಥಿವೇತನ ನೀಡುವಂತೆ ವಿದ್ಯಾರ್ಥಿಗಳು ಬೇಡಿಕೆಯನ್ನಿಟ್ಟರು. ಸರ್ಕಾರಿ ಕಾಲೇಜುಗಳಿಂದ ಮನವಿ ಸಲ್ಲಿಸಿ, ಅನುದಾನ ನೀಡುವಂತೆ ಸರ್ಕಾರದ ಗಮನಕ್ಕೆ ತರುವುದಾಗಿ ತಿಳಿಸಿದರು. ಕಾರ್ಯಕ್ರಮದಲ್ಲಿ ಎಂಎಂಸಿಆರ್‌ಐ ಮುಖ್ಯ ಆಡಳಿತಾಧಿಕಾರಿ ಬಿ.ಆರ್.ಮಹೇಶ್, ಆರ್ಥಿಕ ಸಲಹೆಗಾರ್ತಿ ಎನ್.ನೂತನಶ್ರೀ, ಕೆ.ಆರ್.ಆಸ್ಪತ್ರೆ ವೈದ್ಯಕೀಯ ಅಧೀಕ್ಷಕಿ ಡಾ.ಹೆಚ್.ಸಿ.ಶೋಭಾ, ಸ್ಥಾನೀಯ ವೈದ್ಯಾಧಿಕಾರಿ ಡಾ.ನಯಾಜ್ ಪಾಷ್, ಚೆಲುವಾಂಬ ಆಸ್ಪತ್ರೆ ವೈದ್ಯಕೀಯ ಅಧೀಕ್ಷಕಿ ಡಾ.ಆರ್.ಸುಧಾ, ಪಿಕೆಟಿಬಿ ಮತ್ತು ಸಿ.ಡಿ.ಆಸ್ಪತ್ರೆ ವೈದ್ಯಕೀಯ ಅಧೀಕ್ಷಕ ಡಾ.ಸಿ.ಪ್ರಶಾಂತ್, ಸರ್ಕಾರಿ ಶುಶ್ರೂಷ ಮಹಾವಿದ್ಯಾಲಯ ಪ್ರಾಂಶುಪಾಲ ಡಾ.ಸಿ.ನಂದಪ್ರಕಾಶ್ ಮತ್ತಿತರರು ಉಪಸ್ಥಿತರಿದ್ದರು.

ರಾಜ್ಯದ 31 ಕಾಲೇಜುಗಳಲ್ಲಿ ಕೇವಲ 5 ಕಾಲೇಜುಗಳಲ್ಲಿ ಮಾತ್ರ ಸರ್ಕಾರ ನೇಮಿತ ಭೋದಕ ಪ್ರಾಧ್ಯಾಕರಿದ್ದಾರೆ. ಉಳಿದಂತೆ 26 ಕಾಲೇಜುಗಳಲ್ಲಿ ಸರ್ಕಾರಿ ಭೋಧಕ ಪ್ರಾಧ್ಯಾಪಕರಿಲ್ಲ. ಅತಿಥಿ ಉಪನ್ಯಾಸಕರಿಂದ ಭೋದನೆಗಳು ನಡೆಯುತ್ತಿದ್ದು, ಕರ್ನಾಟಕ ರಾಜ್ಯ ಶುಶ್ರೂಷ ಪರಿಷತ್ ವತಿಯಿಂದ ರಾಜ್ಯ ಸರ್ಕಾರಕ್ಕೆ 450 ಸರ್ಕಾರಿ ಪ್ರಾಧ್ಯಾಪಕರ ನೇಮಕಕ್ಕೆ ಬೇಡಿಕೆಯಿಟ್ಟಿದ್ದು, ಮುಂದಿನ ದಿನಗಳಲ್ಲಿ ಸಹಕಾರಿಯಾಗಲಿದೆ. –ಡಾ.ಕೆ.ಮಲ್ಲು.

ಹುಟ್ಟುಹಬ್ಬದ ಶುಭಾಶಯ...



ಹುಟ್ಟುಹಬ್ಬ ಆಚರಿಸಿಕೊಂಡ ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ಆರ್.ರಾಕೇಶ್ ಗೌಡ ಅವರನ್ನು ಬಿಜೆಪಿ ಮೈಸೂರು ನಗರ ಅಧ್ಯಕ್ಷರೂ ಆದ ಮಾಜಿ ಶಾಸಕ ಎಲ್.ನಾಗೇಂದ್ರ ಅಭಿನಂದಿಸಿ, ಶುಭ ಕೋರಿದರು. ಈ ಸಂದರ್ಭದಲ್ಲಿ ಬಿಜೆಪಿ ಮೈಸೂರು ಪ್ರಧಾನ ಕಾರ್ಯದರ್ಶಿ ಬಿ.ಎಂ.ರಘು, ಸೋಮಸುಂದರ, ರುದ್ರಮೂರ್ತಿ, ಮುಖಂಡರಾದ ವಾಣೀಶ್, ಕಾರ್ತಿಕ್ ಮರಿಯಪ್ಪ, ಸಂತೋಷ, ಬಾಲಕೃಷ್ಣ, ಶಿವರಾಜ್ ಸಿಂಗ್, ಜಗದೀಶ್ ಇನ್ನಿತರರು ಉಪಸ್ಥಿತರಿದ್ದರು.

ನಾಳೆ ಮೈಸೂರಲ್ಲಿ ರಕ್ತದಾನ ಶಿಬಿರ



ಮೈಸೂರು, ಮಾ.6(ಜಿಎ)–ಮೈಸೂರಿನ ಶಾಂತಿಚಕ್ರ ಯುವ ಬ್ರಿಗೇಡ್ ವತಿಯಿಂದ ಮಾ.8 ರಂದು ಬೆಳಗ್ಗೆ 10 ಗಂಟೆಗೆ ನಗರದ ಸಯ್ಯಾಜಿರಾವ್ ರಸ್ತೆಯ ಕೋಟೆ ಶ್ರೀ ಶಾಂತಿನಾಥ ಬಸದಿಯಲ್ಲಿ ರಕ್ತದಾನ ಶಿಬಿರ ಆಯೋಜಿಸಲಾಗಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಪದಾಧಿಕಾರಿ ಬಿ.ಸೀಮಂತಿನಿ ಈ ವಿಷಯ ತಿಳಿಸಿ, ಶಿಬಿರವನ್ನು ಶಾಸಕ ಟಿ.ಎಸ್.ಶ್ರೀವತ್ಸ ಉದ್ಘಾಟಿಸುವರು. ಮುಖ್ಯ ಅತಿಥಿಗಳಾಗಿ ತಹಸೀಲ್ದಾರ್ ಕೆ.ಎಂ.ಮಹೇಶ್‌ಕುಮಾರ್, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾಧಿಕಾರಿ ಕೆ.ಶಿಲ್ಪಾ, ಜೀವಧಾರ ರಕ್ತನಿಧಿ ಮುಖ್ಯಸ್ಥ ಎಸ್.ಇ.ಗಿರೀಶ್ ಆಗಮಿಸಲಿದ್ದಾರೆ. ಕಾರ್ಯಕ್ರಮದ ಜೆ.ಚಿರಂತ್ ಜೈನ್ ಅಧ್ಯಕ್ಷತೆ ವಹಿಸುವರು. ಈಗಾಗಲೇ ಸುಮಾರು 50 ಮಂದಿ ನೋಂದಣಿ ಮಾಡಿಕೊಂಡಿದ್ದಾರೆ. ಇನ್ನಷ್ಟು ಹೆಚ್ಚುವ ನಿರೀಕ್ಷೆ ಇದೆ. ಶಿಬಿರದಲ್ಲಿ ಎಲ್ಲರಿಗೂ ಹಣ್ಣು ಜ್ಯೂಸ್, ಪ್ರಮಾಣಪತ್ರ ನೀಡಲಾಗುವುದು ಎಂದರು. ಗೋಷ್ಠಿಯಲ್ಲಿ ಎಂ.ಪಿ.ಮೋಹನ್ ಜೈನ್, ಸೃಜನ್ ಎಸ್.ಜೈನ್, ಚಿರಂತ್ ಜೆ. ಜೈನ್, ಅಮೋಘ್‌ಜೈನ್ ಉಪಸ್ಥಿತರಿದ್ದರು.

ಆಹಾರ ಸಂಶೋಧನಾ ಘಟಕ ಪ್ರಾರಂಭಿಸಲು ವಿಶೇಷಚೇತನರಿಗೆ ಶೇ.50ರಷ್ಟು ಸಬ್ಸಿಡಿ

ಸರ್ಕಾರದ ಯೋಜನೆ ಸದ್ಬಳಕೆ ಮಾಡಿಕೊಳ್ಳುವಂತೆ ಪ್ರಾದೇಶಿಕ ಆಯುಕ್ತ ನಿತೇಶ್ ಪಾಟೀಲ್ ಸಲಹೆ



ಮೈಸೂರಿನ ಪುರಭವನದಲ್ಲಿ ವಿಕಾಸ ಪಥದಲ್ಲಿ ಸೌರ ಚಾಲಿತ ಯಂತ್ರಗಳ ಬಗ್ಗೆ ಪ್ರಾದೇಶಿಕ ಆಯುಕ್ತ ನಿತೇಶ್ ಪಾಟೀಲ್ ಅವರು ಮಾಹಿತಿ ಪಡೆದರು.

ಮೈಸೂರು, ಮಾ.6(ಬಿಎಲ್‌ಯು)– ಆಹಾರ ಸಂಶೋಧನಾ ಘಟಕ ಪ್ರಾರಂಭಿಸಲು ವಿಶೇಷಚೇತನರಿಗೆ ಸರ್ಕಾರ ಶೇಕಡ 50ರಷ್ಟು ಸಬ್ಸಿಡಿ ನೀಡಲಿದ್ದು, ಇದನ್ನು ಸಮರ್ಪಕವಾಗಿ ಬಳಸಿಕೊಂಡು ಸ್ವಾವಲಂಬಿಗಳಾಗಬೇಕು ಎಂದು ಮೈಸೂರು ನಗರ ಪಾಲಿಕೆಯ ಆಡಳಿತಾಧಿಕಾರಿಗಳೂ ಆದ ಪ್ರಾದೇಶಿಕ ಆಯುಕ್ತ ನಿತೇಶ್ ಪಾಟೀಲ್ ಸಲಹೆ ನೀಡಿದರು.

ಮೈಸೂರಿನ ಪುರಭವನದಲ್ಲಿ ಇಂದು ವಿಕಾಸ ಪಥದಲ್ಲಿ ವಿಶೇಷ ಚೇತನರ ಹಾಗೂ ಮಹಿಳೆಯರ ಹೆಜ್ಜೆ ಸೌರ ಬೆಂಬಲಿತ ಕಾರ್ಯಾಗಾರ ಹಾಗೂ ಜೀವನೋಪಾಯ ಪರಿಹಾರಗಳ ಪ್ರದರ್ಶನ ಉದ್ಘಾಟಿಸಿ ಮಾತನಾಡಿದ ಅವರು, ಸರ್ಕಾರದ ಇಂತಹ ಯೋಜನೆಯನ್ನು ಬಳಸಿಕೊಂಡು ಉದ್ಯಮಿಗಳಾಗುವುದರ ಜೊತೆಗೆ ಬಹಳಷ್ಟು ಜನರಿಗೆ ನೀವೇ ಉದ್ಯೋಗ ನೀಡಬಹುದು.

ವಿಶೇಷ ಚೇತನರು ಮತ್ತೊಬ್ಬರನ್ನು ಅವಲಂಬಿಸದೆ ಸ್ವಯಂ ಉದ್ಯೋಗ ಹೊಂದಬಹುದು. ಜೊತೆಗೆ ಆರ್ಥಿಕವಾಗಿ ಶಕ್ತಿವಂತರಾಗಬಹುದು ಎಂದರು.

ಸೌರ ಚಾಲಿತ ಯಂತ್ರಗಳಿಂದ ವಿವಿಧ ವಸ್ತುಗಳನ್ನು ತಯಾರಿಸಬಹುದು. ಇದರಲ್ಲಿ ಯಶಸ್ವಿಯಾಗಲು ವಿಶೇಷ ಚೇತನರು ಕೌಶಲ್ಯಾಧಾರಿತ ತರಬೇತಿ ಪಡಯಬೇಕು. ಇದರಿಂದ ಉದ್ಯಮ ಪ್ರಾರಂಭಿಸಿದಾಗ ಉತ್ಪಾದನೆಗೆ ಸಹಾಯಕವಾಗುತ್ತದೆ.

ಮಹಾ ನಗರ ಪಾಲಿಕೆಯಲ್ಲಿ ವಿಶೇಷ ಚೇತನರಿಗೆ ಶೇಕಡ 5 ರಷ್ಟು ಅನುದಾನ ಮೀಸಲಿಟ್ಟಿದೆ. ಅಲ್ಲದೆ ವಿಕಲಚೇತನ ಕಲ್ಯಾಣ ಇಲಾಖೆಯಿಂದ ವಿಶೇಷ ಚೇತನರಿಗೆ ಸರ್ಕಾರ ಹಲವು ಯೋಜನೆ ಪ್ರಕಟಿಸಿದೆ. ಈ ಹಿನ್ನೆಲೆಯಲ್ಲಿ ಸಂಬಂಧಿಸಿದ ಅಧಿಕಾರಿಗಳನ್ನು ಭೇಟಿ ಮಾಡಿ ಅದರ ಬಗ್ಗೆ ಮಾಹಿತಿ ಪಡೆಯಿರಿ. ಈ ಮೂಲಕ ಯೋಜನೆಯನ್ನು ಸದ್ಬಳಕೆ ಮಾಡಿಕೊಂಡು ಆರ್ಥಿಕವಾಗಿ ಜೀವನ ಮಟ್ಟ ಸುಧಾರಿಸಿಕೊಳ್ಳಿ ಎಂದು ಸಲಹೆ ನೀಡಿದರು.

ರಾಜ್ಯದ ಹಲವು ಜಿಲ್ಲೆಗಳಲ್ಲಿ ಸೌರ ಚಾಲಿತ ಯಂತ್ರ ಬಳಸಿಕೊಂಡು ಬಹಳಷ್ಟು ವಿಶೇಷಚೇತನರು ಜೀವನ ಮಾಡುತ್ತಿದ್ದಾರೆ. ಇದೇ ಮಾದರಿಯಲ್ಲಿ ನೀವೂ ಕೂಡ ಉದ್ಯಮಿಗಳಾಗಬೇಕು ಎಂದು ನಿತೇಶ್ ಪಾಟೀಲ್ ಕಿವಿಮಾತು ಹೇಳಿದರು.

ಈ ವೇಳೆ ಮಾತನಾಡಿದ ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ, ಸೌರಚಾಲಿತ ಯಂತ್ರಗಳ ಬಳಕೆ ಬಗ್ಗೆ ಇಂದಿನ ಕಾರ್ಯಾಗಾರದಲ್ಲಿ ಪ್ರಾಯೋಗಿಕವಾಗಿ ಮಾಹಿತಿ ನೀಡುತ್ತಿದ್ದು, ಆಸಕ್ತಿಯಿಂದ ಇದನ್ನು ತಿಳಿದುಕೊಳ್ಳಬೇಕು ಎಂದು ಹೇಳಿದರು.

ಮೈಸೂರು ನಗರ ಪಾಲಿಕೆ ಆಯುಕ್ತ ಶೇಕ್ ಆಸೀಫ್ ತನ್ವೀರ್, ಉಪ ಆಯುಕ್ತೆ ವೀಣಾ, ಜಿಲ್ಲಾ ವಿಕಲ ಚೇತನರ ಕಲ್ಯಾಣ ಅಧಿಕಾರಿ ರಾಘವೇಂದ್ರ, ಸಿಸಿಎನ್ ಟಿ ಯೋಜನೆ ನಿರ್ದೇಶಕ ಕೆ.ಆರ್.ಶಂಕರ್, ಡಿಡಿಎ.ಎಸ್ ಸಿ ರಾಜ್ಯ ಸಂಯೋಜಕ ನರಸಿಂಹಮೂರ್ತಿ ವೇದಿಕೆಯಲ್ಲಿದ್ದರು.

ನಾಳೆ ಆರಾಧ್ಯ ಮಹಾಸಭಾ ಚುನಾವಣೆ

ಸೋಮಶೇಖರ್ ಆರಾಧ್ಯ ತಂಡ ಬೆಂಬಲಿಸಲು ಮನವಿ

ಮೈಸೂರು,ಮಾ.6(ಜಿಎ)–ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಆರಾಧ್ಯ ಮಹಾಸಭಾ ನಿರ್ದೇಶಕರ ಸ್ಥಾನಕ್ಕೆ ಚುನಾವಣೆ ಮಾ.8ರಂದು ಬೆಳಗ್ಗೆ 9 ರಿಂದ ಸಂಜೆ 4ರವರೆಗೆ ಮಹಾಸಭಾ ಆವರಣದಲ್ಲಿ ನಡೆಯಲಿದ್ದು, ತಮ್ಮ ನೇತೃತ್ವದಲ್ಲಿ ಸ್ಪರ್ಧಿಸಿರುವ 15 ಮಂದಿಯ ತಂಡಕ್ಕೆ ಮತದಾರರು ಮತ ನೀಡಿ ಚುನಾಯಿಸಬೇಕೆಂದು ನೇತೃತ್ವ ವಹಿಸಿರುವ ಸೋಮಶೇಖರ ಆರಾಧ್ಯ ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮನವಿ ಮಾಡಿದರು. ಮಹಾಸಭಾದ ಮುಂದಿನ ಅಭಿವೃದ್ಧಿಗೆ ತಾವು ಹಲವಾರು ಯೋಜನೆ ರೂಪಿಸಿದ್ದು, ಇದನ್ನು ಕಾರ್ಯಗತಗೊಳಿಸಲು ಶ್ರಮಿಸುವುದಾಗಿ ತಿಳಿಸಿದರು. ಈ ವೇಳೆ ಸ್ಪರ್ಧಿಗಳಾದ ವಿಶ್ವಾರಾಧ್ಯ, ಚನ್ನವೀರಾರಾಧ್ಯ, ಮಹೇಶಾರಾಧ್ಯ, ಡಿ.ಎಸ್.ಸ್ವಾಮಿ, ಕೆ.ಜಿ.ಸುರೇಶ್, ಪಿ.ನಾಗರತ್ನ ಉಪಸ್ಥಿತರಿದ್ದರು.



ಮೈಸೂರಿನ ಕ್ರೆಸ್ಟ್ ಅಕಾಡೆಮಿಯ 5ನೇ ತರಗತಿ ವಿದ್ಯಾರ್ಥಿ ವಿರಾಜ್ ಯಾದವ್ ಹೆಮ್ಮಿಂಗ್ ಬರ್ಡ್ ಸ್ಪೆಲ್ಲಿಂಗ್ ಬೀ ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಪಡೆದು ಚಿನ್ನದ ಪದಕ ಗಳಿಸಿದ್ದಾರೆ.

ಮಹಿಳಾ ಸಾಧಕಿಯರಿಗೆ ಸ್ತ್ರೀ ಕಸ್ತೂರಿ ಪ್ರಶಸ್ತಿ ಪ್ರದಾನ

ಮೈಸೂರು, ಮಾ. 6– ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಹಾಗೂ ಚಿಗುರು ಸಾಹಿತ್ಯ ಬಳಗದ ಸಂಯುಕ್ತ ಆಶ್ರಯದಲ್ಲಿ ನಾಳೆ (ಮಾ. 7) ಸಂಜೆ 5 ಗಂಟೆಗೆ ವಿಜಯನಗರ 1ನೇ ಹಂತದ ಕನ್ನಡ ಸಾಹಿತ್ಯ ಭವನದಲ್ಲಿ ಸ್ತ್ರೀಶಕ್ತಿ–ಮಹಾಶಕ್ತಿ–ಮಹಿಳಾ ಕವಿಗೋಷ್ಠಿ, ಮಹಿಳಾ ಸಾಧಕಿಯರಿಗೆ ಸ್ತ್ರೀ ಕಸ್ತೂರಿ ಪ್ರಶಸ್ತಿ ಪ್ರದಾನ ಕಾರ್ಯಕ್ರಮ ಏರ್ಪಡಿಸಲಾಗಿದೆ. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಪ್ರಾಸ್ತಾವಿಕ ನುಡಿಗಳನ್ನಾಡುವರು. ಮಹಾಕವಯತ್ರಿ ಡಾ. ಲತಾ ರಾಜಶೇಖರ್ ಕಾರ್ಯಕ್ರಮ ಉದ್ಘಾಟಿಸಲಿದ್ದು, ಹಿರಿಯ ಸಮಾಜ ಸೇವಕ ಡಾ. ಕೆ. ರಘುರಾಮ್ ವಾಜಪೇಯಿ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಕರ್ನಾಟಕ ಸುಗಮ ಸಂಗೀತ ಪರಿಷತ್ ಅಧ್ಯಕ್ಷ ಡಾ. ನಾಗರಾಜು ವಿ.ಭೈರಿ, ಆಧ್ಯಾತ್ಮಿಕ ಚಿಂತಕರಾದ ಶ್ರೀಮತಿ ಸುಬ್ರಹ್ಮಣ್ಯ ಭಾಗವಹಿಸುವರು ಎಂದು ಪ್ರಕಟಣೆ ತಿಳಿಸಿದೆ.

ನಿಧನ



ಟಿ.ಎನ್.ವೆಂಕಟಾಚಲಯ್ಯ

ಮೈಸೂರು, ಮಾ. 6–ಮೈಸೂರಿನ ಬೃಂದಾವನ ಬಡಾವಣೆ ನಿವಾಸಿ ಟಿ.ಎನ್. ವೆಂಕಟಾಚಲಯ್ಯ (91) ಅವರು ಶುಕ್ರವಾರ ಬೆಳಗ್ಗೆ ನಿಧನರಾದರು. ಶ್ರೀಯುತರು ಬಂಬೂಬಜಾರ್‌ನಲ್ಲಿರುವ ಟೈರ್ ಪಾರ್ಕ್ ಮಾಲೀಕ ಕೇಶವ್ ಸೇರಿದಂತೆ ಇಬ್ಬರು ಪುತ್ರರು, ಓರ್ವ ಪುತ್ರಿ ಮತ್ತು ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಗೋಕುಲಂನ ರುದ್ರಭೂಮಿಯಲ್ಲಿ ಶುಕ್ರವಾರ ಮಧ್ಯಾಹ್ನ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ. ಇವರ ನಿಧನಕ್ಕೆ ಮೈಸೂರಿನ ಶ್ರೀ ಸ್ವರ್ಣ ನೃಸಿಂಹ ದತ್ತ ಸಾಯಿ ಪೀಠಿಕಾ ಸೇವಾ ಟ್ರಸ್ಟ್ ತೀವ್ರ ಸಂತಾಪ ಸೂಚಿಸಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

7.3.2026 ಶನಿವಾರ, ಮಳೆ ನಕ್ಷತ್ರ: ಪೂರ್ವಾಭಾದ್ರ 4.03.2026ರಿಂದ 17.03.2026
ವಿಶ್ವಾವಸು ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಕೃಷ್ಣ ಪಕ್ಷ,
ತಿಥಿ: ಚೌತಿ, ನಕ್ಷತ್ರ: ಚಿತ್ತ, ರಾಹುಕಾಲ: ಬೆಳಗ್ಗೆ 9ರಿಂದ 10.30ರವರೆಗೆ

- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಬೆಳಗ್ಗೆ 6.30 ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಮೂತ್ರಪಿಂಡ ಕಾಯಿಲೆ ತಪಾಸಣಾ ಶಿಬಿರ, ವಸಂತ ವೇಮನ ದೇಹ ಶುದ್ಧಿ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ರಿಂದ.
- **ಕಾವೇರಿ ಆಯುರ್ವೇದ ಆಸ್ಪತ್ರೆ:** ಕಣ್ಣಿನಲ್ಲಿ ಸೋಂಕು ಶಿಬಿರ, ಕಣ್ಣಿನಲ್ಲಿ ಮಾಂಸ ಬೆಳವಣಿಗೆ, ಮತ್ತು ಕೆಂಪಾಗುವುದು, ಕಣ್ಣಿನಲ್ಲಿ ಏನೋ ಇರುವ ಅನುಭವ, ಕಣ್ಣಿನಿಂದ ನೀರು ಸೋರುವುದು, ಕಣ್ಣು ತುರಿಸುವುದು, ಶುಷ್ಕನೇತ್ರ, ಮಕ್ಕಳಲ್ಲಿ ಕಂಡುಬರುವ ಕಲಿಕೆಯಲ್ಲಿನ ಸಮಸ್ಯೆಗಳು ಹಾಗೂ ಏಕಾಗ್ರತೆಯ ಕೊರತೆ ಕುರಿತು ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಬೆಳಗ್ಗೆ 10 ರಿಂದ
- **ರಾಮಕೃಷ್ಣನಗರದ ಸುಯೋಗ್ ಆಸ್ಪತ್ರೆ :** ಉಚಿತ ಬೆನ್ನುಮೂಳೆ ಮತ್ತು ನರ ಶಸ್ತ್ರಚಿಕಿತ್ಸಾ ಶಿಬಿರ, ಉಚಿತ ಶ್ವಾಸಕೋಶ ತಪಾಸಣಾ ಶಿಬಿರ, ಸ್ಥಳ: ಸುಯೋಗ್ ಆಸ್ಪತ್ರೆ, ರಾಮಕೃಷ್ಣನಗರ, ಬೆಳಗ್ಗೆ 10 ರಿಂದ.
- **ಶ್ರೀ ಪ್ರಸನ್ನ ನಂಜುಂಡೇಶ್ವರಸ್ವಾಮಿ ದೇವಸ್ಥಾನ, ಧಾರ್ಮಿಕ ದತ್ತಿ ಇಲಾಖೆ:** ಶ್ರೀ ಪ್ರಸನ್ನ ನಂಜುಂಡೇಶ್ವರ ಸ್ವಾಮಿಯವರ ಬ್ರಹ್ಮೋತ್ಸವ, ರಾತ್ರಿ ಕೈಲಾಸ ವಾಹನೋತ್ಸವ, ಶಯನೋತ್ಸವ, ಸ್ಥಳ: ದೇವಸ್ಥಾನದ ಆವರಣ, ಹಳೇ ಸಂತೆಪೇಟೆ.
- **ಹಿಂದೂಸ್ಥಾನ್ ಕಾಲೇಜು :** ಡಾ. ಕೆ.ಸಿ.ಜಿ. ವರ್ಗೀಸ್ ಮೆಮೋರಿಯಲ್ ಬ್ಲಾಕ್ ಉದ್ಘಾಟನಾ ಸಮಾರಂಭ, ಮುಖ್ಯ ಅತಿಥಿಗಳು : ಮೈಸೂರು ವಿಶ್ವವಿದ್ಯಾನಿಲಯ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಗೌರವ ಅತಿಥಿಗಳು : ರೆ. ಗ್ರೇಗೋರಿಯಸ್ ಮಾರ್ ಸ್ಟೆಫಾನೋಸ್ ಎಪಿಸ್ಕೋಪಾ, ಡಾ. ಎಲಿಜಬೆತ್ ವರ್ಗೀಸ್, ಡಾ. ಆನಂದ್ ಜಾಕೋಬ್ ವರ್ಗೀಸ್, ಸ್ಥಳ: ನಂ. 27, 3ನೇ ಹಂತ, ರಾಜರಾಜೇಶ್ವರಿ ದೇವಸ್ಥಾನದ ರಸ್ತೆ, ಜೆ.ಪಿ. ನಗರ, ಬೆಳಗ್ಗೆ 10.30ಕ್ಕೆ.
- **ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್, ಮೈಸೂರು ನಗರ ಘಟಕ, ಸುಪ್ರೀಮ್ ಪಬ್ಲಿಕ್ ಶಾಲೆ :** ದತ್ತಿ ಕಾರ್ಯಕ್ರಮ, ವಿದ್ಯಾರ್ಥಿಗಳಿಗೆ ವಚನ ವಾಚನ ಮತ್ತು ವ್ಯಾಖ್ಯಾನ ಸ್ಪರ್ಧೆ, ಉದ್ಘಾಟನೆ : ಶಾಲೆ ಸಂಸ್ಥಾಪಕ ಅಧ್ಯಕ್ಷ ಎಂ.ಎಲ್. ರವೀಂದ್ರಸ್ವಾಮಿ, ಡಾ. ಕೆ. ಸೌಭಾಗ್ಯವತಿ ಅವರಿಂದ ವಚನಗಳಲ್ಲಿ ನೈತಿಕ ಶಿಕ್ಷಣ ಕುರಿತು ಉಪನ್ಯಾಸ, ಅಧ್ಯಕ್ಷತೆ : ಪರಿಷತ್ ಅಧ್ಯಕ್ಷ ಡಾ. ಜಯಪ್ಪ ಹೊನ್ನಾಳಿ, ಬಹುಮಾನ ವಿತರಣೆ : ಮಾಜಿ ಶಾಸಕ ತೋಂಟದಾರ್ಯ, ಸ್ಥಳ: ಸುಪ್ರೀಮ್ ಪಬ್ಲಿಕ್ ಶಾಲೆ, ಕನಕದಾಸನಗರ, ಬೆಳಗ್ಗೆ 11ಕ್ಕೆ.
- **ಜೆಎಸ್‌ಎಸ್ ಮಹಿಳಾ ಕಾಲೇಜು :** ಶ್ರೇಷ್ಠತೆಗೆ ಪುರಾವೆ ಕುರಿತು ವಿಚಾರ ಸಂಕಿರಣ, ಸಾನ್ನಿಧ್ಯ : ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಉದ್ಘಾಟನೆ : ಜೆಎಸ್‌ಎಸ್ ಮಹಾವಿದ್ಯಾಪೀಠ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ. ಸಿ.ಜಿ. ಬೆಟಸೂರು ಮಠ, ಮುಖ್ಯ ಅತಿಥಿಗಳು : ಜೆಎಸ್‌ಎಸ್ ಅಕಾಡೆಮಿ ಆಫ್ ಹೈಯರ್ ಎಜುಕೇಷನ್ ಅಂಡ್ ರಿಸರ್ಚ್ ಕುಲಪತಿ ಡಾ. ಹೆಚ್. ಬಸವನಗೌಡಪ್ಪ, ಪ್ರಾಸ್ತಾವಿಕ ಭಾಷಣ : ಡಾ. ಶಾರದಾ ರಮೇಶ್, ಅಧ್ಯಕ್ಷತೆ : ವೈದ್ಯಕೀಯ ಶಿಕ್ಷಣ ವಿಭಾಗದ ನಿರ್ದೇಶಕ ಆರ್. ಮಹೇಶ್, ಸ್ಥಳ: ಶ್ರೀ ರಾಜೇಂದ್ರ ಶತಮಾನೋತ್ಸವ ಸಭಾಂಗಣ, ಬೆಳಗ್ಗೆ 11ಕ್ಕೆ.
- **ಚಿನ್ಮಯ ಮಿಷನ್, ಮೈಸೂರು :** ಚಿನ್ಮಯ ಅಮೃತ ಮಹೋತ್ಸವ, ಚಿನ್ಮಯ ಮಿಷನ್‌ನ 75 ವರ್ಷಗಳ ಸಂಭ್ರಮಾಚರಣೆ, ಬೆಳಗ್ಗೆ 9.30 ರಿಂದ ಚಿನ್ಮಯ ಮಿಷನ್ ಶ್ರೀ ಕ್ಷೇತ್ರದಲ್ಲಿ ಕಾರ್ಯಕ್ರಮ, ಗುರುಪಾದುಕಾ ಪೂಜಾ, ಭಜನೆ, ಹನುಮಾನ್ ಚಾಲೀಸಾ ಪಠಣ, ಬೆಳಗ್ಗೆ 11 ರಿಂದ ಶಿವಾನಂದ ಜ್ಞಾನಾಲಯದಲ್ಲಿ ಪ್ರವಚನ ಬ್ರಹ್ಮಚಾರಿಣಿ ತಾರಿಣಿ ಚೈತನ್ಯರಿಂದ, ಸಂಜೆ 5.30 ರಿಂದ ಶ್ರೀ ಶಂಕರಮಠದಲ್ಲಿ ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಸಾನ್ನಿಧ್ಯದಲ್ಲಿ ಭಜನೆ ಮತ್ತು ಸತ್ಸಂಗ.
- **ಶ್ರೀ ಲಕ್ಷ್ಮೀದೇವಿ ಮಾರಮ್ಮ ಜಾತ್ರಾ ಮಹೋತ್ಸವ ಸಮಿತಿ :** ಪುರುಷರು, ಮಹಿಳೆಯರ ವೇಷ ಹಾಗೂ ಇನ್ನಿತರ ವಿಭಿನ್ನ ವೇಷಧರಿಸಿ ಆಚರಿಸುವ ಶ್ರೀ ಲಕ್ಷ್ಮಿದೇವಿ ಮಾರಮ್ಮ ಜಾತ್ರಾ ಮಹೋತ್ಸವ, ಸ್ಥಳ: ರಮ್ಮನಹಳ್ಳಿ ಗ್ರಾಮ, ಮಹದೇವಪುರ ಮುಖ್ಯ ರಸ್ತೆ, ಮಧ್ಯಾಹ್ನ 2 ರಿಂದ.
- **ಸುರುಚಿ ರಂಗಮನೆ :** ಕಥೆ ಕೇಳೋಣ ಬನ್ನಿ ಕಾರ್ಯಕ್ರಮ – 922, ಕಥೆ ಹೇಳುವವರು: ಮೇಘ ಸಮೀರ, ಖ್ಯಾತ ನಟ, ನಿರ್ದೇಶಕ, ರಂಗಕರ್ಮಿ ಹಾಗೂ ನಟನ ರಂಗ ಶಾಲೆಯ ಪ್ರಾಂಶುಪಾಲ, ಸ್ಥಳ: ಸುರುಚಿ ರಂಗಮನೆ, 476, ಚಿತ್ರಭಾನು ರಸ್ತೆ, ಕುವೆಂಪುನಗರ, ಸಂಜೆ 4.30 ರಿಂದ
- **ಪರಂಪರೆ ಸಂಸ್ಥೆ, ಸುಧರ್ಮಾ ಸಂಸ್ಕೃತ ದಿನ ದಿನ ಪತ್ರಿಕೆ:** ಉಪನ್ಯಾಸ ಸರಣಿ, ಅಖಿಲ ಭಾರತೀಯ ಸಾಹಿತ್ಯ ಪರಿಷತ್‌ನಿಂದ ವಾಚನ, ವಿದ್ವಾನ್ ಡಾ.ಹೆಚ್.ವಿ.ನಾಗರಾಜರಾವ್ ಅವರಿಂದ ಶ್ರೀ ವೇದಾಂತ ದೇಶಿಕರಿಂದ ವಿರಚಿತ ಶ್ರೀ ಪಾದುಕಾಸಹಸ್ರಂ ಕುರಿತು ಉಪನ್ಯಾಸ. ಸ್ಥಳ: ಶ್ರೀನಿವಾಸ ಪದ್ಮಜಾರಾವ್ ಸಭಾಂಗಣ, ಬಿಎಸ್‌ಎಸ್ ವಿದ್ಯೋದಯ ಸಂಸ್ಥೆ, ಕೃಷ್ಣಮೂರ್ತಿಪುರಂ, ಸಂಜೆ 6 ಗಂಟೆಗೆ.
- **ಶ್ರೀ ನಾದಬ್ರಹ್ಮ ಸಂಗೀತ ಸಭಾ :** ಶ್ರೀಮತಿ ಗುಣಾಂಬ ನಂಜರಾಜೇ ಅರಸ್ ಸಂಸ್ಮರಣಾ ಕಾರ್ಯಕ್ರಮ, ವಿದ್ವಾನ್ ಎಂ. ನಿಶಾಂತ್ ಅವರಿಂದ ಕರ್ನಾಟಕ ಶಾಸ್ತ್ರೀಯ ಗಾಯನ, ವಿದ್ವಾನ್ ಕೇಶವ ಮೋಹನ್ ಕುಮಾರ್–ಪಿಟೀಲು, ವಿದ್ವಾನ್ ಸಾಯಿ ಶಿವಲಕ್ಷ್ಮೀಕೇಶವ–ಮೃದಂಗ, ವಿದ್ವಾನ್ ಶಮಿತ್ ಎಸ್. ಗೌಡ–ಘಟಂ, ಸ್ಥಳ: ಶ್ರೀ ನಾದಬ್ರಹ್ಮ ಸಂಗೀತ ಸಭಾ, ಶ್ರೀ ವಾಸುದೇವಾಚಾರ್ಯ ಭವನ, ಜೆಎಲ್‌ಬಿ ರಸ್ತೆ, ಸಂಜೆ 6 ರಿಂದ.
- **ಮಾಲಿನಿ ನೃತ್ಯಶಾಲೆ ಮತ್ತು ಸಾಂಸ್ಕೃತಿಕ ಕೇಂದ್ರ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ :** ಹರಿಕೀರ್ತನೆ ಕಥಾಕಾಲಕ್ಷೇಪ, ಡಾ. ವಿ. ಮಾಲಿನಿ ಐಯ್ಯರ್ ಅವರಿಂದ ಭಕ್ತ ಪ್ರಹ್ಲಾದ ನರಸಿಂಹಾವತಾರ ಹರಿಕಥಾ ಕಾರ್ಯಕ್ರಮ, ಸ್ಥಳ: ಶ್ರೀ ಆರ್ಯವೈಶ್ಯ ಬಾಲಕ ಭಕ್ತ ಮಂಡಳಿ, ಕೊತ್ವಾಲ್ ರಾಮಯ್ಯ ರಸ್ತೆ, ಸಂಜೆ 6ಕ್ಕೆ.

ಸಜ್ಜೇಹುಂಡಿಯಲ್ಲಿಂದು, ಮೈಸೂರು ತಾಲೂಕು

- **ಶ್ರೀ ಶನೇಶ್ವರಸ್ವಾಮಿ ಭಕ್ತ ಮಂಡಲಿ:** 17ನೇ ವರ್ಷದ ಶ್ರೀ ಶನೇಶ್ವರಸ್ವಾಮಿ ಆರಾಧನಾ ಮಹೋತ್ಸವ, ಬೆಳಗ್ಗೆ 6.30ರಿಂದ ಶ್ರೀ ಸ್ವಾಮಿಯವರ ಆದಿತ್ಯಾದಿ ನವಗ್ರಹ ಪುರಸ್ಸರ, ದೇವತಾಹೋಮ, ಶ್ರೀ ಶನೇಶ್ವರ ಹೋಮ, ಪೂರ್ಣಾಹುತಿ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ, ಬೆಳಗ್ಗೆ 10.30ರಿಂದ ಶ್ರೀ ಶನೇಶ್ವರಸ್ವಾಮಿ ಉತ್ಸವ ಮೂರ್ತಿ ಮೆರವಣಿಗೆ, ಮಧ್ಯಾಹ್ನ 1ಕ್ಕೆ ಅನ್ನಸಂತರ್ಪಣೆ, ರಾತ್ರಿ 9ಕ್ಕೆ ಶನಿಪ್ರಭಾವ ಅಥವಾ ರಾಜಾವಿಕ್ರಮ ಪೌರಾಣಿಕ ನಾಟಕ ಪ್ರದರ್ಶನ, ಸ್ಥಳ: ಸಜ್ಜೇಹುಂಡಿ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಪತ್ರಿಕಾಧ್ವನಿ– ಮೈಸೂರು ಸೀಮೆಯ ಪತ್ರಕರ್ತರ ಪರಿಚಯಾತ್ಮಕ ಕಾರ್ಯಕ್ರಮ, ಪ್ರಸ್ತುತಿ : ಹಿರಿಯ ಪತ್ರಕರ್ತರಾದ ಡಾ. ಕೂಡ್ಲಿ ಗುರುರಾಜ, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಶಾಂತಲಾ ವಟ್ಟಂ, ವ್ಯಾಖ್ಯಾನ–ಡಾ. ಹೆಚ್. ಎನ್. ಮಂಜುರಾಜ್, 6.50 ರೈತರಿಗೆ ಸಲಹೆ, 7.15 ಭಾವಗೀತೆ, 8.30 ಚಿತ್ರಗೀತೆಗಳು, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಶ್ರೀರಾಮ್ ಭಟ್ – ಹಾಡುಗಾರಿಕೆ, 10.30 ಹಿಂದಿ ಚಿತ್ರಗೀತೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ನಮ್ಮೂರ್ ಹೆಸರು, ಪ್ರಸ್ತುತಿ : ಡಾ. ಮೈಸೂರು ಉಮೇಶ್

ಮಧ್ಯಾಹ್ನ : 12.05 ವನಿತಾ ವಿಹಾರ, 12.35 ದೇವರನಾಮ, 12.45 ಜನಪದ ಸಂಗೀತ, 1.00 ಪ್ರಗತಿ ಪಥ– ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ, 1.20 ಭಾವಗೀತೆಗಳು, 2.40 ಹಿಂದಿ ಚಿತ್ರಗೀತೆಗಳು, 3.00 ಜನಪದ ಸಂಗೀತ, 3.30 ಮಕ್ಕಳ ಮಂಟಪ, 4.00 ನಾಟಕ–ಊರ್ಮಿಳಾ, 4.30 ನೆನಪಿನಂಗಳ (ಧ್ವನಿ ಮುದ್ರಣ ಭಂಡಾರದಿಂದ) ಹಿರಿಯ ರಂಗಕರ್ಮಿ ಪ್ರಸನ್ನ ಅವರೊಂದಿಗೆ ಡಿ. ಎಸ್. ನಾಗಭೂಷಣ ಅವರು ನಡೆಸಿದ್ದ ಸಂವಾದ, 6.50 ಕೃಷಿರಂಗ :ಕಿಸಾನ್ ವಾಣಿ, ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ. ನೈಸರ್ಗಿಕ ಕೃಷಿಯ ಪ್ರಾಮುಖ್ಯತೆ ಕುರಿತು ಸಂವಾದ. ಭಾಗವಹಿಸುತ್ತಾರೆ–ಮಂಡ್ಯ ತಾಲೂಕು ಚನ್ನಪ್ಪನದೊಡ್ಡಿಯ ಕೃಷಿಕ ದಂಪತಿ ಸಿ.ಬಿ. ಕೆಂಪೇಗೌಡ ಹಾಗೂ ಆರ್. ದಿವ್ಯಶ್ರೀ, ಪ್ರಸ್ತುತಿ–ಎನ್. ಕೇಶವ ಮೂರ್ತಿ, 8.00 ಸವಿನೆನಪು, 9.30 ಯುವವಾಣಿ. 10.00 ರಾಷ್ಟ್ರೀಯ ಸಂಗೀತ ಕಾರ್ಯಕ್ರಮ

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಾರ್ಚ್ 7 ಶನಿವಾರ 2026

ಸಂಪುಟ: 46 | ಸಂಚಿಕೆ: 316 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

ರಾಜ್ಯ ಬಜೆಟ್ 2026–27ರಲ್ಲೂ ಸಾಲ ಮಾಡಿಯೇ ಜನಪರ ಯೋಜನೆ ಮಂತ್ರ

ಮಕ್ಕಳಿಗೆ ಸಾಮಾಜಿಕ ಜಾಲತಾಣ ನಿಷಿದ್ಧ

ಬೆಂಗಳೂರು,ಮಾ.6(ಕೆಎಂಶಿ)–ಸಮಾಜಕ್ಕೆ ಕಂಟಕವಾಗಿ ಪರಿಣಮಿಸಿರುವ ಮಕ್ಕಳ ಮೊಬೈಲ್ ಗೀಳಿಗೆ ಬ್ರೇಕ್ ಹಾಕುವುದರೊಂದಿಗೆ ಪಂಚ ಗ್ಯಾರಂಟಿಗಳನ್ನು ಮುಂದುವರೆಸಿಕೊಂಡು ರಾಜ್ಯದಲ್ಲಿ ಶಾಶ್ವತ ಅಭಿವೃದ್ಧಿ ಕಾರ್ಯಗಳನ್ನು ಕೈಗೆತ್ತಿಕೊಳ್ಳುವ, ಬಡವರು ಮತ್ತು ಶ್ರಮಿಕರು ಸ್ವಯಂ ಉದ್ಯೋಗ ಕಲ್ಪಿಸಿಕೊಳ್ಳುವ ಉದ್ದೇಶದಿಂದ ರಾಜ್ಯದ ಸಂಪನ್ಮೂಲದ ಜೊತೆಗೆ 1.32 ಲಕ್ಷ ಕೋಟಿ ರೂ. ಸಾಲದ ಬಜೆಟ್ ಪ್ರಸ್ತಾವನೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ವಿಧಾನಸಭೆಯಲ್ಲಿಂದು ಮಂಡಿಸಿದ್ದಾರೆ.

2026–27ನೇ ಸಾಲಿನ ಮುಂಗಡ ಪತ್ರದಲ್ಲಿ ಜನ ಸಾಮಾನ್ಯರ ಮೇಲೆ ಹೊಸ ತೆರಿಗೆ ಹೇರದಿದ್ದರೂ ಪರೋಕ್ಷವಾಗಿ ಅಬಕಾರಿ, ಮುಂದ್ರಾಂಕ, ಮೋಟಾರು ವಾಹನ ತೆರಿಗೆ ಮೂಲಕ ಸಂಪನ್ಮೂಲ ಕ್ರೂಢೀಕರಣಕ್ಕೆ ಮುಂದಾಗಿದ್ದಾರೆ.

ರಾಜ್ಯದಲ್ಲಿ ಸುದೀರ್ಘ ಅವಧಿಯ ಮುಖ್ಯಮಂತ್ರಿ ಹೆಗ್ಗಳಿಕೆಯ ಸಿದ್ದರಾಮಯ್ಯ ಇಂದು ತಮ್ಮ ದಾಖಲೆಯ 17ನೇ ಬಜೆಟ್ ಮಂಡಿಸಿದರು. ಈಗಾಗಲೇ 16 ಬಜೆಟ್ ಮಂಡಿಸಿ ರಾಜ್ಯದಲ್ಲಿ ಅತ್ಯಧಿಕ ಮತ್ತು ದೇಶದಲ್ಲಿ ಅಧಿಕ ಬಜೆಟ್ ಮಂಡಿಸಿದ ಎರಡನೇ ವ್ಯಕ್ತಿ ಎಂಬ ದಾಖಲೆ ಮಾಡಿದ್ದಾರೆ. ಕರ್ನಾಟಕದ ಇತಿಹಾಸದಲ್ಲಿ ದಾಖಲೆಯ 4 ಲಕ್ಷದ 48 ಸಾವಿರ ಕೋಟಿ ರೂ. ಗಾತ್ರದ ಬಜೆಟ್ ಮಂಡನೆ ಮಾಡಿದ್ದಲ್ಲದೆ, ಸಂಪನ್ಮೂಲ ಕ್ರೋಢೀಕರಣಕ್ಕೆ ಹಲವು ಮಾರ್ಗಗಳ ಜೊತೆಗೆ 1.32 ಲಕ್ಷ ಕೋಟಿ ರೂ. ಸಾಲ ಮಾಡುವ ಪ್ರಸ್ತಾವನೆ ಮಾಡಿದ್ದು ಒಟ್ಟು 22,957 ಕೋಟಿ ರೂ. ಕೊರತೆ ಬಜೆಟ್ ಮಂಡನೆ ಮಾಡಿದ್ದಾರೆ.

ಕನ್ನಡಿಗರ ಆಶೋತ್ತರಗಳಿಗೆ ಅನುಗುಣವಾಗಿ ನಡೆಯಲು ಸರ್ಕಾರ ಬದ್ಧವಾಗಿದೆ ಎಂದು ಘೋಷಿಸುವ ಮೂಲಕ ಬಜೆಟ್ ಭಾಷಣ ಆರಂಭಿಸಿದ ಅವರು, ರಾಷ್ಟ್ರೀಯ, ಅಂತಾರಾಷ್ಟ್ರೀಯ ವಾಣಿಜ್ಯ ಕ್ಷೇತ್ರದಲ್ಲಿ ಕರ್ನಾಟಕ ಪ್ರಮುಖ ಪಾತ್ರ ವಹಿಸಿದೆ ಕೃತಕ ಬುದ್ಧಿಮತ್ತೆಯಲ್ಲಿ ಕ್ರಾಂತಿಕಾರಿ ಬೆಳವಣಿಗೆ ಸಾಧಿಸಿದ್ದೇವೆ. ಕರ್ನಾಟಕದ 50ಕ್ಕೂ ಹೆಚ್ಚು ಉತ್ಪನ್ನಗಳಿಗೆ GI ಮಾನ್ಯತೆ ಸಿಕ್ಕಿದೆ. ವ್ಯಾಪಾರ, ಕೈಗಾರಿಕಾ ಕ್ಷೇತ್ರದಲ್ಲಿ ಸಾಕಷ್ಟು ಅಭಿವೃದ್ಧಿ ಹೊಸ ಉದ್ಯೋಗ ಸೃಷ್ಟಿಗೆ ಯೋಜನೆ ▸ 10ನೇ ಪುಟಕ್ಕೆ

ಪ್ರತಿ ಜಿಲ್ಲೆಯಲ್ಲಿ ಸಹಕಾರ ಕೇಂದ್ರ ಬ್ಯಾಂಕ್ ಸ್ಥಾಪನೆ

38 ಲಕ್ಷ ರೈತರಿಗೆ 30 ಸಾವಿರ ಕೋಟಿ ಸಾಲ

ಬೆಂಗಳೂರು, ಮಾ.6(ಕೆಎಂಶಿ)– ನಬಾರ್ಡ್ ಸಂಸ್ಥೆಯ ಸಲಹೆಯಂತೆ ಪ್ರತಿ ಜಿಲ್ಲೆಯಲ್ಲಿ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ಸ್ಥಾಪಿಸಲು RBIಗೆ ಪ್ರಸ್ತಾವನೆ ಸಲ್ಲಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

2026–27ನೇ ಸಾಲಿನಲ್ಲಿ 38 ಲಕ್ಷ ರೈತರಿಗೆ ಶೂನ್ಯ ಬಡ್ಡಿದರದಲ್ಲಿ 30,000 ಕೋಟಿ ಕೃಷಿ ಸಾಲ ವಿತರಿಸುವ ಗುರಿ ಹೊಂದಲಾಗಿದೆ. ಸಹಕಾರ ಸಂಘಗಳ ನಿಬಂಧಕರ ಹಂತದಲ್ಲಿ ವಿವಿಧ ಸೇವೆಗಳನ್ನು ಜನಸಾಮಾನ್ಯರಿಗೆ ಸುಲಭವಾಗಿ ಒದಗಿಸಲು ದತ್ತಾಂಶವನ್ನು ಆನ್‌ಲೈನ್‌ನಲ್ಲಿ ನಿರ್ವಹಿಸಲು ಕ್ರಮವಹಿಸಲಾಗುವುದು. ಕರ್ನಾಟಕ ರಾಜ್ಯ ಉಗ್ರಾಣ ನಿಗಮವನ್ನು ಆರ್ಥಿಕವಾಗಿ ಸದೃಢಗೊಳಿಸುವಲ್ಲಿ ನಿಗಮದ ಅನುಪಯುಕ್ತ ಆಸ್ತಿಗಳನ್ನು ನಗದೀಕರಣಗೊಳಿಸಲು ಉದ್ದೇಶಿಸಲಾಗಿದೆ ಎಂದರು.



ಶುಕ್ರವಾರ ಮುಖ್ಯಮಂತ್ರಿ ಸಿದ್ದರಾಮಯ್ಯ ದಾಖಲೆಯ 17ನೇ ಬಜೆಟ್ ಮಂಡಿಸಿದರು.

ಮೈಸೂರು 2ನೇ ಐಟಿ ಸಿಟಿ

ತವರು ಜಿಲ್ಲೆಗೆ ಭರಪೂರ ಕೊಡುಗೆ ನೀಡಿದ ಸಿಎಂ

ಮೈಸೂರು,ಮಾ.6–ಮುಖ್ಯಮಂತ್ರಿ ಸಿದ್ದರಾಮಯ್ಯನವರು ತಮ್ಮ ದಾಖಲೆಯ 17ನೇ ಬಜೆಟ್‌ನಲ್ಲಿ ತವರು ಜಿಲ್ಲೆಗೆ ಭರಪೂರ ಕೊಡುಗೆ ನೀಡಿದ್ದಾರೆ.



ತೋಟಗಾರಿಕೆ, ಹೈನುಗಾರಿಕೆ, ಆರೋಗ್ಯ, ಶಿಕ್ಷಣ, ಕೈಗಾರಿಕೆ, ಮಕ್ಕಳು ಮತ್ತು ಮಹಿಳಾಭಿವೃದ್ಧಿ ಸೇರಿದಂತೆ ವಿವಿಧ ವಲಯಗಳಲ್ಲೂ ಮೈಸೂರಿಗೆ ಆದ್ಯತೆ ದೊರೆತಿದೆ. ಹೆಚ್ಚಿನ ಪ್ರವಾಸಿಗರು ಹಾಗೂ ಪರಿಸರ ಪ್ರೇಮಿಗಳನ್ನು ಆಕರ್ಷಿಸುವ ದೃಷ್ಟಿಯಿಂದ ಮೈಸೂರು ನಗರದ ಲಿಂಗಾಂಬುಧಿ ಸಸ್ಯತೋಟವನ್ನು ಸಮಗ್ರವಾಗಿ ಅಭಿವೃದ್ಧಿ. ನಂಜನಗೂಡು ತಾಲೂಕಿನ ತಾಂಡವಪುರದಲ್ಲಿ 'ಸಿಲ್ಕ್ ಪಾರ್ಕ್ ಸ್ಥಾಪನೆ'. ಸ್ಥಳೀಯ ಮೇಕೆ ತಳಿಗಳ ಉನ್ನತೀಕರಣಕ್ಕಾಗಿ ಮೈಸೂರಿನಲ್ಲಿ ಬೋಯರ್ ಮೇಕೆ ತಳಿ ಸಂವರ್ಧನಾ ಕೇಂದ್ರ ಹಾಗೂ ಪಿರಿಯಾಪಟ್ಟಣ ತಾಲೂಕಿನ ಕಂಪಲಾಪುರದಲ್ಲಿ ಬಂಡೂರು ಕುರಿ ತಳಿ ಸಂವರ್ಧನಾ ಕೇಂದ್ರದ ಸಮಗ್ರ ಅಭಿವೃದ್ಧಿ ಕರ್ನಾಟಕ ರಾಜ್ಯ ಉಗ್ರಾಣ ನಿಗಮವನ್ನು ಆರ್ಥಿಕವಾಗಿ ಸದೃಢಗೊಳಿಸುವ ನಿಟ್ಟಿನಲ್ಲಿ ಮೈಸೂರಿನ ಬಂಬೂಬಜಾರ್‌ನಲ್ಲಿರುವ ಕೇಂದ್ರಗಳಲ್ಲಿ ಸಾರ್ವಜನಿಕ ಖಾಸಗಿ ಸಹಭಾಗಿತ್ವದಲ್ಲಿ ವಾಣಿಜ್ಯ ಸಂಕೀರ್ಣ ನಿರ್ಮಾಣ. ಮೈಸೂರಿನ ನರಸಿಂಹರಾಜ ಕ್ಷೇತ್ರದಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಸ್ಥಾಪನೆ. ಮೈಸೂರಿನ ಕೆ.ಆರ್.ಎಸ್. ರಸ್ತೆಯಲ್ಲಿರುವ, 400 ಹಾಸಿಗೆಗಳ ಸಾಮರ್ಥ್ಯದ ಜಯದೇವ ಹೃದ್ರೋಗ ಆಸ್ಪತ್ರೆಯನ್ನು 600 ಹಾಸಿಗೆಗಳ ಸಾಮರ್ಥ್ಯದ ಆಸ್ಪತ್ರೆಯನ್ನಾಗಿ 180 ಕೋಟಿ ವೆಚ್ಚದಲ್ಲಿ ಮೇಲ್ದರ್ಜೆಗೇರಿಸುವುದು. ಮೈಸೂರಿನಲ್ಲಿ ಪೆರಿಫೆರಲ್ ಕ್ಯಾನ್ಸರ್ ಕೇಂದ್ರದ ಕಾಮಗಾರಿ ಪೂರ್ಣಗೊಳಿಸಲು ಅನುದಾನ * ಬೆಂಗಳೂರಿನ ದಟ್ಟಣೆ ಕಡಿಮೆ ಮಾಡಲು ಹಾಗೂ ವಿಕೇಂದ್ರೀಕೃತ ಆರ್ಥಿಕತೆಯನ್ನು ಪ್ರೋತ್ಸಾಹಿಸಲು ಮೈಸೂರು ನಗರವನ್ನು ರಾಜ್ಯದ 2ನೇ ಐಟಿ ಸಿಟಿಯನ್ನಾಗಿ ಅಭಿವೃದ್ಧಿಪಡಿಸುವುದು.

* ಮೈಸೂರಿನಲ್ಲಿ ಏರೋಸ್ಪೇಸ್ ಕೈಗಾರಿಕೆಗಳನ್ನು ಉತ್ತೇಜಿಸಲು ಮೈಸೂರು ವಿಮಾನನಿಲ್ದಾಣದ ಹತ್ತಿರ ಏರೋಸ್ಪೇಸ್ ಪಾರ್ಕ್ ಅನ್ನು ಕೆಐಎಡಿಬಿಯಿಂದ ವತಿಯಿಂದ ಅಭಿವೃದ್ಧಿಪಡಿಸುವುದು * ಮೈಸೂರಿನಲ್ಲಿ ಉದ್ಯಮಿಗಳಿಗೆ ಇನ್ಕ್ಯುಬೇಸನ್ ಸೌಲಭ್ಯಗಳನ್ನು ಒದಗಿಸಲು ಕಿಯೋನಿಕ್ಸ್ ಸಂಸ್ಥೆ ಮೂಲಕ ಪ್ಲಗ್–ಅಂಡ್–ಪ್ಲೇ ಸೌಲಭ್ಯದ ಲೀಪ್ ಲ್ಯಾಬ್ಸ್ ಸ್ಥಾಪನೆ * ಮೈಸೂರಿನ ಕೆಲವು ಭಾಗಗಳಲ್ಲಿ ಯುಜಿಡಿ ನಿರ್ಮಾಣ ಕಾಮಗಾರಿ * ಬೆಂಗಳೂರು ಮತ್ತು ಮೈಸೂರು ನಗರದ ಧೋಬಿಘಾಟ್‌ಗಳಲ್ಲಿ ಮಡಿವಾಳ ಸಮಾಜದವರಿಗೆ ವಾಷಿಂಗ್ ಮಷಿನ್, ಡ್ರೈಯರ್ ಮತ್ತು ಐರನಿಂಗ್ ಮೆಷಿನ್ ಮೊದಲಾದ ಸಾಮಗ್ರಿಗಳನ್ನು ಒಳಗೊಂಡಂತೆ ತಲಾ 75 ಲಕ್ಷ ವೆಚ್ಚದಲ್ಲಿ ಆಧುನಿಕ ಲ್ಯಾಂಡ್ರಿ ಸ್ಥಾಪನೆ.

* ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಉದ್ಯೋಗಸ್ಥ ಮಹಿಳೆಯರಿಗೆ ತಲಾ 50 ಸಂಖ್ಯಾಬಲದ 10 ವಸತಿ ನಿಲಯಗಳನ್ನು ಬೆಂಗಳೂರು, ಮೈಸೂರು, ಹುಬ್ಬಳ್ಳಿ–ಧಾರವಾಡ, ಮಂಗಳೂರು, ಬೆಳಗಾವಿ ಮತ್ತು ಕಲಬುರಗಿಯಲ್ಲಿ ಪ್ರಾರಂಭ. * ಬೆಂಗಳೂರು, ಮೈಸೂರು, ಮಂಗಳೂರು, ಧಾರವಾಡ, ಬೆಳಗಾವಿ, ಕಲಬುರಗಿ, ದಾವಣಗೆರೆ, ಶಿವಮೊಗ್ಗ ಹಾಗೂ ಬಳ್ಳಾರಿಯಲ್ಲಿ 150 ಸಂಖ್ಯಾಬಲದ 50 ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ಸ್ಥಾಪನೆ * ಮೈಸೂರಿನಲ್ಲಿ ಷ್ನೈಡರ್ ಎಲೆಕ್ಟ್ರಿಕ್ ಯೂತ್ ಇಂಪ್ಯಾಕ್ಟ್ ಕೇಂದ್ರ* ಮೈಸೂರಿನಲ್ಲಿ ಪ್ಯಾರಾ ಮೆಡಿಕಲ್ ಕೋರ್ಸ್ ಆರಂಭ* ಸಿದ್ಧಾರ್ಥ ನಗರದಲ್ಲಿರುವ ಚಾಮರಾಜೇಂದ್ರ ದೃಶ್ಯ ಕಲಾ ಕಾಲೇಜು (ಕಾವಾ) ಆವರಣದಲ್ಲಿ ಸುಸಜ್ಜಿತ ಕಲಾ ಗ್ಯಾಲರಿ ಸಭಾಂಗಣ, ಲ್ಯಾಂಡ್ ಸ್ಕೇಪಿಂಗ್ ಶಿಲ್ಪಕಲಾ ಕೃತಿಗಳ ಪೆಡೆಸ್ಟಲ್‌ಗಳ ನಿರ್ಮಾಣ ಹಾಗೂ ಮೂಲಸೌಕರ್ಯಕ್ಕೆ 2 ಕೋಟಿ ಅನುದಾನ. * ವರುಣ, ಹೆಚ್.ಡಿ. ಕೋಟೆ, ಪಿರಿಯಾಪಟ್ಟಣ, ನಂಜನಗೂಡು, ಕೆ.ಆರ್.ನಗರ ವಿಧಾನ ಸಭಾ ಕ್ಷೇತ್ರದಲ್ಲಿ ಶ್ರಮಿಕ ವಸತಿ ಶಾಲೆ. ▸ 10ನೇ ಪುಟಕ್ಕೆ


15 ಸಾವಿರ ಬೋಧಕರ ನೇಮಕ



ಬೆಂಗಳೂರು: 2026–27ನೇ ಸಾಲಿನಲ್ಲಿ ಶಾಲಾ–ಕಾಲೇಜುಗಳಲ್ಲಿ ಖಾಲಿ ಇರುವ 15,000 ಬೋಧಕ ಹುದ್ದೆಗಳನ್ನು ಭರ್ತಿ ಮಾಡಲಾಗುವುದು ಎಂದು ಸಿಎಂ ಸಿದ್ದರಾಮಯ್ಯ ಘೋಷಿಸಿದ್ದಾರೆ. ಸರ್ಕಾರಿ ಪ್ರಾಥಮಿಕ, ಪ್ರೌಢಶಾಲೆಗಳು ಮತ್ತು ಪದವಿ ಪೂರ್ವ ಕಾಲೇಜುಗಳಲ್ಲಿ ಹೊಸ ಕೊಠಡಿಗಳ ನಿರ್ಮಾಣ ಮತ್ತು ದುರಸ್ತಿ ಕಾರ್ಯಗಳಿಗೆ 565 ಕೋಟಿ ರೂ., ಶೌಚಾಲಯ ನಿರ್ಮಾಣಕ್ಕೆ 75 ಕೋಟಿ ರೂ. ಮತ್ತು ಶಾಲೆಗಳಲ್ಲಿ ಪೀಠೋಪಕರಣಗಳ ಖರೀದಿಗೆ 25 ಕೋಟಿ ರೂ., ಸರ್ಕಾರಿ ಪ್ರಾಥಮಿಕ– ಪ್ರೌಢಶಾಲೆಗಳು ಮತ್ತು ಪದವಿ ಪೂರ್ವ ಕಾಲೇಜುಗಳ ನಿರ್ವಹಣೆಗೆ 125 ಕೋಟಿ ರೂ. ಅನುದಾನ ನೀಡಲಾಗುವುದು. ವಿದ್ಯಾರ್ಥಿಗಳ ಆರೋಗ್ಯ ವ್ಯಕ್ತಿತ್ವ ಮತ್ತು ಭವಿಷ್ಯವನ್ನು ರೂಪಿಸುವಲ್ಲಿ ಶಾಲೆಗಳು, ▸ 10ನೇ ಪುಟಕ್ಕೆ

ಮೇಕೆದಾಟು ಪರಿಷ್ಕೃತ ಯೋಜನಾ ವರದಿ ಶೀಘ್ರ ಕೇಂದ್ರಕ್ಕೆ ಸಲ್ಲಿಕೆ

ಬೆಂಗಳೂರು, ಮಾ.6(ಕೆಎಂಶಿ)–ಬಹು ನಿರೀಕ್ಷಿತ ಮೇಕೆದಾಟು ಪರಿಷ್ಕೃತ



ವಿಸ್ತೃತ ಯೋಜನಾ ವರದಿಯನ್ನು ಶೀಘ್ರವೇ ಸಿದ್ಧಪಡಿಸಿ ಅನುಮೋದನೆ ಹಾಗೂ ಅರಣ್ಯ ಪ್ರದೇಶದ ಬಳಕೆಗೆ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗುವುದು ಎಂದು ಸಿಎಂ ಸಿದ್ದರಾಮಯ್ಯ ವಿಧಾನಸಭೆಯಲ್ಲಿ ಪ್ರಕಟಿಸಿದ್ದಾರೆ.

2026–27ನೇ ಸಾಲಿನ ಮುಂಗಡಪತ್ರದಲ್ಲಿ ಪ್ರಸ್ತಾಪ ಮಾಡಿರುವ ಅವರು, ಮೇಕೆದಾಟು ಯೋಜನೆಗೆ ಸಂಬಂಧಿಸಿದಂತೆ ತಮಿಳುನಾಡು, ಸರ್ವೋಚ್ಚ ನ್ಯಾಯಾಲಯದಲ್ಲಿ ಸಲ್ಲಿಸಿದ್ದ ತಕರಾರು ಅರ್ಜಿಗಳು ವಜಾಗೊಂಡಿರುವುದು ಕರ್ನಾಟಕಕ್ಕೆ ಮಹತ್ವದ ಕಾನೂನು ಜಯವಾಗಿರುವ ಹಿನ್ನೆಲೆಯಲ್ಲಿ ಯೋಜನಾ ಅನುಷ್ಠಾನಕ್ಕೆ ಸಕಲ ಸಿದ್ಧತೆ ಮಾಡಿದ್ದೇವೆ ಎಂದು ಹೇಳಿದರು.

ಎತ್ತಿನಹೊಳೆ 2ನೇ ಹಂತ ಶೀಘ್ರ ಆರಂಭ: ಎತ್ತಿನಹೊಳೆ ಸಮಗ್ರ ಕುಡಿಯುವ ನೀರಿನ ಯೋಜನೆಯ 2ನೇ ಹಂತದಲ್ಲಿ ಬಾಕಿ ಇರುವ 18.73 ಕಿ.ಮೀ ಉದ್ದದ ಕಾಲುವೆ ಕಾಮಗಾರಿಗಳನ್ನು ಶೀಘ್ರವೇ ಪೂರ್ಣಗೊಳಿಸಲಾಗುವುದು. ಹೆಚ್ಚುವರಿಯಾಗಿ ನೀರು ಸಂಗ್ರಹಿಸಿ ▸ 10ನೇ ಪುಟಕ್ಕೆ

ಕಿಕ್ ಮೇಲೆ ಸುಂಕ ನಿರ್ಣಯ; ಮದ್ಯಪ್ರಿಯರಿಗೆ ಶಾಕ್

● ಮುಂದಿನ ಏಪ್ರಿಲ್‌ನಿಂದ ಬೆಲೆ ಏರಿಕೆ ಬಿಸಿ ● 45 ಸಾವಿರ ಕೋಟಿ ಸಂಗ್ರಹ ಗುರಿ

ಬೆಂಗಳೂರು, ಮಾ.6– ಸಿಎಂ ಸಿದ್ದರಾಮಯ್ಯ ಮದ್ಯ ಪ್ರಿಯರಿಗೆ ಸುಂಕದ ಶಾಕ್ ನೀಡಿದ್ದಾರೆ.



ಮದ್ಯದ ಮೇಲೆ ವಿಧಿಸುವ ತೆರಿಗೆ ಸ್ವರೂಪವನ್ನು ಬದಲಾಯಿಸುವ ಮೂಲಕ ರಾಜ್ಯದ ರಾಜಸ್ವ ಸಂಗ್ರಹವನ್ನು ಗಣನೀಯವಾಗಿ ಏರಿಕೆ ಮಾಡಲು ನಿರ್ಧರಿಸಿದ್ದಾರೆ. ಮದ್ಯದಲ್ಲಿರುವ ಆಲ್ಕೋಹಾಲ್ ಅಂಶ ಆಧರಿಸಿ ತೆರಿಗೆ ವಿಧಿಸುವುದು, ಎಕ್ಸ್–ಫ್ಯಾಕ್ಟರಿ ದರಪಟ್ಟಿಯ ಆಧಾರದ ಮೇಲೆ ಮದ್ಯದ ಬೆಲೆಯನ್ನು ಒಂದೇ ಬಾರಿಗೆ ಏರಿಸುವ ಬದಲು ಹಂತ ಹಂತವಾಗಿ ಹೆಚ್ಚಿಸಲು ಸರ್ಕಾರ ನಿರ್ಧರಿಸಿದೆ. 2026–27ರ ವೇಳೆಗೆ 45,000 ಕೋಟಿ ರಾಜಸ್ವ ಸಂಗ್ರಹಿಸುವ ಗುರಿ ಹೊಂದಲಾಗಿದೆ. ಮದ್ಯಪಾನದ ದುಷ್ಪರಿಣಾಮಗಳು ಸಮಾಜದ ಮೇಲೆ ಉಂಟು ಮಾಡುವ ಹಾನಿಯನ್ನು ಗಮನದಲ್ಲಿಟ್ಟುಕೊಂಡು ಜಾಗತಿಕ ಮಟ್ಟದಲ್ಲಿ ಮದ್ಯದ ಅಂಶಗಳನ್ನು ▸ 10ನೇ ಪುಟಕ್ಕೆ

ಮೈಸೂರು ಉದಯಗಿರಿ ದಕ್ಷಿಣ ಸೇರಿ 12 ಹೊಸ ಪೊಲೀಸ್ ಠಾಣೆ ಘೋಷಣೆ

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಗೃಹ ಇಲಾಖೆ ಸೇರಿದಂತೆ ಹಲವು ಇಲಾಖೆಗಳಿಗೆ ಭರಪೂರ ಅನುದಾನ ನೀಡಿದ್ದಾರೆ. ಹೆಚ್ಚುತ್ತಿರುವ ಜನಸಂಖ್ಯೆ ಮತ್ತು ಕೈಗಾರಿಕಾ ಬೆಳವಣಿಗೆಯನ್ನು ಗಮನದಲ್ಲಿಟ್ಟುಕೊಂಡು, ನಾಗರಿಕರ ಸುರಕ್ಷತೆಗಾಗಿ ರಾಜ್ಯದಲ್ಲಿ 12 ಹೊಸ ಪೊಲೀಸ್ ಠಾಣೆಗಳನ್ನು ಸ್ಥಾಪಿಸುವುದಾಗಿ ಘೋಷಿಸಿದ್ದಾರೆ. ಇದರಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಹಾಗೂ ಸಂಚಾರಿ ಪೊಲೀಸ್ ಠಾಣೆಗಳು ಸೇರಿವೆ. ಹೊಸ ಠಾಣೆಗಳಿಗೆ ಸುಸಜ್ಜಿತ ಕಟ್ಟಡ ಮತ್ತು ಆಧುನಿಕ ಉಪಕರಣಗಳನ್ನು ಒದಗಿಸಲು ಸಿಎಂ ಸಿದ್ದರಾಮಯ್ಯ ಅವರು ಬಜೆಟ್‌ನಲ್ಲಿ ಅನುದಾನ ಮೀಸಲಿಟ್ಟಿದ್ದು, ಹೊಸ ಠಾಣೆಗಳ ಕಾರ್ಯಾಚರಣೆಗಾಗಿ ಅಗತ್ಯವಿರುವ ಪೊಲೀಸ್ ಸಿಬ್ಬಂದಿಗಳ ನೇಮಕಾತಿ ಪ್ರಕ್ರಿಯೆಗೂ ಚಾಲನೆ ನೀಡಲಾಗುವುದು. ದೊಡ್ಡಬಳ್ಳಾಪುರ, ಹಿರಿಯೂರು ಮತ್ತು ಗುಂಡ್ಲುಪೇಟೆಯಂತಹ ಬೆಳೆಯುತ್ತಿರುವ ನಗರಗಳಲ್ಲಿ ಸಂಚಾರ ದಟ್ಟಣೆ ನಿಯಂತ್ರಿಸಲು ಸಂಚಾರಿ ಠಾಣೆಗಳಿಗೆ ಒತ್ತು ನೀಡಲಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯ ಮಾಣಿ ಪೊಲೀಸ್ ಠಾಣೆ, ಸಜಿಪನಡು ಪೊಲೀಸ್ ಠಾಣೆ, ಬೆಳಗಾವಿ ಜಿಲ್ಲೆಯ ಯರಗಟ್ಟಿ ಪೊಲೀಸ್ ಠಾಣೆ, ಯಾದಗಿರಿ ಜಿಲ್ಲೆಯ ಕಕ್ಕೇರಾ ಪೊಲೀಸ್ ಠಾಣೆ, ದಾವಣಗೆರೆ ಜಿಲ್ಲೆಯ ಆನಗೋಡು ಪೊಲೀಸ್ ಠಾಣೆ, ಹಾವೇರಿ ಜಿಲ್ಲೆಯ ತಿಳುವಳ್ಳಿ ಪೊಲೀಸ್ ಠಾಣೆ, ಮೈಸೂರು ಜಿಲ್ಲೆಯ ಉದಯಗಿರಿ ದಕ್ಷಿಣ ಪೊಲೀಸ್ ಠಾಣೆ, ವಿಜಯಪುರ ಜಿಲ್ಲೆಯ ಮುದ್ದೇಬಿಹಾಳ ಗ್ರಾಮಾಂತರ ಠಾಣೆ, ಕೋಲಾರ ಜಿಲ್ಲೆಯ ನರಸಾಪುರ ಕೈಗಾರಿಕಾ ವಲಯದಲ್ಲಿ ಪೊಲೀಸ್ ಠಾಣೆ ಆರಂಭಿಸಲಾಗುತ್ತಿದೆ.



ಗುಂಡ್ಲುಪೇಟೆ ಇನ್ನಿತರ ನಗರಗಳಲ್ಲಿ ಸಂಚಾರ ಪೊಲೀಸ್ ಠಾಣೆಗೆ ಅಸ್ತು

ಗೃಹಬಳಕೆ 60 ರೂ., ವಾಣಿಜ್ಯ ಸಿಲಿಂಡರ್ 114 ರೂ. ಹೆಚ್ಚಳ

ಮೈಸೂರು, ಮಾ.6– ಅಮೆರಿಕಾ–ಇಸ್ರೇಲ್ ಹಾಗೂ ಇರಾನ್ ನಡುವಿನ ಯುದ್ಧದ ಹಿನ್ನಲೆಯಲ್ಲಿ ತೈಲ ಕಂಪನಿಗಳು ಇಂದು ಮಧ್ಯರಾತ್ರಿಯಿಂದಲೇ ಜಾರಿಗೆ ಬರುವಂತೆ 14.2 ಕೆಜಿ ತೂಕದ ಗೃಹಬಳಕೆ 60 ರೂ., ವಾಣಿಜ್ಯ ಸಿಲಿಂಡರ್ 114 ರೂ. ಏರಿಕೆ ಮಾಡಿವೆ.

ಈ ಮೊದಲು 857.50 ರೂ. ಇದ್ದ ಗೃಹಬಳಕೆ ಸಿಲಿಂಡರ್ ಬೆಲೆ ಈಗ 917.50 ಏರಿಕೆ ಆಗಿದ್ದು, ವಾಣಿಜ್ಯ 19 ಕೆಜಿ ತೂಕದ ಸಿಲಿಂಡರ್ 1938.50 (ಹಳೆ ದರ 1824) ರೂ., 35 ಕೆಜಿ 3071.50 (ಹಳೆ ದರ 3360.50), 47.5 ಕೆಜಿ 4842.50 (ಹಳೆ ದರ 4556.50) ರೂ.ಗಳಿಗೆ ಏರಿಕೆಯಾಗಿದೆ. ಸಬ್ಸಿಡಿ 5 ಕೆಜಿ ಸಿಲಿಂಡರ್ 576.50 (ಹಳೆ ದರ 548) ರೂ. ಏರಿಕೆಯಾಗಿರುವುದಾಗಿ ಎಚ್‌ಪಿಸಿಎಲ್ ಪ್ರಕಟಣೆಯಲ್ಲಿ ತಿಳಿಸಿದೆ.

ಪ್ರವಾಸ ಮಾರ್ಗದರ್ಶಕರಿಗೆ ಕೌಶಲ್ಯ ತರಬೇತಿಗೆ ಡಿಪ್ಲೋಮಾ ಕೋರ್ಸ್

ಬೆಂಗಳೂರು, ಮಾ.6– ಕರ್ನಾಟಕದ ಕರಾವಳಿ ಜಿಲ್ಲೆಗಳ ವಿಶೇಷ ಪ್ರವಾಸೋದ್ಯಮ ಸಾಮರ್ಥ್ಯವನ್ನು ಸದುಪಯೋಗಪಡಿಸಿಕೊಳ್ಳಲು 'ಸಮಗ್ರ ಕರಾವಳಿ ಪ್ರವಾಸೋದ್ಯಮ ಅಭಿವೃದ್ಧಿ ಯೋಜನೆ' ರೂಪಿಸಲಾಗುವುದು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

2026–2027ನೇ ಸಾಲಿನ ಬಜೆಟ್ ಮಂಡಿಸಿದ ಅವರು, ಈ ತಾಣಗಳಲ್ಲಿ ಸೀ ಪ್ಲೇನ್ (Sea Plane) ಹಾಗೂ ಹೆಲಿ ಟ್ಯಾಕ್ಸಿ (Heli Taxi)ಗಳ ಮುಖಾಂತರ ಸಂಪರ್ಕ ಕಲ್ಪಿಸುವುದರ ಜೊತೆಗೆ ಜಾಯ್ ರೈಡ್ ಹಾಗೂ ರಿವರ್ ಕ್ರೂಸ್ ಚಟುವಟಿಕೆಗಳನ್ನು ಪ್ರೋತ್ಸಾಹಿಸಲಾಗುವುದು ಎಂದರು.

ರಾಜ್ಯಕ್ಕೆ ಆಗಮಿಸುವ ಎಲ್ಲ ಪ್ರವಾಸಿಗಳಿಗೆ ಸಕಾರಾತ್ಮಕ ಅನುಭವ ನೀಡುವ ಸಲುವಾಗಿ ಟ್ಯಾಕ್ಸಿ ಚಾಲಕರು, ಆಟೋ ಚಾಲಕರು ಹಾಗೂ ಭದ್ರತಾ ಪೊಲೀಸ್ ಸಿಬ್ಬಂದಿಗೆ ಮೃದು ಕೌಶಲ್ಯ ತರಬೇತಿ ನೀಡಲಾಗುತ್ತದೆ ಮತ್ತು 1 ಕೋಟಿ ಒದಗಿಸಲಾಗುವುದು. ಪ್ರವಾಸ ಮಾರ್ಗದರ್ಶಕರಿಗೆ ಆಯ್ದ ವಿಶ್ವವಿದ್ಯಾಲಯಗಳಲ್ಲಿ ಕೌಶಲ್ಯ ತರಬೇತಿ ನೀಡಲು ಡಿಪ್ಲೋಮಾ ಕೋರ್ಸ್ ಅನ್ನು ಪ್ರಾರಂಭಿಸಲಾಗುವುದು ಎಂದು ಅವರು ತಿಳಿಸಿದರು.

ಪ್ರಮುಖ ಪ್ರವಾಸಿ ತಾಣವಾದ ಗದಗ–ಕಪ್ಪತಗುಡ್ಡ–ಲಕ್ಕುಂಡಿ ಪ್ರವಾಸೋದ್ಯಮ ಸರ್ಕ್ಯೂಟ್ ▸ 10ನೇ ಪುಟಕ್ಕೆ

3 ಗಂಟೆ 36 ನಿಮಿಷ ಬಜೆಟ್ ಮಂಡನೆ; ಸೋಮವಾರಕ್ಕೆ ಕಲಾಪ ಮುಂದೂಡಿಕೆ

ವಚನಕಾರರು, ಕವಿಮಹನೀಯರ ಸಾಲುಗಳ ಉಲ್ಲೇಖ

ಬೆಂಗಳೂರು, ಮಾ.6– 2026–2027ನೇ ಸಾಲಿನ ರಾಜ್ಯ ಬಜೆಟ್ ಮಂಡನೆ ಮುಕ್ತಾಯಗೊಂಡ ಬಳಿಕ ವಿಧಾನಸಭೆ ಸ್ಪೀಕರ್ ಯು.ಟಿ. ಖಾದರ್ ಅವರು ವಿಧಾನಮಂಡಲ ಜಂಟಿ ಅಧಿವೇಶನವನ್ನು ಸೋಮವಾರಕ್ಕೆ ಮುಂದೂಡಿದರು.

ಈ ಬಾರಿಯ ಬಜೆಟ್ ಅನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸುಮಾರು 3 ಗಂಟೆ 36 ನಿಮಿಷಗಳ ಕಾಲ ಓದಿದರು.

ಬಜೆಟ್ ಭಾಷಣದ ಆರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಚನಕಾರ್ತಿ ಅಕ್ಕಮ್ಮ ಅವರ 'ಧನಶೀಲ ಮನಶೀಲ ತನುಶೀಲ, ಸರ್ವಮಯ ದೃಕ್ಕಿಂಗೆ ಕಾಂಬುದೆಲ್ಲವು ಶೀಲ, ಇಂತೀ ವ್ರತಸಂಪದವೆಲ್ಲವೂ ಅದಾರ ಕುರಿತು ಮಾಡುವ ನೇಮ ಎಂಬುದು ತಾನರಿಯಬೇಕು' ಸಾಲುಗಳನ್ನು ಉಲ್ಲೇಖಿಸಿದರು.

ಜಲಸಂಪನ್ಮೂಲ ಇಲಾಖೆಯ ಯೋಜನೆಗಳಿಗೆ ಸಂಬಂಧಿಸಿದಂತೆ ಬಜೆಟ್ ಭಾಷಣದಲ್ಲಿ ಕೆ.ಪಿ.ಪೂರ್ಣಚಂದ್ರ ತೇಜಸ್ವಿ ಅವರ 'ನದಿಗಳು ನಮ್ಮೆಲ್ಲ ಮಾನವ ಸಮಾಜ ಮತ್ತು ಸಂಸ್ಕೃತಿಗಳ ಜೀವವಾಹಿನಿ. ಅವು ಕೊಳಕಾದರೆ, ಅವು ಬತ್ತಿದರೆ ನಮ್ಮ ಉಸಿರು ಉಡುಗುತ್ತಾ ಬಂದಂತೆ' ಬರಹದ ಸಾಲುಗಳನ್ನು ಉಲ್ಲೇಖ ಮಾಡಿದರು. ಮಹಿಳಾ–ಮಕ್ಕಳ ಕಲ್ಯಾಣ ಇಲಾಖೆಗೆ ಸಂಬಂಧಿಸಿದ ಘೋಷಣೆಗಳನ್ನು ▸ 10ನೇ ಪುಟಕ್ಕೆ

ಕಟ್ಟಡ ಕಾರ್ಮಿಕರ ಮಕ್ಕಳ ಶಿಕ್ಷಣಕ್ಕೆ 10 ಜಿಟಿಟಿಸಿ ಕೇಂದ್ರ ಸ್ಥಾಪನೆ

ಬೆಂಗಳೂರು, ಮಾ.6– ಕಟ್ಟಡ ಕಾರ್ಮಿಕರ ಮಕ್ಕಳ ಶಿಕ್ಷಣವನ್ನು ಪ್ರೋತ್ಸಾಹಿಸಲು ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ ವತಿಯಿಂದ ತಲಾ 60 ಕೋಟಿ ವೆಚ್ಚದಲ್ಲಿ 10 ಜಿಟಿಟಿಸಿ ಕೇಂದ್ರಗಳನ್ನು ಸ್ಥಾಪಿಸಲಾಗುವುದು. ಇದಕ್ಕಾಗಿ ಒಟ್ಟಾರೆ 600 ಕೋಟಿ ರೂ. ವೆಚ್ಚ ಮಾಡಲಾಗುವುದು ಎಂದು ಸಿಎಂ ಸಿದ್ದರಾಮಯ್ಯ ತಿಳಿಸಿದ್ದಾರೆ.




6ರಿಂದ 12ನೇ ತರಗತಿವರೆಗೆ ವ್ಯಾಸಂಗ ಮಾಡುತ್ತಿರುವ ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ ನೋಂದಾಯಿತ ಕಾರ್ಮಿಕರ ಮಕ್ಕಳಿಗಾಗಿ 2025–26ನೇ ಸಾಲಿನಲ್ಲಿ 42 ಶ್ರಮಿಕ ವಸತಿ ಶಾಲೆಗಳನ್ನು ಅನುಮೋದಿಸಲಾಗಿದೆ. 2026–27ನೇ ಸಾಲಿನಲ್ಲಿ ಹೆಚ್ಚುವರಿಯಾಗಿ 62 ಶ್ರಮಿಕ ವಸತಿ ಶಾಲೆಗಳನ್ನು ಪ್ರಾರಂಭಿಸಲು ಉದ್ದೇಶಿಸಲಾಗಿದೆ. ▸ 10ನೇ ಪುಟಕ್ಕೆ

ಅಭಿವೃದ್ಧಿ, ಸಮರ್ಥ ಆಡಳಿತಕ್ಕೆ ಕೃತಕ ಬುದ್ಧಿಮತ್ತೆಗೆ ಒತ್ತು

ಬೆಂಗಳೂರು, ಮಾ.6(ಕೆಎಂಶಿ)–ಭಾರತದ ಪ್ರಮುಖ ತಂತ್ರಜ್ಞಾನ ಮತ್ತು ನಾವೀನ್ಯತೆ ಕೇಂದ್ರಗಳಲ್ಲಿ ಒಂದಾಗಿರುವ ಕರ್ನಾಟಕದಲ್ಲಿ ಅಭಿವೃದ್ಧಿ ಮತ್ತು ಸಮರ್ಥ ಆಡಳಿತಕ್ಕಾಗಿ ಕೃತಕ ಬುದ್ಧಿಮತ್ತೆ (ಎಐ)ಗೆ ಒತ್ತು ನೀಡಲಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ಸಾರ್ವಜನಿಕ ಸೇವೆಗಳನ್ನು ಪರಿವರ್ತಿಸಲು, ಮಾನವ ಅಭಿವೃದ್ಧಿಯನ್ನು ಬಲಪಡಿಸಲು ಮತ್ತು ಉದಯೋನ್ಮುಖ ಡಿಜಿಟಲ್ ಆರ್ಥಿಕತೆಗಾಗಿ ತನ್ನ ನಾಗರಿಕರನ್ನು ಸಿದ್ಧಪಡಿಸಲು ಎಐ ಅನ್ನು ಬಳಸಿಕೊಳ್ಳುತ್ತಿದೆ. ಕರ್ನಾಟಕವು ವಿಶ್ವದ ಪ್ರಮುಖ ನಾವೀನ್ಯತೆ ಕೇಂದ್ರಗಳಲ್ಲಿ ಒಂದಾಗಿ ತನ್ನ ಸ್ಥಾನವನ್ನು ಬಲಪಡಿಸುವುದನ್ನು ಮುಂದುವರಿಸಿದೆ. ಜಾಗತಿಕ ಸ್ಟಾರ್ಟ್–ಅಪ್ ಪರಿಸರ ವ್ಯವಸ್ಥೆಯಲ್ಲಿ ರಾಜ್ಯವು 21ನೇ ಸ್ಥಾನದಿಂದ 14ನೇ ಸ್ಥಾನಕ್ಕೆ ಏರಿದೆ ಮತ್ತು ಈಗ 18,000ಕ್ಕೂ ಹೆಚ್ಚು ಸಕ್ರಿಯ ಸ್ಟಾರ್ಟ್–ಅಪ್‌ಗಳನ್ನು ಹೊಂದಿದೆ. ಕೃತಕ ಬುದ್ಧಿಮತ್ತೆ ಮತ್ತು ದೊಡ್ಡ ದತ್ತಾಂಶ ಕ್ಷೇತ್ರದಲ್ಲಿ ವಿಶ್ವದ ಅಗ್ರ 50 ನಗರಗಳಲ್ಲಿ ಬೆಂಗಳೂರು 5ನೇ ಸ್ಥಾನ ಪಡೆಯುವ ಮೂಲಕ ತನ್ನ ಜಾಗತಿಕ ನಾಯಕತ್ವವನ್ನು ಮತ್ತಷ್ಟು ಭದ್ರಪಡಿಸಿದೆ. ಕೃತಕ ಬುದ್ಧಿಮತ್ತೆಯಲ್ಲಿನ ತ್ವರಿತ ಪ್ರಗತಿಗಳು ಜಾಗತಿಕ ಉತ್ಪಾದನಾ ವ್ಯವಸ್ಥೆಗಳು ಮತ್ತು ಆರ್ಥಿಕ ರಚನೆಗಳನ್ನು ಮರುರೂಪಿಸುತ್ತಿವೆ ಎಂಬುದನ್ನು ಗುರುತಿಸಿ, ಕೃಷಿ, ಶಿಕ್ಷಣ, ಆಡಳಿತ ಮತ್ತು ಕೌಶಲ್ಯ ಅಭಿವೃದ್ಧಿಯಂತಹ ಪ್ರಮುಖ ಕ್ಷೇತ್ರಗಳಲ್ಲಿ ಎಐ ಅನ್ನು ಸಂಯೋಜಿಸಲು ಸರ್ಕಾರವು ಸಮಗ್ರ ಕಾರ್ಯತಂತ್ರವನ್ನು ರೂಪಿಸಿದೆ.

ರೈತ ಸಂಪರ್ಕ ಕೇಂದ್ರ ಅಭಿವೃದ್ಧಿ: ರೈತರಿಗೆ ಹವಾಮಾನ, ಮಾರುಕಟ್ಟೆ ಬೆಲೆಗಳು, ಬೆಳೆ ಸಲಹೆ ಮತ್ತು ಸರ್ಕಾರಿ ಯೋಜನೆಗಳ ಮಾಹಿತಿಯನ್ನು ತ್ವರಿತವಾಗಿ ಮತ್ತು ವಿಶ್ವಾಸಾರ್ಹವಾಗಿ ಒದಗಿಸಲು ಸರ್ಕಾರವು ರೈತ ಸಂಪರ್ಕ ಕೇಂದ್ರವನ್ನು (ರೈತ ಕರೆ ಕೇಂದ್ರ) ಎಐ ತಂತ್ರಜ್ಞಾನದೊಂದಿಗೆ ಅಭಿವೃದ್ಧಿಪಡಿಸಲಿದೆ. ಈ ಉಪಕ್ರಮವು ರೈತರಿಗೆ ನೈಜ–ಸಮಯದ ಜ್ಞಾನದೊಂದಿಗೆ ಸಬಲೀಕರಣಗೊಳಿಸಲು ಮತ್ತು ಗ್ರಾಮಮಟ್ಟದಲ್ಲಿ ನಿರ್ಧಾರ ತೆಗೆದುಕೊಳ್ಳುವಿಕೆಯನ್ನು ಸುಧಾರಿಸಲು ಗುರಿ ಹೊಂದಿದೆ. ಐಐಟಿ ಧಾರವಾಡದ ಸಹಯೋಗದೊಂದಿಗೆ ಎಐ–ಆಧಾರಿತ ವೈಯಕ್ತಿಕಗೊಳಿಸಿದ ಸ್ವಯಂ–ಕಲಿಕೆಯ ಡಿಜಿಟಲ್ ಬೋಧಕರನ್ನು ಸರ್ಕಾರವು ಪರಿಚಯಿಸಲಿದೆ. ಈ ನವೀನ ಉಪಕ್ರಮವು 8ರಿಂದ 12ನೇ ತರಗತಿಯ ಸುಮಾರು 12.28 ಲಕ್ಷ ವಿದ್ಯಾರ್ಥಿಗಳಿಗೆ ಬೆಂಬಲ ನೀಡಲಿದೆ, ಇದು ವೈಯಕ್ತಿಕಗೊಳಿಸಿದ ಕಲಿಕೆಯನ್ನು ಸಕ್ರಿಯಗೊಳಿಸುತ್ತದೆ ಮತ್ತು ರಾಜ್ಯಾದ್ಯಂತ ಶೈಕ್ಷಣಿಕ ಫಲಿತಾಂಶಗಳನ್ನು ಸುಧಾರಿಸುತ್ತದೆ.



ಎಐ ಆಧಾರಿತ ಹಾಜರಾತಿ ವ್ಯವಸ್ಥೆ: ರಾಜ್ಯಾದ್ಯಂತ ಇರುವ ಅಂಗನವಾಡಿಗಳು, ಶಾಲೆಗಳು, ಕಾಲೇಜುಗಳು ಮತ್ತು ವಸತಿನಿಲಯಗಳಲ್ಲಿ ಎಐ–ಆಧಾರಿತ ಮುಖ ಗುರುತಿಸುವಿಕೆ ಹಾಜರಾತಿ ವ್ಯವಸ್ಥೆಯನ್ನು ಸರ್ಕಾರವು ಜಾರಿಗೊಳಿಸಲಿದೆ. ಈ ವ್ಯವಸ್ಥೆಯು ಹಾಜರಾತಿಯ ನಿಖರ ಮೇಲ್ವಿಚಾರಣೆಯನ್ನು ಸಕ್ರಿಯಗೊಳಿಸುತ್ತದೆ. ▸ 10ನೇ ಪುಟಕ್ಕೆ

ಎಐ ಆಧಾರಿತ ಹೊಸ ಕೋರ್ಸ್

ಕರ್ನಾಟಕದ ಯುವಜನರನ್ನು ಉದಯೋನ್ಮುಖ ತಂತ್ರಜ್ಞಾನಗಳು ಮತ್ತು ಭವಿಷ್ಯದ ಉದ್ಯೋಗಿಗಳಿಗಾಗಿ ಸಿದ್ಧಪಡಿಸಲು, ಸರ್ಕಾರಿ ಪಾಲಿಟೆಕ್ನಿಕ್ ಮತ್ತು ಎಂಜಿನಿಯರಿಂಗ್ ಸಂಸ್ಥೆಗಳಲ್ಲಿ ಕೃತಕ ಬುದ್ಧಿಮತ್ತೆ ಯಂತ್ರ ಕಲಿಕೆ, ಕ್ಲೌಡ್ ಕಂಪ್ಯೂಟಿಂಗ್ ಮತ್ತು ಆಟೋಮೇಷನ್ ಎಂಜಿನಿಯರಿಂಗ್ ಸೇರಿದಂತೆ ಹೆಚ್ಚಿನ ಉದ್ಯೋಗ ಸಾಮರ್ಥ್ಯವಿರುವ ಹೊಸ ಕೋರ್ಸ್‌ಗಳನ್ನು ಪರಿಚಯಿಸಲಾಗುವುದು. ಕೃತಕ ಬುದ್ಧಿಮತ್ತೆಯು ನಾಗರಿಕ ಸೇವೆಗಳನ್ನು ಸಹ ಬಲಪಡಿಸಲಿದೆ. ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯು ತನ್ನ ಅಸ್ತಿತ್ವದಲ್ಲಿರುವ ಸಹಾಯವಾಣಿಯನ್ನು ಎಐ–ಆಧಾರಿತ 'ಸ್ಮಾರ್ಟ್ ಅನ್ನವಾಣಿ' ಆಗಿ ಪರಿವರ್ತಿಸಲಿದೆ. ಇದು ಸ್ವಯಂಚಾಲಿತ ಪ್ರತಿಕ್ರಿಯೆಗಳು, ಧ್ವನಿ ಚಾಟ್‌ಬಾಟ್‌ಗಳು ಮತ್ತು ಸಮರ್ಥ ಕರೆ ನಿರ್ವಹಣಾ ವ್ಯವಸ್ಥೆಗಳನ್ನು ಒಳಗೊಂಡಿರುವ ಬುದ್ಧಿವಂತ ದೂರು ಪರಿಹಾರ ವೇದಿಕೆಯಾಗಿದ್ದು, ಸಾರ್ವಜನಿಕ ಸೇವಾ ವಿತರಣೆಯಲ್ಲಿ ಸ್ಪಂದನಶೀಲತೆ ಮತ್ತು ಪಾರದರ್ಶಕತೆಯನ್ನು ಸುಧಾರಿಸುತ್ತದೆ.

ನಕ್ಕರೆ ಅದೇ ಸ್ವರ್ಗ

ಟೀಚರ್ : ಯಾಕೋ ಲೇಟಾಗಿ ಬಂದೆ?
ಗುಂಡ : ದಾರಿಯಲ್ಲಿ ಒಂದು ಬೋರ್ಡ್ ಇತ್ತು ಮೇಡಂ, ಅದಕ್ಕೆ ಲೇಟಾಗಿ ಬಂದೆ.
ಟೀಚರ್ : ಏನ್ ಅಂಥಾ ಮಹಾನ್ ಬೋರ್ಡಿತ್ತು?
ಗುಂಡ : ಮುಂದೆ ಶಾಲೆಯಿದೆ. ದಯವಿಟ್ಟು ನಿಧಾನವಾಗಿ ಚಲಿಸಿ ಅಂತ ಬರೆದಿತ್ತು ಮೇಡಂ!

ಮೈಸೂರು ಮಿತ್ರ

ಶನಿವಾರ, ಮಾರ್ಚ್ 7, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ನೀವು ಪ್ರೀತಿಸುವವರಿಗೆ ಹಾರಲು ರೆಕ್ಕೆಗಳನ್ನು ನೀಡಿ, ಮರಳಿ ಬರಲು ಬೇರುಗಳನ್ನು ಮತ್ತು ಉಳಿಯಲು ಕಾರಣಗಳನ್ನು ನೀಡಿ. –ದಲೈಲಾಮಾ, ಬೌದ್ಧ ಗುರು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ತಲೆ ಮೇಲಣ ಬರಹ ಎಲೆಯಿಂದ ಒರೆಸಿದರೆ ಹೋದೀತೇ

ನಿಮ್ಮ ಪತ್ರಗಳು

ರಾಜಕಾರಣಿಗಳ ಬೆಂಬಲ ಇಲ್ಲದೆ ಇಂತಹ ಕೆಲಸ ಸಾಧ್ಯವಿಲ್ಲ!

ಮಾನ್ಯರೆ,

ಮೈಸೂರಿನ ಚಾಮುಂಡಿಬೆಟ್ಟದ ತಪ್ಪಲಿನ 200 ಕೋಟಿ ರೂ.ಗೂ ಹೆಚ್ಚು ಬೆಲೆಬಾಳುವ ಸರ್ವೆ ನಂ.4ರ ಸುಮಾರು 25 ಎಕರೆ ಸರ್ಕಾರಿ ಭೂಮಿಯನ್ನು ಮಾರಾಟ ಮಾಡುವ ಸಂಬಂಧ ಮೈಸೂರಿನ ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ ಕ್ರಯದ ಕರಾರು ಪತ್ರ (ಸೇಲ್ ಅಗ್ರಿಮೆಂಟ್) ನೋಂದಣಿ ಆಗಿರುವ ಬಗ್ಗೆ ಪತ್ರಿಕೆಯಲ್ಲಿ ವರದಿ ಆಗಿದೆ.



ಇದರ ಹಿಂದೆ ಪ್ರಭಾವಿ ರಾಜಕಾರಣಿಗಳ ಕೈವಾಡ ಇದ್ದೇ ಇರುತ್ತದೆ. ರಾಜಕಾರಣಿಗಳ ಬೆಂಬಲ ಇಲ್ಲದೇ ಅಧಿಕಾರಿಗಳು ಈ ಕೆಲಸ ಮಾಡಲು ಸಾಧ್ಯವಿಲ್ಲ. ಸರ್ಕಾರದ ಭೂಮಿಯನ್ನು ನೋಂದಣಿ ಮಾಡಲು ಸಾಧ್ಯವಿಲ್ಲ ಎಂಬ ಕನಿಷ್ಠ ಜ್ಞಾನವೂ ತಹಸಿಲ್ದಾರ್ ಅಥವಾ ಸಬ್ ರಿಜಿಸ್ಟ್ರಾರ್ ಅವರಿಗೆ ತಿಳಿದಿಲ್ಲವೇ?.

ಇದೊಂದು ದೇಶ ದ್ರೋಹದ ವಂಚನೆ ಪ್ರಕರಣ ಇಂತಹ ವಂಚನೆ ಪ್ರಕರಣ ಬೆಳಕಿಗೆ ಬರಲು ಕಾರಣವಾದ ಶಾಸಕ ಶ್ರೀವತ್ಸ ಅವರನ್ನು ಅಭಿನಂದಿಸಲೇಬೇಕು. ಮೈಸೂರಿನಲ್ಲಿ ಇಂತಹ ಸರ್ಕಾರಿ ಭೂಮಿಯನ್ನು ನೋಂದಣಿ ಮಾಡಿ ಮಾರಾಟ ಮಾಡಿರುವ ಇನ್ನೂ ಹಲವಾರು ಪ್ರಕರಣಗಳು ಇರಬಹುದು. ಕಳೆದ ಎರಡು ವರ್ಷಗಳಿಂದೀಚೆಗೆ ಮೈಸೂರಿನ ಸಬ್ ರಿಜಿಸ್ಟ್ರಾರ್ ಕಚೇರಿಯಲ್ಲಿ ನೋಂದಣಿ ಆಗಿರುವ ಎಲ್ಲಾ ನಿವೇಶನ ಮತ್ತು ಭೂಮಿಯ ನೋಂದಣಿ ಬಗ್ಗೆ ಸಮಗ್ರ ತನಿಖೆ ನಡೆಸಬೇಕು. ಈ ಬಗ್ಗೆ ಸರ್ಕಾರ ಗಂಭೀರ ಚಿಂತನೆ ನಡೆಸಬೇಕು. ತಪ್ಪಿತಸ್ಥ ಅಧಿಕಾರಿಗಳಿಗೆ ಶಿಕ್ಷೆ ಆಗಬೇಕು.

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು.

ವರ್ಷದಿಂದ ನಿಷ್ಕ್ರಿಯವಾಗಿರುವ ಶುದ್ಧ ಕುಡಿಯುವ ನೀರಿನ ಘಟಕ

ಮಾನ್ಯರೇ,

ಮೈಸೂರು ಮಹಾ ನಗರಪಾಲಿಕೆಯ 50ನೇ ವಾರ್ಡ್ ವ್ಯಾಪ್ತಿಯಲ್ಲಿ ಬರುವ ಚಾಮರಾಜ ಜೋಡಿ ರಸ್ತೆಯ ಬಸ್ ತಂಗುದಾಣದ ಸಮೀಪವಿರುವ ಶುದ್ಧ ಕುಡಿಯುವ ನೀರಿನ ಘಟಕ ವರ್ಷದಿಂದ ನಿಷ್ಕ್ರಿಯವಾಗಿದ್ದು, ಕೇಳುವವರೇ ಇಲ್ಲದಂತಾಗಿದೆ.

ಈ ವಾರ್ಡಿನ ನಗರಪಾಲಿಕೆ ಸದಸ್ಯರಾಗಿದ್ದ ವಿ.ಲೋಕೇಶ್ ಪಿಯಾ ಅವರು ಆಸಕ್ತಿ ವಹಿಸಿ ಮಂಜೂರು ಮಾಡಿಸಿದ್ದ ಈ ಘಟಕವು ಜನಪ್ರತಿನಿಧಿಗಳ ಆಡಳಿತಾವಧಿ ಮುಗಿಯುತ್ತಿದ್ದಂತೆ ನಿಷ್ಕ್ರಿಯವಾಗಿದ್ದು, ಯಾರೂ ಇತ್ತ ಗಮನ ಹರಿಸದ ಕಾರಣ ವರ್ಷದಿಂದ ಕಾರ್ಯನಿರ್ವಹಿಸದೆ ಸ್ಥಗಿತವಾಗಿದೆ.

ಆದ್ದರಿಂದ ಇದರ ನಿರ್ವಹಣೆಯ ಜವಾಬ್ದಾರಿ ಹೊತ್ತ ವಾಣಿವಿಲಾಸ ನೀರು ಸರಬರಾಜು ಮಂಡಳಿಯವರು ಮತ್ತು ನಗರಪಾಲಿಕೆ ಅಧಿಕಾರಿಗಳು ಕೂಡಲೇ ಇತ್ತ ಗಮನ ಹರಿಸಿ ದುರಸ್ತಿ ಮಾಡಿಸುವಂತೆ ಈ ಮೂಲಕ ಒತ್ತಾಯಿಸುತ್ತೇನೆ.

–ಅಯ್ಯು, ಸುಣ್ಣದಕೇರಿ, ಮೈಸೂರು.

ರಾಜ್ಯ ಖಾದಿ ಮಂಡಳಿ ನೌಕರರಿಗೆ 7ನೇ ವೇತನ ಆಯೋಗದ ಭಾಗ್ಯ ಕಲ್ಪಿಸಿ

ಮಾನ್ಯರೆ,

ದೇವರು ವರ ಕೊಟ್ಟರೂ ಪೂಜಾರಿ ವರ ಕೊಟ್ಟಿಲ್ಲವೆಂಬ ಗಾದೆ ಇದೆ. ಕರ್ನಾಟಕ ರಾಜ್ಯ ಗ್ರಾಮೋದ್ಯೋಗ ಮಂಡಳಿ– ಇದು ಒಂದು ಕರ್ನಾಟಕ ಸರ್ಕಾರದ ಉದ್ಯಮವಾಗಿದ್ದು ಕೆಸಿಎಸ್ಆರ್ ಮತ್ತು ಸಿಆರ್ ಅಧೀನಕ್ಕೆ ಒಳಪಟ್ಟಿದ್ದು ಇದರ ನೌಕರರು ಮತ್ತು ನಿವೃತ್ತರು ಹಲವಾರು ವರ್ಷಗಳಿಂದ ಸಂಬಳ, ತುಟ್ಟಿಭತ್ಯೆ, ಪಿಂಚಣಿ ಸೌಲಭ್ಯ ಮತ್ತು 6ನೇ ವೇತನ ಆಯೋಗದ ಸೌಲಭ್ಯ ಪಡೆಯುತ್ತಿದ್ದು, ಈ ಬಾರಿ ಈವರೆಗೆ 7ನೇ ವೇತನ ಆಯೋಗದ ಸೌಲಭ್ಯಗಳನ್ನು ನೀಡದೆ ಆರ್ಥಿಕ ಸಲಹೆಗಾರರು ಮತ್ತು ಮುಖ್ಯ ಲೆಕ್ಕ ಪತ್ರಾಧಿಕಾರಿಗಳು ತಡೆ ಹಿಡಿದಿರುತ್ತಾರೆ. ಆದರೆ ಅವರು ಮಾತ್ರ ಎಲ್ಲಾ ರೀತಿಯ ಸೌಲಭ್ಯಗಳನ್ನು ಪಡೆದು ಇತರರಿಗೆ ಅಡ್ಡಗಾಲು ಹಾಕಿದ್ದಾರೆ. ಪಿಂಚಣಿ ಮತ್ತು ತುಟ್ಟಿಭತ್ಯೆಗಳನ್ನು ನಂಬಿ ಬದುಕಿರುವ ಹಲವಾರು ಕುಟುಂಬಗಳು ಸಂಕಷ್ಟದಲ್ಲಿವೆ. ಸರಕಾರಿ ಆದೇಶಗಳನ್ನ ಗಾಳಿಗೆ ತೂರಿದ್ದಾರೆ. ಸಂಕಷ್ಟದಲ್ಲಿರುವ ಬಡ ನಿವೃತ್ತರಿಗೆ 7ನೇ ವೇತನ ಆಯೋಗದ ಬಾಕಿ ಹಣ ಬಿಡುಗಡೆಗೆ ಕೃಪೆ ತೋರಬೇಕೆಂದು ಈ ಮೂಲಕ ಮನವಿ.

–ನರಸಿಂಹಮೂರ್ತಿ, ಮೈಸೂರು.

ಸರ್ಕಾರ ಶಾಲಾ ಪ್ರವೇಶಾತಿಗೆ ವಯೋಮಿತಿ ಸಡಿಲಿಸಲಿ

ಮಾನ್ಯರೆ,

ಒಂದನೇ ತರಗತಿ ಪ್ರವೇಶಕ್ಕೆ ಜೂನ್ 1ರ ಕಟ್ಟುನಿಟ್ಟಿನ ವಯೋಮಿತಿ ನಿಗದಿಪಡಿಸಿರುವುದು ರಾಜ್ಯದ ಸುಮಾರು 2.30 ಲಕ್ಷ ಮಕ್ಕಳ ಶೈಕ್ಷಣಿಕ ಹಿತಾಸಕ್ತಿಗೆ ಮಾರಕವಾಗಿದೆ. ಕೇವಲ ಒಂದು ವಾರ ಅಥವಾ ತಿಂಗಳ ಅಂತರದಿಂದ ಮಗುವಿನ ಅಮೂಲ್ಯವಾದ ಒಂದು ವರ್ಷ ನಷ್ಟವಾಗುವುದು ಕೇವಲ ಅಂಕಿ–ಅಂಶವಲ್ಲ. ಅದು ಆ ಮಗುವಿನ ಕಲಿಕೆಯ ಹಾದಿಯಲ್ಲಿ ಉಂಟಾಗುವ ದೊಡ್ಡ ಅಡೆ–ತಡೆ. ಕೇರಳ, ಮಹಾರಾಷ್ಟ್ರ ಮತ್ತು ಪಶ್ಚಿಮ ಬಂಗಾಳದಂತಹ ರಾಜ್ಯಗಳು ಈಗಾಗಲೇ 90 ದಿನಗಳ ಕಾಲಮಿತಿ ಸಡಿಲಿಕೆ ನೀಡಿ ಮಕ್ಕಳ ಹಿತ ಕಾಯುತ್ತಿವೆ. ನಮ್ಮ ರಾಜ್ಯ ಸರ್ಕಾರವೂ ಸಹ ವಯೋಮಿತಿಯಲ್ಲಿ ಈ ಸಡಿಲಿಕೆ ತರುವ ಮೂಲಕ ಲಕ್ಷಾಂತರ ಪೋಷಕರ ಆತಂಕವನ್ನು ದೂರ ಮಾಡಿ ಮಕ್ಕಳಿಗೆ ತಾರತಮ್ಯವಿಲ್ಲದ ಶಿಕ್ಷಣದ ಹಕ್ಕು ನೀಡಬೇಕು.

–ಡಾ.ಎಚ್.ಕೆ.ವಿಜಯಕುಮಾರ, ಮೈಸೂರು.

ಭಾರತದಲ್ಲಿ ಮಹಿಳಾ ಶಕ್ತಿ ಮಹಾಶಕ್ತಿ



ಡಾ.ಟೆಸ್ಸಿ ಥಾಮಸ್



ಸಿಂಧು ಶ್ರೀಹರಿ ಸಪ್ಕಲ್



ಭಾನ್ವರಿ ದೇವಿ



ಮಿರ್ಲೆ ಚಂದ್ರಶೇಖರ
ಲೇಖಕರು,
ಮೊ: 9916129654.

ಭಾರತೀಯ ಸಂಸ್ಕೃತಿಯಲ್ಲಿ ಮಹಿಳೆಯರಿಗೆ ಪೂಜ್ಯನೀಯ ಸ್ಥಾನ ನೀಡಲಾಗಿದೆ. ಕೆಲವು ವರ್ಷಗಳ ಹಿಂದಿನವರೆಗೂ ಮಹಿಳೆಯರು ಮನೇ ಸೀಮಿತವಾಗಿ ಗರ್ಭಗುಡಿಯ ದೇವತೆಯಂತಿದ್ದರು. ಹೆಚ್ಚೆಂದರೆ ಮನೆಯ ಮುಂದಿನ ಆವರಣ ಮತ್ತು ಬಾಗಿಲ ಮುಂದೆ ಬಿಡುವ ರಂಗೋಲಿಯ ಗೆರೆ ದಾಟಿ ಬರುವಂತೆ ಇರಲಿಲ್ಲ. ವಿಶೇಷ ಸಂದರ್ಭಗಳಲ್ಲಿ ಮಾತ್ರ ಗಂಭೀರವಾಗಿ ಗೌರಮ್ಮನಾಗಿ ಹೋಗಿ ಬರಬಹುದಿತ್ತು. ತಲೆ ತುಂಬ ಸೆರಗೊದ್ದು ತಗ್ಗಿಬಗ್ಗಿ ನಿಲ್ಲಬೇಕಾಗಿತ್ತು. ಸ್ತ್ರೀಯರಿಗೆ ಸಮಾನತೆ ಇಲ್ಲದ ಬದುಕಾಗಿತ್ತು ಇದು ಖಂಡಿತ ಸರಿ ಅಲ್ಲದಿದ್ದರೂ ಕುಟುಂಬಗಳು ಬಂಡೆಯಂತೆ ಗಟ್ಟಿಯಾಗಿದ್ದವು. ಭಾವನೆ ಹಾಗೂ ಬಾಂಧವ್ಯಗಳು ಮಧುರವಾಗಿತ್ತು.

ವಿಚ್ಛೇದನಗಳು, ಲಿವಿಂಗ್ ಟುಗೆದರ್, ಮದುವೆಗೆ ಮುಂಚೆಯೇ ಹೆಣ್ಣು–ಗಂಡು ಕೂಡಿ ಹೊಂದುವುದಿಲ್ಲವೆಂದು ದೂರಾಗುವುದು, ಮುಂತಾದ ಪ್ರಕರಣಗಳಿಗೆ ಅವಕಾಶ ಇರಲಿಲ್ಲ. ಇಂದಿನ ತರುಣರಿಗೆ ನೋವಿನಿಂದ ಹೃದಯ ವಿಲಗುಟ್ಟಬಹುದು; ಆಶ್ಚರ್ಯವೂ ಆಗಬಹುದು. ಕೆಲವರು ಎರಡುಮೂರು ಮದುವೆಗಳನ್ನು ಆಗುತ್ತಿದ್ದರೂ ವಧುಗಳಿಗೆ ಕೊರತೆ ಇರಲಿಲ್ಲ.

ಸರ್ಕಾರಿ ನೌಕರಿಯಲ್ಲಿ ಒಬ್ಬ ವರ ಇದ್ದಾನೆಂದರೆ ಹೆಣ್ಣೆತ್ತವರು ಹೆಣ್ಣು ಕೊಡಲು ಪೈಪೋಟಿಗೆ ನಿಲ್ಲುತ್ತಿದ್ದರು. ಈಗ ಎಲ್ಲವೂ ಬದಲಾಗಿದೆ ಹೆಣ್ಣು ಸರಿ ಸಮನಾಗಿ ಎಲ್ಲಾ ಕ್ಷೇತ್ರಗಳಲ್ಲೂ ಗಂಡಿಗಿಂತ ಹೆಚ್ಚು ದಕ್ಷತೆಯಿಂದ ಕೆಲಸ ಮಾಡುತ್ತಿದ್ದಾಳೆ. ಪುರುಷ ಪ್ರಧಾನವಾಗಿದ್ದ ಕಾಲವು ಹೋಗಿ ಮಹಿಳೆಯರಿಗೂ ಸಮಾನಾವಕಾಶ ಇರುವ ಕಾಲಘಟ್ಟದಲ್ಲಿದ್ದೇವೆ.

ಮಹಿಳೆಯರು ಸದೃಢರಾಗಿ ಪುರುಷರು ಬಲಹೀನರಾಗುತ್ತಿದ್ದಾರೆ ಎಂಬ ಅನುಮಾನವನ್ನು ಸನ್ನಿವೇಶಗಳು ಬಿಂಬಿಸಲಾರಂಭಿಸಿವೆ. ಅನೈತಿಕ ಘಟನೆಗಳು ನಡೆದದ್ದು ಬಹಿರಂಗವಾದರೆ ತಪ್ಪು ಯಾರದ್ದೇ ಇರಲಿ ಗಂಡನ್ನು ಆರೋಪಿ ಸ್ಥಾನದಲ್ಲಿ ನಿಲ್ಲಿಸಿದರೆ, ಹೆಣ್ಣು ಸಂತ್ರಸ್ತೆಯಾಗುತ್ತಾಳೆ. ತಪ್ಪು ಮಹಿಳೆಯರದ್ದೇ ಆದರೂ ಮುಖ ಬ್ಲರ್ ಮಾಡಿಯೇ ತೋರಿಸುವುದು. ಏನೇ ಇರಲಿ ಪ್ರಕೃತಿ ಸಹಜ ತೊಂದರೆಗಳು ಇದ್ದಾಗ್ಯೂ ಮಹಿಳೆಯರು ಗಂಡಸರಿಗಿಂತ ಬಲಾಢ್ಯರು ಎನ್ನುವುದನ್ನು ಸಾಬೀತು ಮಾಡಿಯಾಗಿದೆ.

ಬದುಕೆಂಬ ನಾಟಕದಲ್ಲಿ ಮಹಿಳೆಯು ಅಜ್ಜಿಯಾಗಿ, ಅಮ್ಮನಾಗಿ, ಅಕ್ಕ–ತಂಗಿಯರಾಗಿ, ಮಗಳಾಗಿ, ಹೆಂಡತಿಯಾಗಿ ನಿರ್ವಹಿಸುವ ಪಾತ್ರಗಳು. ಅಮ್ಮನ ಪಾತ್ರದಲ್ಲಿ ನೂರಕ್ಕೆ ನೂರು ನ್ಯಾಯ ಒದಗಿಸುವ ಮಹಿಳೆ ಇತರೆ ಪಾತ್ರಗಳಲ್ಲಿ ಕೊಂಚ ಕಡಿಮೆ ಇರುವುದನ್ನು ನೀವೂ ಒಪ್ಪುತ್ತೀರೆಂದು ಭಾವಿಸುತ್ತೇನೆ. ಈ ಪಾತ್ರಗಳ ಆಚೆಗೂ ಬಂದು ನಾನು ಕೂಡ ಸಾಧಿಸಬಲ್ಲೆ ಎಂಬುದನ್ನು ತೋರಿಸಿ ಕೊಟ್ಟಾಗಿದೆ. ಇತಿಹಾಸದಲ್ಲಿ ಧೈರ್ಯವಂತರು, ಪ್ರತಿಭಾವಂತರು ಹಾಗೂ ತ್ಯಾಗಮಯಿ ಸ್ತ್ರೀಯರ ಯಶೋಗಾಥೆಗಳು ಇಂದು ಕಥೆಗಳಾಗಿವೆ.

ಆ ದಿನಗಳಲ್ಲಿ ಮಹಿಳೆಯರಿಗೆ ಏನೊಂದು ಸ್ವಾತಂತ್ರ್ಯ ಇಲ್ಲದ ಕಾಲಘಟ್ಟದಲ್ಲಿ ಇತಿಮಿತಿಯೊಳಗಿದ್ದಾಗಲೂ ಸಾಧನೆಗೈದವರನ್ನು ನಿಮಗೆ ಪರಿಚಯಿಸುತ್ತಿದ್ದೇನೆ, ಇವರ ಬದುಕು ಇಂದಿನ ತರುಣಿಯರಿಗೆ ಪ್ರೇರಣೆ ನೀಡಬಲ್ಲದು, ಮಹಿಳೆ ಬಲವಾದರೆ ಮನೆ ಬಲವಾಗುತ್ತದೆ, ಮನೆ ಬಲವಾದರೆ ರಾಷ್ಟ್ರ ಬಲವಾಗುತ್ತದೆ.

ಮಹಿಳೆಗೆ ದೇವತೆಯ ಸ್ಥಾನ ನೀಡಲಾಗಿದೆ. ಲಕ್ಷ್ಮೀ, ಸರಸ್ವತಿ, ದುರ್ಗೆ ರೂಪಗಳಲ್ಲಿ ಸಂಪತ್ತು, ಜ್ಞಾನ ಹಾಗೂ ಶಕ್ತಿಯ ಪ್ರತಿರೂಪಳಾಗಿರುವ ಸ್ತ್ರೀ ಸಾಧಿಸುತ್ತಾಳೆ ಎನ್ನುವುದಕ್ಕೆ ಪ್ರಬುದ್ಧಮಾನಕ್ಕೆ ಬರದೆ ತೆರೆಯ ಮರೆಯಲ್ಲಿ ಲೆಕ್ಕವಿಲ್ಲದಷ್ಟು ಮಹಿಳೆಯರು ಇದ್ದಾರೆ. ಕೆಲವು ಅಜ್ಞಾತ ಸಾಧಕಿಯರ ಬಗ್ಗೆಯಾದರೂ ತಿಳಿದುಕೊಳ್ಳುವುದರಿಂದ ಇಂದಿನವರಿಗೆ ಪ್ರೇರಣೆಯಾಗುತ್ತದೆ. ಬೆಳಕಿಗೆ ಬಾರದ ಮಹಾನ್ ಸಾಧಕಿಯರಲ್ಲಿ ಮಿಸ್ಸೈಲ್ ವುಮನ್ ಟೆಸ್ಸಿ ಥಾಮಸ್, ಸಿಂಧು ಶ್ರೀಹರಿ ಸಪ್ಕಲ್ ಮತ್ತು ಭಾನ್ವರಿ ದೇವಿ ಈ ಮೂವರ ಬಗ್ಗೆ ತಿಳಿದುಕೊಳ್ಳೋಣ.

ಕ್ಷಿಪಣಿ ಮಹಿಳೆ ಡಾ: ಟೆಸ್ಸಿ ಥಾಮಸ್

ವಿಜ್ಞಾನ ಕ್ಷೇತ್ರದಲ್ಲಿ ಮಹತ್ತರವಾದ ಸಾಧನೆ ಮಾಡಿರುವ ಹಾಗೂ ಭಾರತದ ರಕ್ಷಣಾ ಸಂಶೋಧನಾ ಕ್ಷೇತ್ರದಲ್ಲಿ ಅತ್ಯಂತ ಮಹತ್ವದ ಪಾತ್ರವನ್ನು ವಹಿಸಿದ ಮಹಿಳೆ ಟೆಸ್ಸಿ ಥಾಮಸ್ ಅವರನ್ನು ಮಿಸ್ಸೈಲ್ ವುಮನ್ ಆಫ್ ಇಂಡಿಯಾ ಎಂದು ಕರೆಯುತ್ತಾರೆ. ಇವರು ಭಾರತದ ಕ್ಷಿಪಣಿ ಯೋಜನೆಯ ಮೊದಲ ಮಹಿಳಾ ನಿರ್ದೇಶಕರು, ಅಗ್ನಿಪುತ್ರಿ ಡಾ.ಟೆಸ್ಸಿ ಥಾಮಸ್ ರವರನ್ನು ಡಾ.ಅಬ್ದುಲ್ ಕಲಾಂರವರು ಅಗ್ನಿ ಯೋಜನೆಗೆ ನೇಮಿಸುತ್ತಾರೆ. ಅಗ್ನಿ–3 ಮತ್ತು ಅಗ್ನಿ–4ರ ಯೋಜನೆಗಳನ್ನು ಯಶಸ್ವಿಯಾಗಿ ಮುನ್ನಡೆಸಿದ ಮಹಿಳಾ ನಿರ್ದೇಶಕಿ ಎಂಬ ಹೆಗ್ಗಳಿಕೆ ಇವರದು.

ಏಪ್ರಿಲ್ 1963ರಲ್ಲಿ ಕೇರಳದ ಆಲಪುಳದಲ್ಲಿ ಜನಿಸಿದರು. ತಂದೆ ಥಾಮಸ್‌ರವರು ಅಕೌಂಟೆಂಟ್, ತಾಯಿ ಕುಂಜಮ್ಮ ಥಾಮಸ್ ಗೃಹಿಣಿ. ತ್ರಿಶೂರ್‌ನಲ್ಲಿ ಇಂಜಿನಿಯರಿಂಗ್ ಪದವಿ ಪಡೆದು ಡಿಫೆನ್ಸ್ ಇನ್ಸ್ಟಿಟ್ಯೂಟ್ ಆಫ್ ಅಡ್ವಾನ್ಸ್ ಟೆಕ್ನಾಲಜಿ ಕಾಲೇಜಲ್ಲಿ ಕ್ಷಿಪಣಿ ತಂತ್ರಜ್ಞಾನದಲ್ಲಿ ಎಂ.ಟೆಕ್ ಪದವಿ ಗಳಿಸಿದರು. ಇವರ ಪತಿ ಸರೋಜ್ ಕುಮಾರ್ ಭಾರತೀಯ ನೌಕಾಪಡೆಯಲ್ಲಿ ಕಮಾಂಡರ್, ಮಗ ತೇಜಸ್ ಇಂಜಿನಿಯರ್.

1985ರಲ್ಲಿ ಆ ಸಮಯಕ್ಕೆ ಹೆಣ್ಣು ಮಕ್ಕಳಿಗೆ ಸೂಕ್ತವಲ್ಲದ ಕ್ಷೇತ್ರ ಕ್ಷಿಪಣಿಗಳನ್ನು ತಯಾರಿಸಿ ಗಗನಕ್ಕೆ ಹಾರಿಸುವುದು, ಆದರೂ ಧೈರ್ಯವಾಗಿ ಈ ಕ್ಷೇತ್ರ ವನ್ನು ಆಯ್ಕೆ ಮಾಡಿಕೊಂಡು ಡಿಆರ್‌ಡಿಓ ಸಂಸ್ಥೆಗೆ ಸೇರಿ ಸಾಧಿಸುವುದು ಸುಲಭವಾದ ಕಾರ್ಯವಾಗಿರಲಿಲ್ಲ. ಕ್ಷಿಪಣಿ ತಂತ್ರಜ್ಞಾನ ಕ್ಷೇತ್ರದಲ್ಲಿ ಭಾರತವನ್ನು ಸ್ವಾವಲಂಬಿಗಳನ್ನಾಗಿ ಮಾಡಿದ ಕೊಡುಗೆಗಾಗಿ ಲಾಲ್ ಬಹದ್ದೂರ್ ಶಾಸ್ತ್ರಿ ರಾಷ್ಟ್ರೀಯ ಪ್ರಶಸ್ತಿಯನ್ನು ಪಡೆದಿರುವುದಲ್ಲದೆ ಹಲವಾರು ರಾಷ್ಟ್ರ ಹಾಗೂ ಅಂತಾರಾಷ್ಟ್ರೀಯ ಪ್ರಶಸ್ತಿಗಳನ್ನು ಪಡೆದಿದ್ದಾರೆ.

ಅನಾಥರ ತಾಯಿ ಸಿಂಧು ಶ್ರೀಹರಿ ಸಪ್ಕಲ್

ಮಹಾರಾಷ್ಟ್ರದ ಸಿಂಧು ಶ್ರೀಹರಿ ಸಪ್ಕಲ್ ಅವರನ್ನು 'ಅನಾಥರ ತಾಯಿ' ಎಂದು ಕರೆಯುತ್ತಾರೆ. ಸಪ್ಕಲ್‌ರವರು ತಮ್ಮ ಜೀವನದಲ್ಲಿ ಅನೇಕ ಸಂಕಷ್ಟಗಳನ್ನು ಎದುರಿಸಿದ್ದರೂ ಸಾವಿರಾರು ಅನಾಥ ಮಕ್ಕಳಿಗೆ ಆಶ್ರಯ ಕೊಟ್ಟು ಅವರ ಬದುಕನ್ನು ಬೆಳಗಿಸಿದರು. ಅವರು ನಿಜವಾದ ತಾಯಿತನಕ್ಕೆ ಪ್ರತೀಕವಾಗಿದ್ದರು.

ವಾರ್ದಾ ಜಿಲ್ಲೆಯ ಪಿಪ್ರಿ ಮೇಘೆಯಲ್ಲಿ 14 ನವೆಂಬರ್ 1948ರಂದು ಜನಿಸಿದ ಇವರು ಅನಾಥರಿಗಾಗಿಯೇ ತಮ್ಮ ಜೀವನವನ್ನು ಮುಡುಪಿಟ್ಟರು. ಅಭಿಮನ್ಯು ಸಾಥೆ ಎಂಬ ಕಡುಬಡವನ ಮಗಳಾಗಿ ಜನಿಸಿದ ಇವರು, ಬೇಡವಾದ ಮಗುವಾಗಿದ್ದರಿಂದ ಕುಟುಂಬದಲ್ಲಿ ಪ್ರಾಶಸ್ತ್ಯ ಇರಲಿಲ್ಲ, ನಾಲ್ಕನೇ ತರಗತಿಯಲ್ಲಿ ಉತ್ತೀರ್ಣರಾಗುತ್ತಿದ್ದಂತೆ 12ನೇ ವಯಸ್ಸಿನಲ್ಲಿ ಇವರಿಗಿಂತ 20 ವರ್ಷ ದೊಡ್ಡವರಾದ ಶ್ರೀಹರಿ ಸಪ್ಕಲ್ ಅವರೊಂದಿಗೆ ಬಾಲ್ಯ ವಿವಾಹವಾಯಿತು.

> "ಕೆಲವು ದಶಕಗಳ ಹಿಂದೆ ಸರ್ಕಾರಿ ನೌಕರಿಯಲ್ಲಿ ಒಬ್ಬ ವರ ಇದ್ದಾನೆಂದರೆ ಹೆಣ್ಣೆತ್ತವರು ಹೆಣ್ಣು ಕೊಡಲು ಪೈಪೋಟಿಗೆ ನಿಲ್ಲುತ್ತಿದ್ದರು. ಈಗ ಎಲ್ಲವೂ ಬದಲಾಗಿದೆ. ಹೆಣ್ಣು ಸರಿ ಸಮನಾಗಿ ಎಲ್ಲಾ ಕ್ಷೇತ್ರಗಳಲ್ಲೂ ಗಂಡಿಗಿಂತ ಹೆಚ್ಚು ದಕ್ಷತೆಯಿಂದ ಕೆಲಸ ಮಾಡುತ್ತಿದ್ದಾಳೆ. ಪುರುಷ ಪ್ರಧಾನವಾಗಿದ್ದ ಕಾಲವು ಹೋಗಿ ಮಹಿಳೆಯರಿಗೂ ಸಮಾನಾವಕಾಶ ಇರುವ ಕಾಲಘಟ್ಟದಲ್ಲಿದ್ದೇವೆ. ಈಗ ಎಲ್ಲವೂ ಉಲ್ಟಾಪಲ್ಟಾ!.

ಮದುವೆಯಾಗಿ 8 ವರ್ಷಗಳ ನಂತರ ಅವರ ಪತಿ ಕಿರುಕುಳ ನೀಡಿ ಮನೆಯಿಂದ ಹೊರಹಾಕಿದರು. ಸಿಂಧುರವರು ಹಸಿವನ್ನು ನೀಗಿಸಿಕೊಳ್ಳಲು ಭಿಕ್ಷೆ ಬೇಡಲು ಪ್ರಾರಂಭಿಸಿದರು. ಭಿಕ್ಷೆಯಲ್ಲಿ ಪೋಷಕರಿಂದ ಹೊರಹಾಕಲ್ಪಟ್ಟ ಅನೇಕ ಮಕ್ಕಳಿರುವುದನ್ನು ಅರಿತು, ಎಲ್ಲರನ್ನು ತನ್ನೊಟ್ಟಿಗೆ ಇಟ್ಟುಕೊಂಡು ಸ್ವಂತ ಮಕ್ಕಳಂತೆ ಸಾಕತೊಡಗಿದರು. ಅದಕ್ಕಾಗಿ ಹೆಚ್ಚು ಭಿಕ್ಷೆ ಬೇಡಬೇಕಾಯಿತು. ಕೊನೆಗೆ ಅನಾಥ ಮಕ್ಕಳಿಗೆ ತಾಯಿಯಾದಳು.

ಮಹಾರಾಷ್ಟ್ರದ ಅಮರಾವತಿ ಬಳಿಯ ಚಿಕಲ್ದಾರದಲ್ಲಿ ಹುಲಿ ಸಂರಕ್ಷಣಾ ಯೋಜನೆಯ ಕಾರಣದಿಂದ 84 ಬುಡಕಟ್ಟು ಗ್ರಾಮಗಳನ್ನು ಸ್ಥಳಾಂತರಿಸಲಾಯಿತು. ಅಸಹಾಯಕ ಬುಡಕಟ್ಟು ಗ್ರಾಮಸ್ಥರ ಪುನರ್ವಸತಿಗಾಗಿ ಸಪ್ಕಲ್‌ರವರು ಹೋರಾಡಿದರು. ಆಕೆಯ ಹೋರಾಟವನ್ನು ಮನಗಂಡ ಅರಣ್ಯ ಸಚಿವರು ನಿರ್ವಸತಿ ಬುಡಕಟ್ಟು ಕುಟುಂಬಗಳಿಗೆ ಸೂಕ್ತ ಪರಿಹಾರ ದೊರಕಿಸಿಕೊಟ್ಟರು. ತಾನೇ ಅನಾಥಳಾಗಿದ್ದರೂ ಅನಾಥ ಮಕ್ಕಳು ಹಾಗೂ ಬುಡಕಟ್ಟು ಜನಾಂಗಗಳ ಪರವಾಗಿ ತಾಯಿಯ ರೂಪದಲ್ಲಿ ನಿಂತು, ಮಾಡಿದ ಕೆಲಸಗಳಿಂದಾಗಿ ಅವರನ್ನು ಅನಾಥ ತಾಯಿಯಾಗಿ ಜನರು ಗುರುತಿಸಿದರು.

ಇಡೀ ಜೀವನವನ್ನು ಅನಾಥರಿಗೆ ಅರ್ಪಿಸಿಕೊಂಡ ಕಾರಣ ಪ್ರೀತಿಯಿಂದ ಮಾಯಿ ಎಂದು ಇವರನ್ನು ಕರೆಯಲಾಗುತ್ತಿತ್ತು. 1500ಕ್ಕೂ ಹೆಚ್ಚು ಅನಾಥ ಮಕ್ಕಳನ್ನು ನೋಡಿಕೊಂಡರು. ಮಕ್ಕಳ ಮೂಲಕ ಸಿಕ್ಕ ಅಳಿಯಂದಿರು, ಸೊಸೆಯಂದಿರ ದೊಡ್ಡ ಕುಟುಂಬವನ್ನು ಹೊಂದಿದರು. ಇವರು ಮಾಡಿದ ಸಾಧನೆಯನ್ನು ಗುರುತಿಸಿ 700ಕ್ಕೂ ಹೆಚ್ಚು ಪ್ರಶಸ್ತಿಗಳು ದೊರೆತಿವೆ. ಪ್ರಶಸ್ತಿಯೊಂದಿಗೆ ಬಂದ ಹಣವನ್ನು ಅನಾಥ ಮಕ್ಕಳಿಗೆ ಮನೆ ನಿರ್ಮಿಸುವುದಕ್ಕೆ ಭೂಮಿ ಖರೀದಿಸಲು ಬಳಸಿದರು.

ಭಾನ್ವರಿ ದೇವಿ

ರಾಜಸ್ಥಾನದಲ್ಲಿ ಬಾಲ್ಯವಿವಾಹ ತಡೆಗಟ್ಟಲು ಹೋರಾಡಿದ ಸಾಮಾಜಿಕ ಕಾರ್ಯಕರ್ತೆ ಭಾನ್ವರಿ ದೇವಿ. ಮಹಿಳಾ ಹಕ್ಕುಗಳ ಚಳುವಳಿಗೆ ಹೊಸ ದಿಕ್ಕನ್ನು ನೀಡಿದರು. ಅವರು ತೋರಿದ ಧೈರ್ಯವು ದೇಶದ ಕಾನೂನು ವ್ಯವಸ್ಥೆಯಲ್ಲಿ ಮಹತ್ವದ ಬದಲಾವಣೆಗೆ ಕಾರಣವಾಯಿತು. 1992ರಲ್ಲಿ ತಮ್ಮ ಕುಟುಂಬದಲ್ಲಿ ಬಾಲ್ಯವಿವಾಹವನ್ನು ತಡೆಯಲು ಮಾಡಿದ ಕಾರ್ಯದಿಂದಾಗಿ ಕೋಪಗೊಂಡ ಪುರುಷರಿಂದ ಸಾಮೂಹಿಕ ಅತ್ಯಾಚಾರಕ್ಕೆ ಒಳಗಾದರು. ಈ ಪ್ರಕರಣವು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಾಧ್ಯಮಗಳ ಗಮನ ಸೆಳೆಯಿತು. ಇದು ಭಾರತದ ಮಹಿಳಾ ಹಕ್ಕುಗಳ ಚಳವಳಿಯಲ್ಲಿ ಒಂದು ಮೈಲುಗಲ್ಲಾಯಿತು.

ಕೆಲಸದ ಸ್ಥಳದಲ್ಲಿ ನಡೆಯುವ ಲೈಂಗಿಕ ಕಿರುಕುಳಕ್ಕೆ ಸಂಬಂಧಿಸಿದಂತೆ 1997ರಲ್ಲಿ ವಿಶಾಖಾ ಮತ್ತು ಇತರರು ಹಾಗೂ ರಾಜಸ್ಥಾನ ರಾಜ್ಯದ ನಡುವಿನ ಪ್ರಕರಣದಲ್ಲಿ ಸುಪ್ರೀಂಕೋರ್ಟ್ ಕಿರುಕುಳಕ್ಕೆ ಮಾರ್ಗಸೂಚಿಗಳನ್ನು ರೂಪಿಸಿತು. ಇದನ್ನು ಭಾನ್ವರಿ ದೇವಿಯ ಪರಿಶ್ರಮದ ಕಾರಣ ಭಾರತದಲ್ಲಿನ ಮಹಿಳಾ ಗುಂಪುಗಳಿಗೆ ದೊರೆತ ಮಹತ್ವದ ಕಾನೂನು ವಿಜಯವೆಂದು ಪರಿಗಣಿಸಲಾಯಿತು.

ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಟ್ಟದ ಗೌರವ ಪುರಸ್ಕಾರಗಳನ್ನು ಪಡೆದಿದ್ದಾರೆ. ಬೀಜಿಂಗ್‌ನಲ್ಲಿ ನಡೆದ ವಿಶ್ವಸಂಸ್ಥೆಯ 4ನೇ ವಿಶ್ವ ಮಹಿಳೆಯರ ಸಮ್ಮೇಳನದಲ್ಲಿ ಭಾಗವಹಿಸಲು ಅವರನ್ನು ಆಹ್ವಾನಿಸಲಾಗಿತ್ತು. 1994ರಲ್ಲಿ ಅವರ ಅಸಾಧಾರಣ ಧೈರ್ಯ, ದೃಢ ನಿಶ್ಚಯ ಮತ್ತು ಬದ್ಧತೆಗಾಗಿ ನೀರ್ಜಾ ಭಾನೋಟ್ ಸ್ಮಾರಕ ಪ್ರಶಸ್ತಿಯನ್ನು ಅವರಿಗೆ ನೀಡಲಾಗಿತ್ತು.

ಭಾನ್ವರಿ ದೇವಿಯವರು ರಾಜಸ್ಥಾನದ ಜೈಪುರ ಬಳಿಯ ಭತೇರಿ ಎಂಬ ಹಳ್ಳಿಯಲ್ಲಿ 1950ರಲ್ಲಿ ಕುಂಬಾರ ವೃತ್ತಿಯ ಕುಟುಂಬದಲ್ಲಿ ಜನಿಸಿದರು. 1990ರ ದಶಕದಲ್ಲಿ ಬಾಲ್ಯವಿವಾಹಗಳು ಗ್ರಾಮದಲ್ಲಿ ಸಾಮಾನ್ಯವಾಗಿದ್ದವು. ಪೋಷಕರ ಮೌಢ್ಯವೋ ಅಥವಾ ಸಂಪ್ರದಾಯವೇ ಆಗಿತ್ತೋ ಭಾನ್ವರಿಯವರಿಗೆ ಏನೊಂದು ತಿಳಿಯದ ಬಾಲ್ಯದಲ್ಲಿ ಮದುವೆ ಆಯಿತು. ವಯಸ್ಸು ಐದಾರು ವರ್ಷಗಳಿರುವಾಗ ಮೋಹನ್‌ಲಾಲ್ ಪ್ರಜಾಪತ್ ಅವರನ್ನು ವಿವಾಹವಾದರು, ಅವರ ಪತಿ ಎಂಟು ಅಥವಾ ಒಂಬತ್ತು ವಯಸ್ಸಿನವರಾಗಿದ್ದರು. ಭತೇರಿಯಲ್ಲಿ ವಾಸ, ಇವರಿಗೆ ನಾಲ್ಕು ಮಕ್ಕಳು ಇಬ್ಬರು ಹೆಣ್ಣು ಮತ್ತು ಇಬ್ಬರು ಗಂಡು ಮಕ್ಕಳು.

ಶುಭ ದಿನಾಂಕವೆಂದು ಜೈನ ಮತ್ತು ಹಿಂದೂ ಧಾರ್ಮಿಕ ಹಬ್ಬದಂದು ನಡೆಯುತ್ತಿದ್ದ ಬಾಲ್ಯ ವಿವಾಹಗಳನ್ನು ನಿಲ್ಲಿಸಲು ಮನವೊಲಿಸುವ ಕಾರ್ಯವನ್ನು ಭಾನ್ವರಿಯವರು ಜಿಲ್ಲಾ ಮಹಿಳಾ ಅಭಿವೃದ್ಧಿ ಸಂಸ್ಥೆಯ ಸದಸ್ಯರೊಂದಿಗೆ ಕೈಜೋಡಿಸಿದರು. ಇದರಲ್ಲಿ ಸ್ಥಳೀಯರ ವಿರೋಧವನ್ನು ಎದುರಿಸಬೇಕಾಯಿತು.

ಗುಜರ್ ಕುಟುಂಬವೊಂದು ತಮ್ಮ ಒಂಬತ್ತು ತಿಂಗಳ ಶಿಶುಮಗಳ ಮದುವೆ ಮಾಡಲು ಹೊರಟಿದ್ದರು, ಭಾನ್ವರಿಯವರ ಪ್ರಯತ್ನದಿಂದಾಗಿ ಶಿಶು ಮದುವೆ ನಿಲ್ಲಿಸಲು ಯಶಸ್ವಿಯಾದರೂ ಮರುದಿನ ಬೆಳಗಿನ ಜಾವ ಎರಡು ಗಂಟೆಗೆ ಮದುವೆ ಆಯಿತು. ಬಾಲ್ಯ ವಿವಾಹಕ್ಕೆ ಪೊಲೀಸ್ ಕೇಸ್ ಆಗಲಿಲ್ಲ, ಬಹಳಷ್ಟು ಗುಜರ್ ಕುಟುಂಬಗಳು ಬಾಲ್ಯವಿವಾಹದಲ್ಲಿ ನಂಬಿಕೆ ಇಟ್ಟಿದ್ದರು. ಭಾನ್ವರಿ ದೇವಿಯ ಹೋರಾಟದ ಪರಿಣಾಮ ಭಾನ್ವರಿ ಮತ್ತು ಅವರ ಕುಟುಂಬವು ಸಾಮಾಜಿಕ ಮತ್ತು ಆರ್ಥಿಕ ಬಹಿಷ್ಕಾರಕ್ಕೆ ಒಳಗಾಯಿತು. ಗ್ರಾಮಸ್ಥರು ಇವರ ಕುಟುಂಬಕ್ಕೆ ಹಾಲು ಮಾರಾಟ ಮಾಡುವುದನ್ನು ಹಾಗೂ ಇವರು ಮಾಡಿದ ಮಣ್ಣಿನ ಮಡಕೆಗಳನ್ನು ಖರೀದಿಸಲು ನಿಲ್ಲಿಸಿದರು, ಇದರಿಂದ ಬಹಳ ಕಷ್ಟಕ್ಕೆ ಒಳಗಾದರು.

ಭಾನ್ವರಿ ದೇವಿಯವರು ಅತ್ಯಾಚಾರದಂತಹ ಹೀನ ಕೃತ್ಯಕ್ಕೆ ಬಲಿಯಾದದ್ದು ದುರ್ದೈವ ಹಾಗೂ ಸಮಾಜದಲ್ಲಿ ಹೆಣ್ಣು ಮಕ್ಕಳ ಮೇಲೆ ನಡೆಯುತ್ತಿದ್ದ ದೌರ್ಜನ್ಯದ ಪ್ರತೀಕವಾಗಿತ್ತು. ಎಲ್ಲಾ ಅಡೆ–ತಡೆಗಳನ್ನು ಮೆಟ್ಟಿ ಬಾಲ್ಯ ವಿವಾಹದ ವಿರುದ್ಧ ಹೋರಾಡಿದ ದಿಟ್ಟ ಮಹಿಳೆ ಇವರು.

ಹುಟ್ಟಿದ ಮೇಲೆ ಏನಾದರೂ ಸಾಧಿಸಬೇಕು ಎಂಬ ತುಮುಲ ಇರುವ ಹೆಣ್ಣು ಮಕ್ಕಳಿಗೆ ತೆಸ್ಸಿ ಥಾಮಸ್, ಸಿಂಧು ಶ್ರೀಹರಿ ಸಪ್ಕಲ ಮತ್ತು ಭಾನ್ವರಿ ದೇವಿಯರು ಇತಿಹಾಸದ ಪುಟಗಳಲ್ಲಿ ಕೈಮರವಾಗಿ ನಿಲುತ್ತಾರೆ. ಇವರಂತೆಯೇ ನಮ್ಮ ನಾಡಿನಲ್ಲಿ ಬಹಳಷ್ಟು ಅಪ್ರತಿಮ ಹೆಣ್ಣು ಮಕ್ಕಳು ಜನಿಸಿದ್ದರೂ, ಬೆಳಕಿಗೆ ಬರುವುದನ್ನು ಬಯಸದೆ ಮರೆಯಾದವರೇ ಹೆಚ್ಚು.

ಮೈಸೂರಿನ ನೈಸರ್ಗಿಕ ವಾತಾವರಣ ಉಳಿಸಿಕೊಂಡೇ ಮಾದರಿ ನಗರ ಮಾಡಬೇಕಿದೆ

● ಖ್ಯಾತ ಚಿತ್ರನಟ–ನಿರ್ದೇಶಕ ಪ್ರಕಾಶ್ ಬೆಳವಾಡಿ ಪ್ರತಿಪಾದನೆ ● 'ಗ್ರೇಟರ್ ಮೈಸೂರಿಗೆ ಸುಸ್ಥಿರ ಅಭಿವೃದ್ಧಿ ದೃಷ್ಟಿಕೋನ' ಕುರಿತು ವಿಚಾರ ಸಂಕಿರಣಕ್ಕೆ ಚಾಲನೆ



ಮೈಸೂರಿನ ಎನ್‌ಐಇ ನಲ್ಲಿ ಆಯೋಜಿಸಿದ್ದ 'ಗ್ರೇಟರ್ ಮೈಸೂರಿಗೆ ಸುಸ್ಥಿರ ಅಭಿವೃದ್ಧಿ ದೃಷ್ಟಿಕೋನ' ವಿಷಯದ ಕುರಿತು ವಿಚಾರ ಸಂಕಿರಣವನ್ನು ಹಿರಿಯ ನಟ, ನಿರ್ದೇಶಕ ಪ್ರಕಾಶ್ ಬೆಳವಾಡಿ ಉದ್ಘಾಟಿಸಿದರು.

ಮೈಸೂರು, ಮಾ.6(ಎಂಕೆ)– ಸಾಂಸ್ಕೃತಿಕ ರಾಜಧಾನಿ ಮೈಸೂರಿನ ನೈಸರ್ಗಿಕ ವಾತಾವರಣವನ್ನು ಯಥಾಸ್ಥಿತಿಯಲ್ಲಿ ಕಾಯ್ದುಕೊಳ್ಳುವ ಮೂಲಕ ಮಾದರಿ ನಗರವನ್ನಾಗಿ ಅಭಿವೃದ್ಧಿ ಮಾಡಬೇಕಿದೆ ಎಂದು ಹಿರಿಯ ನಟ, ನಿರ್ದೇಶಕ ಪ್ರಕಾಶ್ ಬೆಳವಾಡಿ ಅಭಿಪ್ರಾಯಪಟ್ಟರು.

ಮೈಸೂರಿನ ಮಾನಂದವಾಡಿ ರಸ್ತೆಯಲ್ಲಿರುವ ದಿ ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಇಂಜಿನಿಯರಿಂಗ್(ಎನ್‌ಐಇ) ಕಾಲೇಜಿನ ಡೈಮಂಡ್ ಜ್ಯುಬಿಲಿ ಸಭಾಂಗಣದಲ್ಲಿ ಫೆಡರೇಷನ್ ಆಫ್ ಇಂಡಿಯನ್ ಚೇಂಬರ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರಿ ಹಾಗೂ ಬೆಂಗಳೂರಿನ ಚಾಣಕ್ಯ ವಿಶ್ವವಿದ್ಯಾಲಯದ ಸಹಯೋಗದೊಂದಿಗೆ ಆಯೋಜಿಸಿದ್ದ 'ಗ್ರೇಟರ್ ಮೈಸೂರಿಗೆ ಸುಸ್ಥಿರ ಅಭಿವೃದ್ಧಿ ದೃಷ್ಟಿಕೋನ' ವಿಷಯದ ಕುರಿತು ವಿಚಾರ ಸಂಕಿರಣವನ್ನು ಉದ್ಘಾಟಿಸಿ ಮಾತನಾಡಿದರು.

ಅಭಿವೃದ್ಧಿಯ ನಾಗಾಲೋಟದಲ್ಲಿ ಗಾಳಿ, ನೀರು, ಮಣ್ಣು, ಸಮುದ್ರ ಸೇರಿದಂತೆ ಪ್ರತಿಯೊಂದು ಕಲುಷಿತಗೊಳ್ಳುತ್ತಿದ್ದು, ಪ್ರತಿ ವರ್ಷ ಕಲುಷಿತ ಪ್ರಮಾಣ ಹೆಚ್ಚುತ್ತಲೇ ಇದೆ. ಮತ್ತೊಂದೆಡೆ ತಾಪಮಾನ ಪ್ರತಿ ವರ್ಷ ಏರಿಕೆ ಆಗುತ್ತಿದೆ. ಭೂಮಿಯನ್ನು ವಿಷಪೂರಿತ ಗ್ರಹವನ್ನಾಗಿಸುತ್ತಿದ್ದೇವೆ. ನಮ್ಮ ಪೀಳಿಗೆ ಮತ್ತು ನಮ್ಮ ಹಿಂದಿನ ತಲೆಮಾರುಗಳು ಸೇರಿ ವಿಷಪೂರಿತ ಗ್ರಹದ ಪರಂಪರೆಯನ್ನು ಭವಿಷ್ಯದ ಪೀಳಿಗೆಗೆ ನೀಡುತ್ತಿದ್ದೇವೆ ಎಂದರು.

ಕಲುಷಿತ ವ್ಯವಸ್ಥೆಯನ್ನು ಸ್ವಚ್ಛಗೊಳಿಸಲು ಪ್ರಾರಂಭಿಸಿ, ಎಲ್ಲವನ್ನೂ ಸರಿಪಡಿಸಲು ಪ್ರಾರಂಭಿಸಿದರೆ ಅಥವಾ ಸುಮಾರು 100 ವರ್ಷಗಳ ಹಿಂದೆ ಅಸ್ತಿತ್ವದಲ್ಲಿದ್ದ ಗ್ರಹದ ಸಮತೋಲನವನ್ನು ಸ್ಥಾಪಿಸಲು 400 ವರ್ಷಗಳು ಬೇಕಾಗುತ್ತದೆ. ಅಷ್ಟರ ಮಟ್ಟಿಗೆ ವಾತಾವರಣ ಕಲುಷಿತಗೊಂಡಿದೆ. ಹಾಗಾಗಿ ಪ್ರತಿಯೊಬ್ಬರು ಸುಸ್ಥಿರ ಅಭಿವೃದ್ಧಿಗೆ ಆದ್ಯತೆ ನೀಡಬೇಕು ತಿಳಿಸಿದರು.

ಭಾರತೀಯ ನಗರಗಳಿಗೆ ಭವಿಷ್ಯದ ಮಾದರಿ ನಗರವನ್ನಾಗಿ ಮೈಸೂರನ್ನು ಅಭಿವೃದ್ಧಿ ಮಾಡಬೇಕಿದೆ. ಸುಸ್ಥಿರ ಮೈಸೂರು ನಿರ್ಮಾಣದ ವಿಚಾರದಲ್ಲಿ ಸಾರ್ವಜನಿಕ ಮತ್ತು ಸಾಂಸ್ಥಿಕ ಭಾಗವಹಿಸುವಿಕೆ ಮತ್ತು ಚುನಾಯಿತ ಪ್ರತಿನಿಧಿಗಳ ಸಹಕಾರ ಮುಖ್ಯವಾಗಿದೆ. ಯೋಜನೆಗಳನ್ನು ರೂಪಿಸುವಾಗ ವಸ್ತುನಿಷ್ಠ ವಿಶ್ಲೇಷಣೆ ಇರಬೇಕು. ಯೋಜನೆಯಡಿ ಏನನ್ನು ಮಾಡಲು ಬಯಸುತ್ತೀರಿ ಎಂಬುದರ ಅಲ್ಪಾವಧಿ ಮತ್ತು ದೀರ್ಘಾವಧಿಯ ಉದ್ದೇಶಗಳು ಸ್ಪಷ್ಟವಾಗಿರಬೇಕು ಎಂದು ಸಲಹೆ ನೀಡಿದರು.

ಫೆಡರೇಷನ್ ಆಫ್ ಇಂಡಿಯನ್ ಚೇಂಬರ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರಿಯ ಮುಖ್ಯಸ್ಥ ಶಾಜು ಮಂಗಲಂ, ಎನ್‌ಐಇ ಅಧ್ಯಕ್ಷ ಡಾ.ಎಂ.ಎಸ್.ರಂಗನಾಥ್, ಕಾರ್ಯದರ್ಶಿ ಎಸ್.ಬಿ.ಉದಯ ಶಂಕರ್, ಪ್ರಾಂಶುಪಾಲ ಡಾ.ಬಿ.ಎಸ್.ನಾಗೇಂದ್ರ ಪರಾಶಾರ್, ಈ ಹಿಂದಿನ ಪ್ರಾಂಶುಪಾಲರಾದ ಡಾ.ಕೆ.ಸಿ.ಮಂಜುನಾಥ್, ಡಾ.ಜಿ.ಎಲ್.ಶೇಖರ್, ಸಂಯೋಜಕ ಡಾ.ಸಂಜಿತ್ ಎಸ್.ಅಂಚನ್, ಪ್ರಾಧ್ಯಾಪಕ ಡಾ.ಬಾಲಾಜಿ ಮತ್ತಿತರರಿದ್ದರು.

ನಾಳೆ ಮಹಿಳಾ ದಿನಾಚರಣೆ

ಮೈಸೂರು, ಮಾ.6(ಜಿಎ)–ಚಿತ್ಪಾವನ ಬ್ರಾಹ್ಮಣ ಸಂಘದ ವತಿಯಿಂದ ಮಾ.8ರಂದು ಮಧ್ಯಾಹ್ನ 3.30ಕ್ಕೆ ಕುವೆಂಪುನಗರ ಉತ್ತರ ಕನ್ನಡ ಜಿಲ್ಲಾ ಸಾಂಸ್ಕೃತಿಕ ಸಂಘದ ಆವರಣದಲ್ಲಿ ಮಹಿಳಾ ದಿನಾಚರಣೆ ಆಯೋಜಿಸಲಾಗಿದೆ ಎಂದು ಸಂಘದ ಅಧ್ಯಕ್ಷ ದಿನೇಶ್ ಚಿಪಳೂಣಕರ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾರ್ಯಕ್ರಮದಲ್ಲಿ ಉತ್ತರ ಕನ್ನಡ ಜಿಲ್ಲಾ ಸಾಂಸ್ಕೃತಿಕ ಸಂಘ, ಕರಾಡ ಬ್ರಾಹ್ಮಣ ಸಂಘ ಸಹಯೋಗ ನೀಡಿದ್ದು, ಕಾರ್ಯಕ್ರಮದಲ್ಲಿ ಮಹಿಳೆಯರಿಂದ ಭರತನಾಟ್ಯ, ಸಂಗೀತ, ವಿಶೇಷ ಆಕರ್ಷಣೆಯಾಗಿ ಬೆಂಗಳೂರಿನ ಚಿತ್ಪಾವನ ಮಹಿಳಾ ಯಕ್ಷಗಾನ ತಂಡದಿಂದ ದಕ್ಷಯಜ್ಞ ಯಕ್ಷಗಾನ ಪ್ರದರ್ಶನವಿದೆ. ಕಾರ್ಯಕ್ರಮವನ್ನು ಶ್ರೀ ಶಾರದಾ ವಿಶ್ವಭಾವೈಕ್ಯ ಆಶ್ರಮದ ಅಧ್ಯಕ್ಷರಾದ ಮಾತಾಜಿ ಅಮೋಘಮಯಿ ಉದ್ಘಾಟಿಸುವರು ಎಂದರು. ಗೋಷ್ಠಿಯಲ್ಲಿ ರಾಮಚಂದ್ರಭಟ್, ಕೃಷ್ಣ ಮೋಹನ್, ಉಮೇಶ್ ದಿವೇಕರ್, ಸಂಧ್ಯಾರವಿ ಉಪಸ್ಥಿತರಿದ್ದರು.

ಉಚಿತ ಆರೋಗ್ಯ ತಪಾಸಣಾ ಶಿಬಿರ

ಮೈಸೂರು,ಮಾ.6–ಮೈಸೂರಿನ ಮಂಡಿ ಮೊಹಲ್ಲಾ, ಕಬೀರ್ ರಸ್ತೆ ಮಂಡಿ ಪೊಲೀಸ್ ಠಾಣೆ ಹತ್ತಿರವಿರುವ ಕಂಠಿಮಲ್ಲಣ್ಣ ಕಲ್ಯಾಣ ಮಂದಿರದಲ್ಲಿ ಮಾ.10ರಂದು ಬೆಳಗ್ಗೆ 9.30ರಿಂದ ಮಧ್ಯಾಹ್ನ 2ರವರೆಗೆ ಉಚಿತ ಆರೋಗ್ಯ ತಪಾಸಣಾ ಶಿಬಿರ ಹಮ್ಮಿಕೊಳ್ಳಲಾಗಿದೆ. ಮಾಹಿತಿಗೆ ಬಸವರಾಜ್, ಮೊ. 94487 53597, ಜೈಪ್ರಕಾಶ್, ಮೊ. 99161 554 53, 94487 38657 ಸಂಪರ್ಕಿಸಬಹುದು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಕಾನೂನು ಅಧ್ಯಯನ ವೃತ್ತಿ ಅಲ್ಲ, ಸಾಮಾಜಿಕ ಜವಾಬ್ದಾರಿ

ಸಿವಿಲ್ ನ್ಯಾಯಾಧೀಶರ ಅಭಿನಂದನ ಸಮಾರಂಭದಲ್ಲಿ ಅಭಿಪ್ರಾಯ

ಮೈಸೂರು, ಮಾ.6(ಜಿಎ)–ಕಾನೂನನ್ನು ಅಭ್ಯಾಸ ಮಾಡುವವರು ಈ ಕ್ಷೇತ್ರದಲ್ಲಿ ಮಾನವೀಯ ಮೌಲ್ಯಗಳನ್ನು ಎತ್ತಿ ಹಿಡಿಯುವ ಮತ್ತು ರಕ್ಷಿಸುವ ಮಹತ್ಕಾರ್ಯ ಮಾಡಬೇಕಾಗಿದೆ ಎಂದು ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯದರ್ಶಿ ಎಸ್.ಪಿ.ಮಂಜುನಾಥ ಅಭಿಪ್ರಾಯಪಟ್ಟರು.

ಮೈಸೂರಿನ ಕುವೆಂಪುನಗರದಲ್ಲಿರುವ ಜೆಎಸ್‌ಎಸ್ ಕಾನೂನು ಕಾಲೇಜಿನಲ್ಲಿ ಸಿವಿಲ್ ನ್ಯಾಯಾಧೀಶರಾಗಿ ಆಯ್ಕೆಯಾಗಿರುವ ಕಾಲೇಜು ವಿದ್ಯಾರ್ಥಿಗಳನ್ನು ಅಭಿನಂದಿಸಿ ಮಾತನಾಡಿದ ಅವರು, ಕಾನೂನು ಅಧ್ಯಯನವು ಕೇವಲ ವೃತ್ತಿಗಾಗಿ ಅಲ್ಲ. ಅದು ಒಂದು ಸಾಮಾಜಿಕ ಜವಾಬ್ದಾರಿಯಾಗಿದೆ. ಹೊಸದಾಗಿ ನ್ಯಾಯಾ ಧೀಶರಾಗಿ ನೇಮಕ ಗೊಂಡಿರುವವರು ಪ್ರಾಮಾಣಿಕತೆ, ಪರಿಶ್ರಮ ಮತ್ತು ನಿಷ್ಠೆಯಿಂದ ಸಮಾಜಕ್ಕೆ ಉತ್ತಮ ಸೇವೆ ನೀಡಲು ಶ್ರಮಿಸಿ ಎಂದು ಸಲಹೆ ನೀಡಿದರು.

ಪ್ರಜಾಪ್ರಭುತ್ವದಲ್ಲಿ ಅತ್ಯಂತ ದೊಡ್ಡ ರಾಷ್ಟ್ರವಾಗಿರುವ ನಮ್ಮ ಭಾರತ ದೇಶದಲ್ಲಿ ನ್ಯಾಯಾಂಗವನ್ನು ಉನ್ನತ ಸ್ಥಾನದಲ್ಲಿ ಇಟ್ಟಿದ್ದೇವೆ. ಅದರ ಮೇಲೆ ಪೂರ್ಣ ನಂಬಿಕೆಯನ್ನು ಹೊಂದಿದ್ದೇವೆ. ನ್ಯಾಯಾ ಧೀಶರು ನೀಡುವ ತೀರ್ಪುಗಳು ಸಮಾಜದಲ್ಲಿ ಶಾಂತಿ ಮತ್ತು ನ್ಯಾಯದ ಸ್ಥಾಪನೆಗೆ ದಾರಿ ಮಾಡಿ ಕೊಡುತ್ತವೆ. ಆದ್ದರಿಂದ ನೂತನವಾಗಿ ನೇಮಕಗೊಂಡಿರುವ ನೀವು ಅದೇ ಹಾದಿಯಲ್ಲಿ ಸಾಗಿ, ಜನರ ನಂಬಿಕೆಯನ್ನು ಉಳಿಸಿಕೊಳ್ಳಬೇಕು ಎಂದರು.



ಮೈಸೂರಿನ ಜೆಎಸ್‌ಎಸ್ ಕಾನೂನು ಕಾಲೇಜಿನಲ್ಲಿ ಸಿವಿಲ್ ನ್ಯಾಯಾಧೀಶರಾಗಿ ಆಯ್ಕೆಯಾದ ಹಳೇ ವಿದ್ಯಾರ್ಥಿಗಳನ್ನು ಅಭಿನಂದಿಸಲಾಯಿತು.

ಸಾಧನೆಗೆ ಕಠಿಣ ಪರಿಶ್ರಮ, ಹಿಡಿದ ಕೆಲಸದಲ್ಲಿ ಶ್ರದ್ಧೆ, ಏಕಾಗ್ರತೆ, ತನ್ಮಯತೆ ಬಹಳ ಮುಖ್ಯ. ಬೇರೆಯವರನ್ನು ನೋಡಿ ಅವರಂತೆ ನಾವೂ ಕೂಡಾ ಆಗಬೇಕು ಎಂದುಕೊಂಡರೆ ಸಾಧನೆ ಸಾಧ್ಯವಾಗುವುದಿಲ್ಲ. ಗುರಿಯನ್ನು ಮುಟ್ಟಲು ಯೋಜನೆ ಹಾಕಿಕೊಳ್ಳಬೇಕು. ಗುರುವಿನ ಮಾರ್ಗದರ್ಶನ ಪಡೆದುಕೊಳ್ಳಬೇಕು. ಆಗ ಮಾತ್ರ ಯಶಸ್ಸಿನ ಮೆಟ್ಟಿಲುಗಳನ್ನು ಹತ್ತಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ಜೆಎಸ್‌ಎಸ್ ಕಾನೂನು ಕಾಲೇಜು ಕೇವಲ ಕಾನೂನು ಪದವೀಧರರನ್ನು ಉತ್ಪಾದನೆ ಮಾಡದೆ, ಸಾಮಾಜಿಕ ನ್ಯಾಯ, ಸಮಾನತೆ, ಸಂವಿಧಾನ ಆಶಯ ಮತ್ತು ಮೌಲ್ಯಗಳನ್ನು ಎತ್ತಿ ಹಿಡಿಯುವ ಕೆಲಸ ಮಾಡುತ್ತಿದೆ. ಇಲ್ಲಿ ಪ್ರವೇಶ ಪಡೆದ ವಿದ್ಯಾರ್ಥಿಗಳನ್ನು ನಿಷ್ಠಾವಂತ ನ್ಯಾಯಾಧೀಶರನ್ನಾಗಿ, ವಕೀಲರುಗಳು ಹಾಗೂ ಕಾನೂನು ತಜ್ಞರನ್ನು ಸಮಾಜಕ್ಕೆ ನೀಡುವಲ್ಲಿ ತನ್ನದೇ ಆದ ಪಾತ್ರವನ್ನು ವಹಿಸುತ್ತಿದೆ ಎಂದರು.

ಈ ವೇಳೆ ಹಿರಿಯ ವಕೀಲರು ಹಾಗೂ ಲಾಗೈಡ್ ಕನ್ನಡ ಕಾನೂನು ಮಾಸಪತ್ರಿಕೆ ಗೌರವ ಸಂಪಾದಕರು ಆದ ಹಿರಿಯ ವಕೀಲ ಹೆಚ್.ಎನ್.ವೆಂಕಟೇಶ್ ಮಾತನಾಡಿ, ಈಗ ಎಲ್ಲೆಡೆ ಗ್ಯಾರಂಟಿಗಳು ಸದ್ದು ಮಾಡುತ್ತಿವೆ. ಆದರೆ, ಮೈಸೂರಿನ ಜೆಎಸ್‌ಎಸ್ ವಿದ್ಯಾ ಸಂಸ್ಥೆಯೂ ಅನ್ನದಾಸೋಹ,ಅಕ್ಷರ ದಾಸೋಹ, ಹಾಗೂ ಉದ್ಯೋಗ ದಾಸೋಹ– ಈ ಮೂರು ಗ್ಯಾರಂಟಿಯನ್ನು ಬಹಳ ಹಿಂದೆಯೇ ನೀಡಿದ್ದು, ಇವು ಜೀವನ ಪರ್ಯಂತ ಇರುತ್ತವೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಸಿವಿಲ್ ಜಡ್ಜ್ ಹುದ್ದೆಗೆ ಆಯ್ಕೆಯಾಗಿರುವ ಕಾಲೇಜಿನ ವಿದ್ಯಾರ್ಥಿಗಳು ಅವರ ಕಠಿಣ ಪರಿ ಶ್ರಮ ಮತ್ತು ಸಮರ್ಪಣೆಯ ಪ್ರತಿಫಲ. ಮುಂದೆ ಸಮಾಜಕ್ಕೆ ಕೊಡುಗೆ ನೀಡಿ ಎಂದು ಹಾರೈಸಿ ದರಲ್ಲದೇ, ನಿಮ್ಮ ಸಾಧನೆ ಇತರೆ ವಿದ್ಯಾರ್ಥಿಗಳಿಗೆ ಪ್ರೇರಣೆಯಾಗಲಿ ಎಂದು ವೆಂಕಟೇಶ್ ಆಶಿಸಿದರು.

ಕಾರ್ಯಕ್ರಮದಲ್ಲಿ ಇದೇ ಕಾಲೇಜಿನಲ್ಲಿ ವ್ಯಾಸಂಗ ಮಾಡಿ ಈಗ ಸಿವಿಲ್ ನ್ಯಾಯಾಧೀಶರಾಗಿ ನೇಮಕಗೊಂಡಿರುವ ಕೆ.ಬಿ. ರೋಶ್ನಿ, ರಾಹುಲ್ ಆದಿನಾಥ ನ್ಯಾಮಗೌಡ, ಮಹದೇವ ಕೆ.ಗೌಡ, ಕೆ.ಸಿ.ಸುಹಾಸ್, ರಶ್ಮಿ ವೀರಭದ್ರ, ಸುಪ್ರಿಯಾ ನವಲಿ, ನಿತ್ಯಾ ಎನ್. ಗುಜ್ಜಾರ್ ಅವರನ್ನು ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ಜೆಎಸ್‌ಎಸ್ ಮಹಾ ವಿದ್ಯಾಪೀಠದ ಕಾರ್ಯ ನಿರ್ವಾಹಕ ಕಾರ್ಯ ದರ್ಶಿ ಡಾ.ಸಿ.ಜಿ. ಬೆಟಸೂರಮಠ, ಕಾಲೇಜಿನ ಕಾರ್ಯ ನಿರ್ವಾಹಕ ಪ್ರೊ.ಕೆ.ಎಸ್.ಸುರೇಶ್, ಪ್ರಾಂಶುಪಾಲೆ ಡಾ.ಎನ್.ವಾಣಿಶ್ರೀ ಉಪಸ್ಥಿತರಿದ್ದರು.

ಆಭರಣ ತಯಾರಿಕ ಮಳಿಗೆಯಲ್ಲಿ ಕಾರ್ಮಿಕನಿಂದಲೇ 900 ಗ್ರಾಂ 24 ಕ್ಯಾರೆಟ್ ಚಿನ್ನ ಕಳವು

ಮಂಡಿ ಠಾಣೆಯಲ್ಲಿ ಪ್ರಕರಣ ದಾಖಲು

ಮೈಸೂರು,ಮಾ.6(ಪಿಎಂ)– ಆಭರಣ ತಯಾರಿಕ ಮಳಿಗೆಯಿಂದ ಕೆಲಸಕ್ಕಿದ್ದ ಕಾರ್ಮಿಕನೇ 900 ಗ್ರಾಂ 24 ಕ್ಯಾರೆಟ್‌ನ ಗಟ್ಟಿಚಿನ್ನ ಕದ್ದು ಪರಾರಿಯಾಗಿರುವ ಆರೋಪದಡಿ ನಗರದ ಮಂಡಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಸದರಿ ಮಳಿಗೆ ಮಾಲೀಕ ಔಲಿಯಾ ಅಲಿ ಶೇಖ್ ನೀಡಿದ ದೂರಿನನ್ವಯ ಪಶ್ಚಿಮ ಬಂಗಾಳ ಮೂಲದ ಸುಜಯ್ ಸಮಂತ ಅಲಿಯಾಸ್ ಸುದೀಪ್ ಮೈಥಿ ಸೇರಿದಂತೆ ಇಬ್ಬರ ವಿರುದ್ಧ ಪ್ರಕರಣ ದಾಖಲಾಗಿದೆ.

ಕಳೆದ 18 ವರ್ಷಗಳಿಂದ ನನ್ನ ಮನೆಯ 3ನೇ ಮಹಡಿಯಲ್ಲಿ ಆಭರಣ ತಯಾರಿಕಾ ಅಂಗಡಿ ಇಟ್ಟಿಕೊಂಡಿರುತ್ತೇನೆ. ನನಗೆ ಪರಿಚಯವಿರುವ ಪಶ್ಚಿಮ ಬಂಗಾಳದ ಗಣೇಶ್ ಗುಚೈತ್ ಅವರು ಸುಜಯ್ ಸುಮಂತನನ್ನು ನನ್ನ ಅಂಗಡಿಯಲ್ಲಿ ಕೆಲಸ ಕಲಿಯಲು 2026ರ ಜ.19ರಂದು ಪಶ್ಚಿಮ ಬಂಗಾಳದಿಂದ ಕಳುಹಿಸಿಕೊಟ್ಟಿದ್ದರು ಎಂದು ಔಲಿಯಾ ಅಲಿ ಶೇಖ್ ದೂರಿನಲ್ಲಿ ತಿಳಿಸಿದ್ದಾರೆ.

ನಾನು ಪ್ರತಿದಿನ ನಮ್ಮ ಗ್ರಾಹಕರಿಂದ ಆರ್ಡರ್ ತೆಗೆದುಕೊಂಡು ಸುಜಯ್ ಸುಮಂತ ಹಾಗೂ ನನ್ನ ಬಳಿ ಕೆಲಸ ಮಾಡುವ ಇತರೆ ಹುಡುಗರಿಗೆ ಗಟ್ಟಿಚಿನ್ನ ನೀಡಿ ಅವರಿಂದ ಆಭರಣ ಮಾಡಿಸಿ ಪಡೆಯುತ್ತಿದ್ದೆ. ಅದೇ ರೀತಿ ಇದೇ ಜ.21ರಂದು ಸುಜಯ್ ಸಮಂತನಿಗೆ 24 ಕ್ಯಾರೆಟ್‌ನ 900 ಗ್ರಾಂ ಗಟ್ಟಿಚಿನ್ನ ನೀಡಿ ವಿವಿಧ ಆಭರಣಗಳನ್ನು ತಯಾರಿಸಿಕೊಡಲು ಹೇಳಿದ್ದೆ. ಜ.28ರಂದು ಮಳಿಗೆಗೆ ಬಾರದೇ ನಾಪತ್ತೆಯಾಗಿದ್ದಾನೆ. ಗಣೇಶ್ ಗುಚೈತ್ ಹಾಗೂ ಸುಜಯ್ ಸುಮಂತ ಇಬ್ಬರು ಸೇರಿ ನನಗೆ ವಂಚಿಸಿದ್ದಾರೆ. ಈ ಇಬ್ಬರ ಮೊಬೈಲ್ ಈಗ ಸ್ವಿಚ್‌ಆಫ್ ಆಗಿವೆ ಎಂದು ಔಲಿಯಾ ಅಲಿ ಶೇಖ್ ಗುರುವಾರ ಮಂಡಿ ಠಾಣೆಗೆ ನೀಡಿದ ದೂರಿನಲ್ಲಿ ಆರೋಪಿಸಿದ್ದಾರೆ.

2025ರ ಯುಪಿಎಸ್‌ಸಿ ಪರೀಕ್ಷೆ ಫಲಿತಾಂಶ: ಅನುಜ್ ಅಗ್ನಿಹೋತ್ರಿ ಟಾಪರ್; 958 ಅಭ್ಯರ್ಥಿಗಳು ಪಾಸ್

ನವದೆಹಲಿ: ಕೇಂದ್ರ ಲೋಕಸೇವಾ ಆಯೋಗ(ಯುಪಿಎಸ್‌ಸಿ) ಶುಕ್ರವಾರ 2025ನೇ ಸಾಲಿನ ನಾಗರಿಕ ಸೇವಾ ಪರೀಕ್ಷೆಯ ಫಲಿತಾಂಶ ಪ್ರಕಟಿಸಿದ್ದು, ಅನುಜ್ ಅಗ್ನಿಹೋತ್ರಿ ಅಗ್ರಸ್ಥಾನ ಪಡೆದಿದ್ದಾರೆ. ರಾಜೇಶ್ವರಿ ಸುವೆ ಎಂ ಮತ್ತು ಆಕಾಶ್ ಧುಲ್ ಅವರು ಕ್ರಮವಾಗಿ ಎರಡನೇ ಮತ್ತು ಮೂರನೇ ರ್‍ಯಾಂಕ್ ಗಳಿಸಿದ್ದಾರೆ.



ಅನುಜ್

ಈ ವರ್ಷ ಒಟ್ಟು 958 ಅಭ್ಯರ್ಥಿಗಳು ಪರೀಕ್ಷೆಯಲ್ಲಿ ಪಾಸ್ ಆಗಿದ್ದು, ನಾಗರಿಕ ಸೇವೆಗೆ ಅರ್ಹತೆ ಪಡೆದಿದ್ದಾರೆ. ಅವರ ಹೆಸರನ್ನು ವಿವಿಧ ಕೇಂದ್ರ ನಾಗರಿಕ ಸೇವೆಗಳ ನೇಮಕಾತಿಗೆ ಶಿಫಾರಸ್ಸು ಮಾಡಲಾಗಿದೆ ಎಂದು ಆಯೋಗ ತಿಳಿಸಿದೆ.

ನಾಗರಿಕ ಸೇವೆಗೆ ಯುಪಿಎಸ್‌ಸಿ ನಡೆಸುವ ಈ ಪರೀಕ್ಷೆಯು ಮೂರು ಹಂತಗಳನ್ನು ಒಳಗೊಂಡಿರುತ್ತದೆ. ಪ್ರಾಥಮಿಕ, ಮುಖ್ಯ ಮತ್ತು ಸಂದರ್ಶನ. ಈ ಮೂರು ಹಂತಗಳಲ್ಲಿ ಪಾಸ್ ಆದವರನ್ನು ಭಾರತೀಯ ಆಡಳಿತ ಸೇವೆ(ಐಎಎಸ್), ಭಾರತೀಯ ವಿದೇಶಾಂಗ ಸೇವೆ (ಐಎಫ್‌ಎಸ್) ಮತ್ತು ಭಾರತೀಯ ಪೊಲೀಸ್ ಸೇವೆ(ಐಪಿಎಸ್) ಸೇರಿದಂತೆ ಇತರ ಹುದ್ದೆಗಳಿಗೆ ಆಯ್ಕೆ ಮಾಡಲಾಗುತ್ತದೆ.

ಅಭ್ಯರ್ಥಿಗಳು ಆಯೋಗದ ಅಧಿಕೃತ ವೆಬ್‌ಸೈಟ್‌ಗಳಾದ upsc.gov.in ಅಥವಾ upsconline.nic.in ಗೆ ಭೇಟಿ ನೀಡಿ ತಮ್ಮ ಫಲಿತಾಂಶವನ್ನು ವೀಕ್ಷಿಸಬಹುದು.

ಇಡೀ ದೇಶಕ್ಕೆ ಪ್ರಥಮ ಸ್ಥಾನ ಪಡೆದಿರುವ ಅನುಜ್ ಅಗ್ನಿಹೋತ್ರಿ ರಾಜಸ್ಥಾನದ ಜೋಧ್‌ಪುರ ಮೂಲದವರಾಗಿದ್ದು, 2023ರಲ್ಲಿ ಜೋಧ್‌ಪುರದ ಪ್ರತಿಷ್ಠಿತ ಏಮ್ಸ್ (AIIMS Jodhpur)ನಲ್ಲಿ ಎಂಬಿಬಿಎಸ್ (MBBS) ಪದವಿ ಪಡೆದಿದ್ದಾರೆ. ಪ್ರಸ್ತುತ ದೆಹಲಿ, ಅಂಡಮಾನ್ ಮತ್ತು ನಿಕೋಬಾರ್ ದ್ವೀಪಗಳ ನಾಗರಿಕ ಸೇವೆಯಲ್ಲಿ ಅಧಿಕಾರಿಯಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಕರ್ತವ್ಯದ ಜೊತೆಯಲ್ಲೇ ಈಗ ಅತ್ಯುನ್ನತ ಸಾಧನೆ ಮಾಡಿದ್ದಾರೆ.

ಯುಪಿಎಸ್ ಪರೀಕ್ಷೆಯಲ್ಲಿ ಮೈಸೂರಿನ ಸೂರಜ್, ಮಂಡ್ಯದ ಧನಂಜಯ ಯಶಸ್ವಿ



ಕೆ.ಎಲ್.ಸೂರಜ್



ಧನಂಜಯ

ಮೈಸೂರು: ಮೈಸೂರಿನ ನಿವೃತ್ತ ಪೊಲೀಸ್ ಸಿಬ್ಬಂದಿಯ ಪುತ್ರ ಕೆ.ಎಲ್.ಸೂರಜ್ ಹಾಗೂ ಮಂಡ್ಯದ ರೈತ ಕುಟುಂಬದ ಧನಂಜಯ ಯುಪಿಎಸ್‌ಸಿ ಪರೀಕ್ಷೆಯಲ್ಲಿ ಯಶಸ್ವಿಯಾಗಿದ್ದಾರೆ.

ಮೂಲತಃ ಕೊಡಗು ಜಿಲ್ಲೆ, ವಿರಾಜಪೇಟೆಯವರಾದ ಮೈಸೂರಿನ ಸಿದ್ಧಾರ್ಥನಗರ ನಿವಾಸಿ ಕೆ.ಬಿ.ಲಿಂಗರಾಜ್ ಪುತ್ರ ಕೆ.ಎಲ್. ಸೂರಜ್ 525 ನೇ ರ್‍ಯಾಂಕ್ ಹಾಗೂ ಮಂಡ್ಯ ಜಿಲ್ಲೆ, ನಾಗಮಂಗಲ ತಾಲೂಕಿನ ಕರಡಹಳ್ಳಿ ಗ್ರಾಮದ ರಾಮಚಂದ್ರ ಹಾಗೂ ಮಂಗಳಮ್ಮ ದಂಪತಿಯ ಪುತ್ರ ಧನಂಜಯ 554ನೇ ರ್‍ಯಾಂಕ್ ಗಳಿಸಿದ್ದಾರೆ.

ಕಳೆದ ಬಾರಿ 713ನೇ ರ್‍ಯಾಂಕ್ ಪಡೆದು ಕರ್ನಾಟಕ ಕೇಡರ್‌ನಲ್ಲೇ ಐಪಿಎಸ್ ಆಗಿ ಆಯ್ಕೆಯಾಗಿ, ಸದ್ಯ ಹೈದರಾಬಾದ್‌ನ ಎನ್‌ಪಿಎನಲ್ಲಿ ತರಬೇತಿ ಪಡೆಯುತ್ತಿರುವ 29 ವರ್ಷದ ಸೂರಜ್, ಈ ಬಾರಿ ರ್‍ಯಾಂಕ್ ಅನ್ನು ಗಣನೀಯವಾಗಿ ಸುಧಾರಿಸಿಕೊಂಡಿದ್ದಾರೆ.

ಮೈಸೂರಿನ ಜೆಎಸ್‌ಎಸ್ ಶಾಲೆಯಲ್ಲಿ ಪ್ರಾಥಮಿಕ ಶಿಕ್ಷಣ, ಹಳಿಕೆಯಲ್ಲಿ 8ರಿಂದ 10ನೇ ತರಗತಿ, ಮೈಸೂರಿನ ವಿದ್ಯಾವರ್ಧಕ ಗೋಲ್ಡನ್ ಜ್ಯುಬಿಲಿ ಕಾಲೇಜಿನಲ್ಲಿ ಪಿಯುಸಿ ಮುಗಿಸಿದ ನಂತರ ಎಸ್‌ಜೆಸಿಇ ಕಾಲೇಜಿನಲ್ಲಿ ಕಂಪ್ಯೂಟರ್ ಸೈನ್ಸ್ ಎಂಜಿನಿಯರಿಂಗ್ ಪದವಿ ಪಡೆದಿರುವ ಸೂರಜ್, ಈ ಬಾರಿ ಉತ್ತಮ ರ್‍ಯಾಂಕ್ ಪಡೆದಿರುವುದಕ್ಕೆ ಸಂತಸ ವ್ಯಕ್ತಪಡಿಸಿದ್ದಾರೆ.

ಐಎಎಸ್ ಸಿಕ್ಕರೆ ಖುಷಿ: ರ್‍ಯಾಂಕ್ ವೃದ್ಧಿಗೆಂದು ಮತ್ತೊಮ್ಮೆ ಪರೀಕ್ಷೆ ತೆಗೆದುಕೊಂಡಿದ್ದೆ. ಈ ಪ್ರಯತ್ನದಲ್ಲಿ 200ಕ್ಕೂ ಜಾಸ್ತಿ ಸ್ಥಾನ ಸುಧಾರಿಸಿದೆ. ಐಎಎಸ್ ಸಿಕ್ಕರೆ ಖುಷಿ. ಸಿಗದಿದ್ದರೆ ಕರ್ನಾಟಕ ಕೇಡರ್‌ನಲ್ಲೇ ಐಪಿಎಸ್ ಸಿಕ್ಕಿರುವುದರಿಂದ ಅದರಲ್ಲೇ ಮುಂದುವರಿಯುತ್ತೇನೆ. 3ನೇ ಪ್ರಯತ್ನದಲ್ಲಿ ಐಪಿಎಸ್ ಆಗಿತ್ತು. ಇದೀಗ 4ನೇ ಪ್ರಯತ್ನದಲ್ಲಿ ರ್‍ಯಾಂಕ್ ಸುಧಾರಿಸಿದೆ. 10 ತಿಂಗಳು ರಜೆ ಪಡೆದು ಓದಿದ್ದೆ. ಸ್ವಯಂ ಅಧ್ಯಯನದ ಜೊತೆಗೆ ಐಚ್ಛಿಕ ವಿಷಯವಾದ ಆಂಥ್ರೊಪಾಲಜಿಗೆ ಮಾತ್ರ ದೆಹಲಿಯ ಲೆವೆಲ್ ಅಪ್ ಮೂಲಕ ಆನ್‌ಲೈನ್ ಟ್ಯೂಷನ್ ಪಡೆದಿದ್ದೆ ಎಂದು ತಿಳಿಸಿದ್ದಾರೆ.

ಯುಪಿಎಸ್‌ಸಿ ಪರೀಕ್ಷೆಯಲ್ಲಿ ಎಲ್ಲವೂ ನಿರೀಕ್ಷಿಸಿದಂತೆ ಇರುವುದಿಲ್ಲ. ನಿರಂತರ ಪ್ರಯತ್ನದ ಜೊತೆಗೆ ಕಠಿಣ ಪರಿಶ್ರಮ ಅತ್ಯಗತ್ಯ. ಎಐ ತಂತ್ರಜ್ಞಾನ ಬಳಸಿಕೊಂಡು ಆನ್‌ಲೈನ್‌ನಲ್ಲೇ ಟ್ಯೂಷನ್ ತೆಗೆದು ಕೊಳ್ಳಬಹುದು. ಸ್ಟಡಿ ಪ್ಲಾನ್, ಸಂಪನ್ಮೂಲದ ಪಟ್ಟಿ, ಅಣಕು ಪ್ರಶ್ನೋತ್ತರ ಮುಂದಾದ ಸಿದ್ಧತೆಗಳಿಗೆ ಎಐ ಬಳಸಿದೆ. ನಿತ್ಯ ತಪ್ಪದೆ ದಿನಪತ್ರಿಕೆ ಓದುತ್ತಿದ್ದೆ. ನಾನು ಇಂಗ್ಲಿಷ್‌ನಲ್ಲಿ ಪರೀಕ್ಷೆ ಬರೆದಿದ್ದೆ ಎಂದರು.

7 ವರ್ಷದ ಶ್ರಮಕ್ಕೆ ಫಲ ಸಿಕ್ಕಿದೆ: ಧನಂಜಯ ಅವರು ಮಾಧ್ಯಮಗಳೊಂದಿಗೆ ಮಾತನಾಡುತ್ತಾ, 2019ರಿಂದಲೂ ಯುಪಿಎಸ್‌ಸಿ ಪರೀಕ್ಷೆ ಎದುರಿಸಿದ್ದು, ಸತತ 7 ವರ್ಷಗಳ ಪರಿಶ್ರಮಕ್ಕೆ ಈಗ ಪ್ರತಿಫಲ ಸಿಕ್ಕಿದೆ ಎಂದು ಹರ್ಷ ವ್ಯಕ್ತಪಡಿಸಿದ್ದಾರೆ.

ನನ್ನ ತಂದೆ–ತಾಯಿ ಕೂಲಿ ಮಾಡಿ ನನ್ನನ್ನು ಓದಿಸಿ ದ್ದಾರೆ. ಐಎಎಸ್ ಅಧಿಕಾರಿ ಡಿ.ಕೆ.ರವಿ ಹಾಗೂ ಹರಿಯಾಣ ಮೂಲದ ಐಎಎಸ್ ಅಧಿಕಾರಿ ಅಶೋಕ್ ನನಗೆ ಸ್ಫೂರ್ತಿಯಾಗಿದ್ದು, ಅವರಂತೆ ಕೆಲಸ ಮಾಡಬೇಕೆಂಬ ಹಂಬಲ ನನಗೂ ಇದೆ ಎಂದು ತಿಳಿಸಿದ್ದಾರೆ.

ಯುಪಿಎಸ್‌ಸಿ ಸಿವಿಲ್ ಸರ್ವೀಸ್ ರಿಸಲ್ಟ್: ಚಿಕ್ಕೋಡಿಯ ಕಿರಣ ಕಮತೆ ರಾಜ್ಯಕ್ಕೆ ಪ್ರಥಮ

ದೇಶಕ್ಕೆ 53ನೇ ರ್‍ಯಾಂಕ್ ಪಡೆದ ಎಂಜಿನಿಯರ್

ಬೆಳಗಾವಿ: ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ ಹತ್ತರವಾಟ ಗ್ರಾಮದ ಯುವಕ ಕಿರಣ ಸಣ್ಣಪ್ಪ ಕಮತೆ (29) ಅವರು ಯುಪಿಎಸ್‌ಸಿ ಪರೀಕ್ಷೆಯಲ್ಲಿ ದೇಶಕ್ಕೆ 53ನೇ ರ್‍ಯಾಂಕ್ ಹಾಗೂ ರಾಜ್ಯಕ್ಕೆ ಮೊದಲ ರ್‍ಯಾಂಕ್ ಪಡೆದಿದ್ದಾರೆ.



ಕಿರಣ ಕಮತೆ

ಬೆಳಗಾವಿ ಗೋಗಟೆ ಎಂಜಿನಿಯರಿಂಗ್ ಕಾಲೇಜಿನಲ್ಲಿ ಸಿವಿಲ್ ಎಂಜಿನಿಯರಿಂಗ್ ಪದವಿ ಪಡೆದಿರುವ ಕಿರಣ, ಸದ್ಯ ಬೆಂಗಳೂರಿನ ಲೋಕೋಪಯೋಗಿ ಇಲಾಖೆ ಮುಖ್ಯ ಕಚೇರಿಯಲ್ಲಿ ಸಹಾಯಕ ಎಂಜಿನಿಯರ್ ಆಗಿದ್ದಾರೆ.

ಐದು ಬಾರಿ ಪ್ರಿಲಿಮ್ಸ್ ಪಾಸಾಗಿದ್ದರೂ ಮೇನ್ಸ್ ಪರೀಕ್ಷೆಯಲ್ಲಿ ವಿಫಲವಾಗಿದ್ದರು. ಆರನೇ ಬಾರಿಗೆ ಯಶಸ್ಸು ಕಂಡರು. ಇವರ ತಂದೆ ಸಣ್ಣಪ್ಪ ಕಮತೆ ಅವರು ನಿಡಸೋಸಿಯ ಹಿರಾ ಶುಗರ್ಸ್ ಎಂಜಿನಿಯರಿಂಗ್ ಕಾಲೇಜಿನಲ್ಲಿ ಪ್ರಾಚಾರ್ಯರಾಗಿದ್ದು, ತಾಯಿ ರುಕ್ಮಿಣಿ ಗೃಹಿಣಿ. ಸಹೋದರಿ ಕೀರ್ತಿ ಬೆಂಗಳೂರಿನಲ್ಲಿ ಆರ್ಕಿಟೆಕ್ಚರ್ ಆಗಿದ್ದಾರೆ.

1, 2ನೇ ತರಗತಿಯನ್ನು ಮಹಾರಾಷ್ಟ್ರದ ಅಂಬೆಜೋಗಾಯಿ ಮರಾಠಿ ಪ್ರಾಥಮಿಕ ಶಾಲೆಯಲ್ಲಿ, 3ರಿಂದ 8ನೇ ತರಗತಿಯನ್ನು ಹುಬ್ಬಳ್ಳಿಯ ಎಂ.ಆರ್. ಸಾಖರೆ ಆಂಗ್ಲ ಮಾಧ್ಯಮ ಶಾಲೆಯಲ್ಲಿ, 9, 10ನೇ ತರಗತಿ ಗದಗ ಕೆಎಲ್‌ಇ ಸಂಸ್ಥೆಯ ಆಂಗ್ಲ ಮಾಧ್ಯಮ ಶಾಲೆಯಲ್ಲಿ, ಪಿಯು ಶಿಕ್ಷಣವನ್ನು ನಿಪ್ಪಾಣಿಯ ಜಿ.ಐ.ಬಾಗೇವಾಡಿ ಕಾಲೇಜಿನಲ್ಲಿ ಮುಗಿಸಿದ್ದಾರೆ.

2023ರಲ್ಲಿ ನೌಕರಿಗೆ ಸೇರಿದ್ದೇನೆ. ಕೆಲಸ ಮಾಡುತ್ತಲೇ ದಿನಕ್ಕೆ 5 ತಾಸು ಓದುತ್ತಿದ್ದೆ. 250 ರ್‍ಯಾಂಕ್ ಒಳಗೆ ಬರುವ ನಿರೀಕ್ಷೆ ಇತ್ತು ಆದರೆ, 53ನೇ ರ್‍ಯಾಂಕ್ ಬಂದಿದ್ದು ಸಂತಸ ಮೂಡಿಸಿದೆ. ತಂದೆ, ತಾಯಿ ಹಾಗೂ ಪತ್ನಿಗೆ ಕೃತಜ್ಞತೆ ಸಲ್ಲಿಸುತ್ತೇನೆ. ಅವರ ಸಹಕಾರದಿಂದ ಇದು ಸಾಧ್ಯವಾಗಿದೆ ಎಂದು ಸಂಭ್ರಮಪಟ್ಟಿದ್ದಾರೆ.

ರಸ್ತೆಯಲ್ಲಿ ರಂಪಾಟ: ಇಬ್ಬರು ಪೊಲೀಸರ ಅಮಾನತು

ಮೈಸೂರು, ಮಾ.6(ಎಂಕೆ)– ಕ್ಷುಲಕ ವಿಚಾರಕ್ಕೆ ನಡುರಸ್ತೆಯಲ್ಲಿ ಜಗಳವಾಡಿದ ಇಬ್ಬರು ಪೊಲೀಸ್ ಸಿಬ್ಬಂದಿಗಳನ್ನು ಅಮಾನತುಗೊಳಿಸಲಾಗಿದೆ.

ದೇವರಾಜ ಪೊಲೀಸ್ ಠಾಣೆಯ ಹೆಡ್ ಕಾನ್ಸ್‌ಸ್ಟೇಬಲ್ ಉಮೇಶ್ ಮತ್ತು ನಗರ ಸಶಸ್ತ್ರ ಮೀಸಲು ಪಡೆಯ(ಸಿಎಆರ್) ಕಾನ್ಸ್‌ಸ್ಟೇಬಲ್ ಹಾಗೂ 112 ತುರ್ತು ವಾಹನದ ಡ್ರೈವರ್ ಆಗಿರುವ ಧನಂಜಯ ಅವರನ್ನು ನಗರ ಪೊಲೀಸ್ ಆಯುಕ್ತರು ಸೇವೆಯಿಂದ ಅಮಾನತುಗೊಳಿಸಿದ್ದಾರೆ.

ಗುರುವಾರ ಬೆಳಗ್ಗೆ 10 ಗಂಟೆ ಸುಮಾರಿಗೆ ನಜರ್‌ಬಾದ್‌ನ ವಸಂತ ಮಹಲ್ ಬಳಿ ಉಮೇಶ್ ಮತ್ತು ಧನಂಜಯ 112 ತುರ್ತು ವಾಹನದಲ್ಲಿ ಗಸ್ತು ತಿರುಗಲು ಹೊರಟ್ಟಿದ್ದು, ಧನಂಜಯ ಡ್ಯೂಟಿ ಚಾರ್ಟ್ ತರುವುದನ್ನು ಮರೆತಿದ್ದರಿಂದ ಸಿಟ್ಟಾಗಿ ಉಮೇಶ್, ಧನಂಜಯ ಅವರನ್ನು ಗದರಿಸಿದ್ದರು ಎನ್ನಲಾಗಿದೆ.

ಬಳಿಕ ಇಬ್ಬರ ನಡುವೆ ಮಾತಿನ ಚಕಮಕಿ ನಡೆದಿದ್ದು, ಪರಸ್ಪರ ಅವಾಚ್ಯ ಶಬ್ದಗಳಿಂದ ಬೈದುಕೊಂಡಿದ್ದಾರೆ. ಕರ್ತವ್ಯದ ವೇಳೆ ಇಬ್ಬರು ಜಗಳವಾಡುತ್ತಿರುವ ವೀಡಿಯೋಗಳು ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗಿದ್ದು, ಇಬ್ಬರೂ ಕೂಡ ನಜರ್‌ಬಾದ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ. ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗುತ್ತಿದ್ದಂತೆ ಹಾಗೂ ಸಾರ್ವಜನಿಕರು ಇಬ್ಬರನ್ನೂ ಟೀಕಿಸುತ್ತಿದ್ದಂತೆ ನಗರ ಪೊಲೀಸ್ ಆಯುಕ್ತರಾದ ಸೀಮಾ ಲಟ್ಕರ್, ಕರ್ತವ್ಯದ ಸಂದರ್ಭದಲ್ಲಿ ಜವಾಬ್ದಾರಿ ಮರೆತು ದುರ್ವರ್ತನೆ ತೋರಿರುವ ಮೇರೆಗೆ ಇಬ್ಬರು ಸಿಬ್ಬಂದಿಗಳನ್ನು ಸೇವೆಯಿಂದ ಅಮಾನತುಗೊಳಿಸಿದ್ದಾರೆ.

ಮಾ.8, ರಕ್ತದಾನ ಶಿಬಿರ

ಮೈಸೂರು, ಮಾ.6– ಮೈಸೂರಿನ ಶಾಂತಿಚಕ್ರ ಯುವ ಬ್ರಿಗೇಡ್, ಶ್ರೀ ಶಾಂತಿನಾಥ ಸೇವಾ ಸಮಿತಿ, ಶ್ರೀ ದಿಗಂಬರ ಜೈನ ಸಮಾಜ, ಕೇವಲಿನ್ ಚಾರಿಟೆಬಲ್ ಟ್ರಸ್ಟ್ ಹಾಗೂ ಲಯನ್ಸ್ ಜೀವಧಾರ ರಕ್ತನಿಧಿ ಕೇಂದ್ರದ ಸಹಯೋಗದಲ್ಲಿ ಮಾ.8ರಂದು ಬೆಳಗ್ಗೆ 10ರಿಂದ ಸಂಜೆ 4 ಗಂಟೆವರೆಗೆ ನ್ಯೂ ಸಯ್ಯಾಜಿರಾವ್ ರಸ್ತೆಯಲ್ಲಿರುವ ಕೋಟೆ ಶ್ರೀ ಶಾಂತಿನಾಥ ಬಸದಿ ಆವರಣದಲ್ಲಿ ರಕ್ತದಾನ ಶಿಬಿರ ಆಯೋಜಿಸಲಾಗಿದ್ದು, 18ರಿಂದ 55 ವರ್ಷದವರೆಗಿನ ದಾನಿಗಳು ಭಾಗವಹಿಸುವಂತೆ ಪ್ರಕಟಣೆಯಲ್ಲಿ ಮನವಿ ಮಾಡಲಾಗಿದೆ. ಹೆಚ್ಚಿನ ಮಾಹಿತಿಗೆ 8277068210 ಸಂಪರ್ಕಿಸಬಹುದು.

ಒಳ ಮೀಸಲಾತಿ ಜಾರಿಗೆ ಆಗ್ರಹಿಸಿ ಮಾದಿಗ ಸಂಘಟನೆಗಳಿಂದ ಭಾರೀ ಪ್ರತಿಭಟನೆ

ಮೈಸೂರು, ಮಾ.6(ಎಂಕೆ)– ಪರಿಶಿಷ್ಟ ಜಾತಿ ಒಳ ಮೀಸಲಾತಿ ಜಾರಿಗೆ ಆಗ್ರಹಿಸಿ ಮಾದಿಗ ಸಂಘಟನೆಗಳ ಒಕ್ಕೂಟದ ವತಿಯಿಂದ ಶುಕ್ರವಾರ ಬೃಹತ್ ಪ್ರತಿಭಟನಾ ಮೆರವಣಿಗೆ ನಡೆಸಲಾಯಿತು.

ಮೈಸೂರಿನ ಟೌನ್‌ಹಾಲ್ ಆವರಣದಲ್ಲಿ ಜಮಾವಣೆಗೊಂಡ ಸಾವಿರಾರು ಮಂದಿ, ಆಲ್ಬರ್ಟ್ ವಿಕ್ಟರ್ ರಸ್ತೆ ಮೂಲಕ ನಜರ್‌ಬಾದ್ ಪೊಲೀಸ್ ಠಾಣೆ ಮಾರ್ಗವಾಗಿ ಜಿಲ್ಲಾಧಿಕಾರಿ ಕಚೇರಿಯವರೆಗೆ ಧಿಕ್ಕಾರ ಘೋಷಣೆ ಕೂಗಿದರು.

ರಾಜ್ಯದಲ್ಲಿ 56,432 ಖಾಲಿ ಹುದ್ದೆಗೆ ನೇಮಕಾತಿಯಲ್ಲಿ ಪರಿಶಿಷ್ಟ ಜಾತಿ ಒಳ ಮೀಸಲಾತಿ ಹಂಚಿಕೆ ಆಧಾರದ ಮೇಲೆ ಹುದ್ದೆಗಳನ್ನು ವರ್ಗೀಕರಿಸಬೇಕು. ಉಪಗುಂಪುವಾರು ಹಂಚಿಕೆ ಹಾಗೂ ಪರಿಷ್ಕೃತ ರೋಸ್ಟರ್ ಜಾರಿಗೊಳಿಸಿ, ಕಾನೂನು ಸಮರ್ಥನೆಯೊಂದಿಗೆ ನೇಮಕಾತಿ ಪ್ರಕ್ರಿಯೆ ಆರಂಭಿಸಬೇಕು ಎಂದು ಹಕ್ಕೊತ್ತಾಯಿಸಿದರು.

ಶೇ.56 ರಷ್ಟು ಮೀಸಲಾತಿ ವ್ಯವಸ್ಥೆಯನ್ನು ಸಂವಿಧಾನದ 9ನೇ ಅನುಸೂಚಿಯಲ್ಲಿ ಸೇರಿಸಲು ಅಗತ್ಯ ಕ್ರಮ ಕೈಗೊಳ್ಳಬೇಕು. ಒಳ ಮೀಸಲಾತಿ ಸಂಪೂರ್ಣ ಜಾರಿ ಆಗುವವರೆಗೂ ಸಮಾಜ ಕಲ್ಯಾಣ ಸಚಿವರಿಗೆ ಇತರೆ ಖಾತೆ ನೀಡುವುದು ಹಾಗೂ ಅಲ್ಲಿ ಇರುವ ಪ್ರಧಾನ ಕಾರ್ಯದರ್ಶಿ ಸೇರಿದಂತೆ ಇತರೆ ಅಧಿಕಾರಿಗಳನ್ನು ಬದಲಾವಣೆ ಮಾಡಬಾರದು ಎಂದು ಆಗ್ರಹಿಸಿದರು.



ಮಾದಿಗ ಸಂಘಟನೆಗಳ ಒಕ್ಕೂಟದ ವತಿಯಿಂದ ಶುಕ್ರವಾರ ಬೃಹತ್ ಪ್ರತಿಭಟನಾ ಮೆರವಣಿಗೆ ನಂತರ ಡಿಸಿಗೆ ಮನವಿ ಸಲ್ಲಿಸಲಾಯಿತು

ಮೀಸಲಾತಿ ಸಂವಿಧಾನ ಬದ್ಧ ಹಕ್ಕಾಗಿದ್ದು, ಸರ್ಕಾರ ಕೂಡಲೇ ಒಳ ಮೀಸಲಾತಿ ಜಾರಿಗೊಳಿಸಿ, ಸಕಾರಾತ್ಮಕವಾಗಿ ಸ್ಪಂದಿಸದಿದ್ದಲ್ಲಿ ಮಾದಿಗ ಸಮುದಾಯವು ರಾಜ್ಯಾದ್ಯಂತ ತೀವ್ರ ಹೋರಾಟ ನಡೆಸಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದರು. ಬಳಿಕ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು. ಹಿರಿಯ ವಕೀಲ ಅರುಣ್ ಕುಮಾರ್, ಮುಖಂಡರಾದ ಡಾ.ರವಿಕುಮಾರ್ ಮರಡಿಪುರ, ಅರಕಲವಾಡಿ ನಾಗೇಂದ್ರ, ಗಾಂಧಿನಗರ ಬಸಪ್ಪ, ಸಿವಿ ರೋಡ್ ರಾಜಣ್ಣ, ಕೆ.ಆರ್.ನಗರ ಸ್ವಾಮಿ, ಹುಣಸೂರು ವೆಂಕಟೇಶ್, ಸರಗೂರು ಪುಟ್ಟಣ್ಣ, ಎಲ್‌ಐಸಿ ರಾಜಣ್ಣ, ಹಲಗೈಹುಂಡಿ ಶಂಕರ್, ಕೂರ್ಗಳ್ಳಿ ಮಂಜು ಮತ್ತಿತರರಿದ್ದರು.

56,432 ಹುದ್ದೆ ಭರ್ತಿಗೆ ಕ್ರಮ

ಬೆಂಗಳೂರು: ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ 56,432 ಹುದ್ದೆಗಳ ಭರ್ತಿಗೆ ಕ್ರಮ ಕೈಗೊಂಡಿರುವುದಾಗಿ ಸಿಎಂ ಸಿದ್ದರಾಮಯ್ಯ ಇಂದು ಬಜೆಟ್‌ನಲ್ಲಿ ಘೋಷಣೆ ಮಾಡಿದ್ದಾರೆ.

ಸರ್ಕಾರಿ ಹುದ್ದೆಗಳಿಗೆ ನೇರ ನೇಮಕಾತಿ ನಿಗದಿಪಡಿಸಿರುವ ಗರಿಷ್ಠ ವಯೋಮಿತಿಯನ್ನು ಒಂದು ಬಾರಿಗೆ ಮಾತ್ರ ಐದು ವರ್ಷ ಸಡಿಲಿಕೆ ಮಾಡಲಾಗಿದೆ. ಉದ್ಯೋಗ ನೇಮಕಾತಿ ಒಳಮೀಸಲಾತಿ ಪ್ರಮಾಣದ ಬಗ್ಗೆ ಪ್ರಕರಣಗಳು ನ್ಯಾಯಾಲಯದಲ್ಲಿ ಇರುವುದರಿಂದಾಗಿ ಅಭ್ಯರ್ಥಿಗಳಿಗೆ ಯಾವುದೇ ನಷ್ಟವನ್ನು ತಡೆಗಟ್ಟುವ ಉದ್ದೇಶದಿಂದಾಗಿ ನೇಮಕಾತಿ ವಯೋಮಿತಿಯನ್ನು 5 ವರ್ಷ ಸಡಿಲಿಕೆ ಮಾಡಲಾಗಿದೆ ಎಂದರು.

ಕಳೆದ ತಿಂಗಳು ಧಾರವಾಡದಲ್ಲಿ ಸರ್ಕಾರಿ ಉದ್ಯೋಗ ಆಕಾಂಕ್ಷಿಗಳು ನಡೆಸಿದ ಬೃಹತ್ ಪ್ರತಿಭಟನೆಯ ಬೆನ್ನಲ್ಲೇ ರಾಜ್ಯ ಸರ್ಕಾರ ಸಿಎಂ ಸಿದ್ದರಾಮಯ್ಯ ನೇತೃತ್ವದಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಉದ್ಯೋಗ ಭರ್ತಿ ಕುರಿತು ಮಹತ್ವದ ನಿರ್ಧಾರ ತೆಗೆದುಕೊಂಡಿತ್ತು ಈಗಾಗಲೇ ಶೇ.56ರಷ್ಟು ಮೀಸಲಾತಿ ಬದಲು ಶೇ.50 ರಷ್ಟು ಮಾತ್ರವೇ ವಿವಿಧ ಹುದ್ದೆಗಳನ್ನು ಭರ್ತಿಗೆ ಸಚಿವ ಸಂಪುಟ ಅನುಮೋದನೆ ನೀಡಿದ್ದು, 30 ದಿನ ಗಳಲ್ಲಿ ನೇಮಕಾತಿ ಪ್ರಕ್ರಿಯೆ ಪ್ರಾರಂಭವಾಗಲಿದೆ ಎಂದು ತಿಳಿಸಿತ್ತು

ಮೈಸೂರು ಮಿತ್ರ ಶನಿವಾರ 7 ಮಾರ್ಚ್ 2026

ರಾಜ್ಯ ಬಜೆಟ್ ಬಗ್ಗೆ ಮೈಸೂರಿಗರ ಮಿಶ್ರ ಪ್ರತಿಕ್ರಿಯೆ

ಮೈಸೂರು, ಮಾ.6(ಬಿಎಲ್‌ಯು/ಪಿಎಂ/ಎಸ್‌ಪಿಎನ್/ವಿವಿಹೆಚ್)– ಹಣಕಾಸು ಖಾತೆಯನ್ನು ಹೊತ್ತಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಇಂದು ಮಂಡಿಸಿರುವ ಬಜೆಟ್‌ಗೆ ಮೈಸೂರಿನ ಉದ್ಯಮಿಗಳು, ಸಂಘ ಸಂಸ್ಥೆಗಳ ಪ್ರತಿನಿಧಿಗಳು, ವಿವಿಧ ಪಕ್ಷಗಳ ರಾಜಕೀಯ ಮುಖಂಡರು ಮಿಶ್ರ ಪ್ರತಿಕ್ರಿಯೆ ವ್ಯಕ್ತಪಡಿಸಿದ್ದಾರೆ.

ಆರ್ಥಿಕ ಶಿಸ್ತಿನಡಿ ಎಲ್ಲರಿಗೂ ನ್ಯಾಯ ಒದಗಿಸಿದ ಬಜೆಟ್



ದಾಖಲೆಯ 17ನೇ ಬಜೆಟ್ ಅನ್ನು ಮಂಡಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಆರ್ಥಿಕ ಶಿಸ್ತಿನ ಪರಿಮಿತಿಯಲ್ಲಿ ಎಲ್ಲರಿಗೂ ನ್ಯಾಯ ಒದಗಿಸಿದ್ದಾರೆ. ಹಣಕಾಸು ಜವಾಬ್ದಾರಿ ಕಾಯ್ದೆ ನಿಯಮಾವಳಿಗೆ ಅನುಸಾರವಾಗಿ ನಮ್ಮ ರಾಜ್ಯದ ವಿತ್ತೀಯ ಕೊರತೆಯ ಪ್ರಮಾಣವು ಕೇವಲ ಶೇ.2.5ರಷ್ಟಿದ್ದು ಸಾಲದ ಪ್ರಮಾಣವು ಶೇ.24.94ರಷ್ಟಿದೆ.

ಶಿಕ್ಷಣ, ಆರೋಗ್ಯ, ಕೃಷಿ, ಸಹಕಾರ, ಪರಿಶಿಷ್ಟರ ಕಲ್ಯಾಣದ ಆದಿಯಾಗಿ ಎಲ್ಲಾ ವಲಯಗಳಿಗೂ ನ್ಯಾಯಬದ್ಧವಾದ ಅನುದಾನ ಹಂಚಿಕೆ ಮಾಡಲಾಗಿದ್ದು, ಎಲ್ಲಾ ಜಾತಿ, ಧರ್ಮ ಮತ್ತು ಜನಾಂಗದ ಹಿತಾಸಕ್ತಿ ಕಾಪಾಡುವ ಕೆಲಸವನ್ನು ಸಿದ್ದರಾಮಯ್ಯನವರು ಮಾಡಿದ್ದಾರೆ. ಮುಖ್ಯವಾಗಿ ಕೇಂದ್ರದಿಂದ ರಾಜ್ಯಕ್ಕೆ ಬರಬೇಕಾದ 15 ಸಾವಿರ ಕೋಟಿ ರೂ. ಜಿಎಸ್‌ಟಿ ತೆರಿಗೆ ಪಾಲು ಬಾಕಿಯಿದ್ದು, ಕೇಂದ್ರದ ನಿರಂತರವಾದ ತಾರತಮ್ಯ ಧೋರಣೆ ನಡುವೆಯೂ ರಾಜ್ಯದ ಜಿಡಿಪಿ ಅಭಿವೃದ್ಧಿ ದರವು ಶೇ.8.1ರಷ್ಟಿದ್ದು ಕೇಂದ್ರದ ಜಿಡಿಪಿ ದರಕ್ಕಿಂತಲೂ ಹೆಚ್ಚಿನ ಸಾಧನೆ ಮಾಡಿರುವುದು ನಮ್ಮ ಸರ್ಕಾರದ ಆಡಳಿತಾತ್ಮಕ ದಕ್ಷತೆಗೆ ಹಿಡಿದ ಕನ್ನಡಿಯಾಗಿದೆ. ಇನ್ನು ಸಮಾಜ ಕಲ್ಯಾಣ ಇಲಾಖೆಗೆ ಈ ಬಾರಿ, ಕಳೆದ ಬಾರಿಗಿಂತಲೂ ಹೆಚ್ಚಿನ ಅನುದಾನ ನೀಡಲಾಗಿದ್ದು ಶೋಷಿತರ ಬದುಕಿಗೆ ಸಂಬಂಧಿಸಿದಂತೆ ಇರುವ ಸರ್ಕಾರದ ಬದ್ಧತೆಯು ಮುಂದುವರೆದಿದೆ.

–**ಡಾ.ಹೆಚ್.ಸಿ.ಮಹದೇವಪ್ಪ,** ಜಿಲ್ಲಾ ಉಸ್ತುವಾರಿ ಸಚಿವರು.

ಅತ್ಯುತ್ತಮ ಬಜೆಟ್



ಇಡೀ ರಾಜ್ಯದ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಮುಖ್ಯಮಂತ್ರಿ ಸಿದ್ದರಾಮಯ್ಯನವರು ಅತ್ಯುತ್ತಮ ಬಜೆಟ್ ಮಂಡಿಸಿದ್ದಾರೆ. ಮೈಸೂರಿಗೂ ಭರಪೂರ ಕೊಡುಗೆ ನೀಡಿದ್ದಾರೆ. ತಾಂಡವಪುರದಲ್ಲಿ ಸಿಲ್ಕ್ ಪಾರ್ಕ್, ಲಿಂಗಾಂಬುಧಿ ಸಸ್ಯತೋಟ ಅಭಿವೃದ್ಧಿ, ಜಯದೇವ ಆಸ್ಪತ್ರೆ ಮೇಲ್ದರ್ಜೆಗೆ ಸೇರಿದಂತೆ ಪ್ರಮುಖ ಘೋಷಣೆಗಳನ್ನು ಮಾಡಿದ್ದಾರೆ. ಇದೊಂದು ಉತ್ತಮ ಬಜೆಟ್ ಆಗಿದೆ.

–**ಸಂದೇಶ ನಾಗರಾಜು,** ವಿಧಾನ ಪರಿಷತ್ ಮಾಜಿ ಸದಸ್ಯರು.

ನಿರಾಶದಾಯಕವಾದ ಬಜೆಟ್



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮೇಲೆ ಮೈಸೂರು ಜಿಲ್ಲೆಯ ಜನತೆ ದೊಡ್ಡ ನಿರೀಕ್ಷೆ ಇಟ್ಟಿದ್ದರೂ ಈ ಬಾರಿಯ ಬಜೆಟ್ ನಿರಾಶಾದಾಯಕವಾಗಿದೆ. ಹಿಂದಿನ ಬಜೆಟ್‌ನಲ್ಲಿ ಘೋಷಿಸಲಾದ ಹಲವು ಯೋಜನೆಗಳನ್ನು ಮತ್ತೆ ಉಲ್ಲೇಖಿಸಲಾಗಿದ್ದು, ಹೊಸದಾಗಿ ಘೋಷಿಸಿದ ಅನೇಕ ಯೋಜನೆಗಳಿಗೆ ಸ್ಪಷ್ಟ ಅನುದಾನ ನಿಗದಿಯಾಗಿಲ್ಲ. ಈಗಾಗಲೇ ಸುಮಾರು 8.24 ಲಕ್ಷ ಕೋಟಿ ಸಾಲ ಮಾಡಿರುವುದೇ ಈ ಸರ್ಕಾರದ ದೊಡ್ಡ ಸಾಧನೆಯಾಗಿದೆ. ಅಭಿವೃದ್ಧಿ ಹಾಗೂ ಜನಸಾಮಾನ್ಯರ ಹಿತ ಕಾಪಾಡುವಲ್ಲಿ ಸರ್ಕಾರ ವಿಫಲವಾಗಿದೆ.

–**ಜಿ.ಡಿ.ಹರೀಶ್‌ಗೌಡ,** ಹುಣಸೂರು ಶಾಸಕರು

ಬಜೆಟ್‌ನಲ್ಲಿ ಸತ್ವವಿಲ್ಲ



ರಾಜ್ಯ ಬಜೆಟ್‌ನಲ್ಲಿ ಯಾವುದೇ ಸತ್ವವಿಲ್ಲ. ಗ್ರಾಮ ಪಂಚಾಯಿತಿಗಳ ಅಭ್ಯುದಯಕ್ಕಾಗಿ ಯಾವುದೇ ಕ್ರಮ ವಹಿಸಿಲ್ಲ. ಇದರಿಂದ ಗ್ರಾಮಗಳ ಮೂಲಸೌಕರ್ಯ ಅಭಿವೃದ್ಧಿಗೆ ತೊಡಕಾಗಲಿದೆ. ಗ್ರಾಮ ಪಂಚಾತಿಯಿತಿಗೆ ಮಹಾತ್ಮ ಗಾಂಧಿ ಹೆಸರು ಘೋಷಣೆ ಮಾಡಿರುವುದನ್ನು ಬಿಟ್ಟರೆ ಉಳಿದಂತೆ ಯಾವುದೇ ಒತ್ತು ನೀಡಲಾಗಿಲ್ಲ. ಶಿಕ್ಷಣ ಪ್ರತಿ ಮಗುವಿನ ಹಕ್ಕಾಗಿರುವುದರಿಂದ ಗುಣಮಟ್ಟ ಶಿಕ್ಷಣ ಒದಗಿಸಬೇಕಾದದ್ದು ಸರ್ಕಾರದ ಜವಾಬ್ದಾರಿ. ಈ ನಿಟ್ಟಿನಲ್ಲಿ ಯಾವುದೇ ಒತ್ತು ನೀಡಿಲ್ಲ.

–**ಸಿ.ಎನ್.ಮಂಜೇಗೌಡ,** ವಿಧಾನ ಪರಿಷತ್ ಸದಸ್ಯ.

ಹಿಂದುಳಿದ ಸಮುದಾಯಕ್ಕೆ ವಂಚನೆ



ಸಿದ್ದರಾಮಯ್ಯ ಅವರು ಹಿಂದುಳಿದ ವರ್ಗಕ್ಕೆ ಪ್ರಮುಖ ಯೋಜನೆ ಘೋಷಣೆ ಮಾಡದೆ ಈ ವರ್ಗದ ಜನರಿಗೆ ವಂಚಿಸಿದ್ದಾರೆ. ಪರಿಶಿಷ್ಟ ಪಂಗಡ, ಸಮಾಜ ಕಲ್ಯಾಣ, ಅಲೆಮಾರಿ, ಹಿಂದುಳಿದ ವರ್ಗ ಹಾಗೂ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮಕ್ಕೆ 1,500 ಕೋಟಿ ನೀಡುವುದಾಗಿ ಹೇಳಿದ್ದಾರೆ. ಆದರೆ ಯಾವ ಯಾವ ಸಮುದಾಯಗಳ ನಿಗಮಕ್ಕೆ ಎಷ್ಟು ಹಣ ಮೀಸಲು ಎಂದು ಹೇಳದೆ ಗೊಂದಲ ಮೂಡಿಸಿದ್ದಾರೆ.

–**ರಘು ಕೌಟಿಲ್ಯ,** ರಾಜ್ಯಾಧ್ಯಕ್ಷ, ಬಿಜೆಪಿ ಹಿಂದುಳಿದ ಮೋರ್ಚಾ.

ತೆರಿಗೆ ಹೊರೆ ಇಲ್ಲದ ಬಜೆಟ್



ಪರಿಶಿಷ್ಟ ಜಾತಿ, ಪಂಗಡದವರಿಗೆ ಫುಡ್ ಕಿಯೋಸ್ಕ್, ಅತ್ಯಾಧುನಿಕ ಲಾಂಡ್ರಿ ತೆರೆಯಲು ಹಣ ಮೀಸಲು ಸೇರಿದಂತೆ ಹಲವು ಯೋಜನೆ ಪ್ರಕಟಿಸಿರುವುದು ಸ್ವಾಗತಾರ್ಹ. ಯಾರಿಗೂ ಹೊರೆಯಾಗದ, ಹೊಸ ತೆರಿಗೆ ಇಲ್ಲದ ಬಜೆಟ್ ಅನ್ನು ಸಿದ್ದರಾಮಯ್ಯ ಮಂಡಿಸಿದ್ದಾರೆ.

ಸಿ.ನಾರಾಯಣಗೌಡ, ಹೋಟೆಲ್ ಮಾಲೀಕರ ಸಂಘ, ಮೈಸೂರು.

ಕನ್ನಡಿಗರ ಹಿತ ಕಾಯುವ ಬಜೆಟ್



ಕೇಂದ್ರ ಸರ್ಕಾರದ ಅಸಹಕಾರದ ನಡುವೆಯೂ ಸಿದ್ದರಾಮಯ್ಯ ಅವರು ಕನ್ನಡಿಗರ ಹಿತ ಕಾಯುವ ಆಯವ್ಯಯ ಮಂಡಿಸಿದ್ದಾರೆ. 17 ನೇ ದಾಖಲೆ ಬಜೆಟ್‌ನಲ್ಲಿ ಉತ್ತರ ಕರ್ನಾಟಕದ ಮಹತ್ವಾಕಾಂಕ್ಷೆಯ ಯೋಜನೆಯ ಮಹತ್ವದ ನಿರ್ಧಾರ ಪ್ರಕಟಿಸಿದ್ದಾರೆ.

ಬಿ.ಸುಬ್ರಹ್ಮಣ್ಯ, ಮಾಜಿ ಅಧ್ಯಕ್ಷರು, ಕರ್ನಾಟಕ ಪ್ರದೇಶ ಕುರುಬರ ಸಂಘ.

ಸಮತೋಲನ ಸಾಧನೆ



ಸಿದ್ದರಾಮಯ್ಯ ಅವರು ಮೈಸೂರು ಭಾಗಕ್ಕೆ ಮಾತ್ರವಲ್ಲದೆ ಕಲ್ಯಾಣ ಕರ್ನಾಟಕದ ಅಭಿವೃದ್ಧಿಗೂ ಹೆಚ್ಚು ಒತ್ತು ನೀಡಿದ್ದಾರೆ. ಈ ಮೂಲಕ ಪ್ರಾದೇಶಿಕ ಸಮತೋಲನ ಸಾಧಿಸಿದ್ದಾರೆ. ಒಟ್ಟಾರೆ ಸಮಗ್ರ ಕರ್ನಾಟಕದ ಅಭಿವೃದ್ಧಿಗೆ ಸಂಕಲ್ಪ ಮಾಡಿದ್ದಾರೆ.

ಕೆ.ಮಹೇಶ್, ವಕ್ತಾರ, ಕಾಂಗ್ರೆಸ್ ನಗರ, ಜಿಲ್ಲಾ ವಕ್ತಾರ.

ದೂರದೃಷ್ಟಿಯ ಸುಸ್ಥಿರ ಬಜೆಟ್



ಸಿದ್ದರಾಮಯ್ಯ ಅವರು ಬಡವರ ಪರ ಕಾಳಜಿಯನ್ನು ತಮ್ಮ ಆಯವ್ಯಯದಲ್ಲಿ ತೋರಿಸಿದ್ದಾರೆ. ಮೈಸೂರಿನ ಜಯದೇವ ಆಸ್ಪತ್ರೆಯ ಉನ್ನತಿಕರಣ 180 ಕೋಟಿ ನೀಡಿದ್ದು, ಪ್ರವಾಸೋದ್ಯಮಕ್ಕೆ ಪೂರಕ ಕೊಡುಗೆ ನೀಡಿದ್ದಾರೆ. ಒಟ್ಟಾರೆ ಇದು ರಾಜ್ಯದ ಬಡವರ ಅಭಿವೃದ್ಧಿಗೆ ಪೂರಕವಾದ ದೂರದೃಷ್ಟಿಯ ಸುಸ್ಥಿರ ಬಜೆಟ್ ಆಗಿದೆ.

ಬಿ.ಎಂ.ರಾಮು, ಮಾಜಿ ಅಧ್ಯಕ್ಷರು, ಜಿಲ್ಲಾ ಪಂಚಾಯತ್, ಮೈಸೂರು

ರೈತರಿಗೆ ಯಾವುದೇ ವಿಶೇಷ ಕೊಡುಗೆ ಇಲ್ಲ



ದೇಶದ ಬೇರೆ ರಾಜ್ಯಗಳಿಗೆ ಹೋಲಿಸಿದರೆ, ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿರುವ ಸಂಖ್ಯೆಯಲ್ಲಿ ಕರ್ನಾಟಕ ಎರಡನೇ ಸ್ಥಾನದಲ್ಲಿದೆ. ಇದನ್ನು ತಡೆಗಟ್ಟಲು ಈ ಬಜೆಟ್‌ನಲ್ಲಿ ಯಾವುದೇ ಯೋಜನೆಗಳಿಲ್ಲ. ಇತ್ತೀಚಿನ ದಿನಗಳಲ್ಲಿ ರೈತರ ಮಕ್ಕಳು ಕೃಷಿ ಕ್ಷೇತ್ರದ ಬಗ್ಗೆ ಬೇಸರಗೊಂಡು ನಗರ ಪ್ರದೇಶಕ್ಕೆ ವಲಸೆ ಹೋಗುತ್ತಿದ್ದಾರೆ. ಇದನ್ನು ತಡೆಗಟ್ಟುವ ನಿಟ್ಟಿನಲ್ಲಿ ಯಾವುದೇ ಯೋಜನೆಗಳಿಲ್ಲ. ಕೃಷಿಯನ್ನು ನಂಬಿಕೊಂಡರೆ ಮದುವೆಯಾಗಲು ಹೆಣ್ಣು ಮಕ್ಕಳು ಮುಂದೆ ಬರುತ್ತಿಲ್ಲ ಇದೊಂದು ಸಾಮಾಜಿಕ ಸಮಸ್ಯೆಯಾಗಿ ಪರಿವರ್ತನೆಯಾಗಿದೆ. ಹಸು, ಎಮ್ಮೆ ಖರೀದಿಸಲು ಶೇಕಡಾ 25 ರಷ್ಟು ಪ್ರೋತ್ಸಾಹ ಧನ. 16 ವರ್ಷದ ಮಕ್ಕಳಿಗೆ ಮೊಬೈಲ್‌ನಲ್ಲಿ ಸಾಮಾಜಿಕ ಜಾಲತಾಣ ಬಳಕೆಗೆ ನಿಷೇಧ. ಕೃಷಿ ಕ್ಷೇತ್ರದಲ್ಲಿ ಎಐ ತಂತ್ರಜ್ಞಾನ ಬಳಕೆ ಅಭಿವೃದ್ಧಿ ಪೂರಕ ಒಳ್ಳೆಯ ಚಿಂತನೆಯಾಗಿದೆ. ಅಲ್ಲದೆ, ಮೈಸೂರಿನಲ್ಲಿ ಜಯದೇವ ಆಸ್ಪತ್ರೆ ಉನ್ನತಿಕರಣಕ್ಕೆ 180 ಕೋಟಿ ಹಣ ಮೀಸಲಿಟ್ಟಿರುವುದು ಉತ್ತಮ ನಿರ್ಧಾರ.

– **ಕುರುಬೂರು ಶಾಂತಕುಮಾರ್,** ರಾಜ್ಯಾಧ್ಯಕ್ಷರು ರಾಜ್ಯ ರೈತ ಸಂಘಟನೆಗಳ ಒಕ್ಕೂಟ ಕರ್ನಾಟಕ ವಿಭಾಗ

ಕೃಷಿ ಕ್ಷೇತ್ರದ ಬಗ್ಗೆ ದೂರದೃಷ್ಟಿ ಇಲ್ಲ



ಸಿದ್ದರಾಮಯ್ಯ ಅವರ ಬಜೆಟ್‌ನಲ್ಲಿ ಯಾವುದೇ ಹೊಸತಿಲ್ಲ, ಹಳೆಯ ಕಾರ್ಯಕ್ರಮಗಳನ್ನು ಮುಂದುವರೆಸಿದ್ದಾರೆ. ಕೃಷಿ ಮತ್ತು ಕೃಷಿಕರ ಅಭಿವೃದ್ಧಿಗೆ ದೂರದೃಷ್ಟಿ ಇಲ್ಲ ಶೇಕಡ 63 ರಷ್ಟಿರುವ ಈ ವರ್ಗವನ್ನು ಸಂಪೂರ್ಣ ನಿರ್ಲಕ್ಷ್ಯ ಮಾಡಿದ್ದಾರೆ. ಭೂ ಸ್ವಾಧೀನ ತಿದ್ದುಪಡಿ ಕಾಯ್ದೆ, ಜಾನುವಾರು ಹತ್ಯೆ ನಿಷೇಧ ಕಾಯ್ದೆ ವಾಪಾಸು ಪಡೆಯದೆ ಇರುವುದು ನಿರಾಶೆ ಮೂಡಿಸಿದೆ.

ಬಡಗಲಪುರ ನಾಗೇಂದ್ರ, ರಾಜ್ಯಾಧ್ಯಕ್ಷ ಕರ್ನಾಟಕ ರಾಜ್ಯ ರೈತ ಸಂಘ.

ಹಿಂದಿನ ಯೋಜನೆಗಳಿಗೆ ಬಜೆಟ್‌ನಲ್ಲಿ ಉತ್ತೇಜನ ಸಿಕ್ಕಿದೆ



ಮೈಸೂರು ಸಂಬಂಧ ಹಿಂದಿನ ಯೋಜನೆಗಳಿಗೆ ಬಜೆಟ್‌ನಲ್ಲಿ ಉತ್ತೇಜನ ಸಿಕ್ಕಿದೆ. ಮೈಸೂರು ವಿಮಾನ ನಿಲ್ದಾಣದ ಬಳಿ ಏರೋಸ್ಪೇಸ್ ಪಾರ್ಕ್ ಮಾಡುವಂತದ್ದು ಉತ್ತಮ. ಇದು ವಾಣಿಜ್ಯ ವಹಿವಾಟಿಗೆ ಉತ್ತೇಜನ ನೀಡಲಿದೆ. ಜೊತೆಗೆ ರಾಜ್ಯದ ಎರಡನೇ ಐಟಿ ಸಿಟಿಯನ್ನಾಗಿ ಮೈಸೂರನ್ನು ಅಭಿವೃದ್ಧಿಪಡಿಸಲು ಘೋಷಣೆ ಮಾಡಿರುವುದು ಸ್ವಾಗತಾರ್ಹ. ನನ್ನ ಕ್ಷೇತ್ರಕ್ಕೆ ಒಂದು ಪದವಿ ಕಾಲೇಜು ಘೋಷಣೆಯಾಗಿದೆ. ಇದು ನನ್ನ ಬಹುದಿನಗಳ ನಿರೀಕ್ಷೆಯಾಗಿತ್ತು. ಅಲ್ಲದೆ, ಉದಯಗಿರಿಗೆ ಮತ್ತೊಂದು ಪೊಲೀಸ್ ಠಾಣೆ ಸ್ಥಾಪನೆಗೆ ಮಂಜೂರಾತಿ ನೀಡಲಾಗಿದೆ. ಅನೇಕ ಸಾಂಪ್ರದಾಯಕ ವೃತ್ತಿಗಳಿಗೆ ಆರ್ಥಿಕ ಉತ್ತೇಜನ ನಿಟ್ಟಿನಲ್ಲಿ ಕ್ರಮ ವಹಿಸಲಾಗಿದೆ. ಹಿಂದುಳಿದ ವರ್ಗ, ಅಲ್ಪಸಂಖ್ಯಾತ ವರ್ಗ ಹಾಗೂ ಸಮಾಜ ಕಲ್ಯಾಣ ಇಲಾಖೆ ವ್ಯಾಪ್ತಿಯ ಸಮುದಾಯಗಳ ಶಿಕ್ಷಣಕ್ಕೆ ಕಾರ್ಯಕ್ರಮ ಘೋಷಣೆ ಮಾಡಲಾಗಿದೆ. ಬಜೆಟ್‌ನಲ್ಲಿ ಶಿಕ್ಷಣ ಹಾಗೂ ಸ್ವಯಂ ಉದ್ಯೋಗಕ್ಕೆ ಒತ್ತು ನೀಡಿರುವುದು ವಿಶೇಷ. ಮುಖ್ಯಮಂತ್ರಿ ಸಿದ್ದರಾಮಯ್ಯನವರು 17ನೇ ಬಜೆಟ್ ಮಂಡನೆ ಮಾಡಿರುವ ಹಿನ್ನೆಲೆಯಲ್ಲಿ ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ.

–**ತನ್ವೀರ್ ಸೇಠ್,** ಶಾಸಕರು, ಎನ್‌ಆರ್ ಕ್ಷೇತ್ರ.

ನಿರಾಶದಾಯಕ ಬಜೆಟ್



ಗ್ರೇಟರ್ ಮೈಸೂರು ರಚನೆ ಮಾಡಿರುವ ಹಿನ್ನೆಲೆಯಲ್ಲಿ ಬಜೆಟ್‌ನಲ್ಲಿ ಗ್ರೇಟರ್ ಮೈಸೂರ್‌ಗೆ ಹಣ ಮೀಸಲಿಡುತ್ತಾರೆ ಎಂಬ ನಿರೀಕ್ಷೆ ಇತ್ತು. ಆದರೆ ನಮ್ಮ ನಿರೀಕ್ಷೆ ಹುಸಿಯಾಗಿದೆ. ಕೆ.ಆರ್.ಕ್ಷೇತ್ರದ ರಮಾಬಾಯಿ ನಗರ ಹಾಗೂ ಗುರೂರಿನಲ್ಲಿ ನಿರ್ಮಾಣ ಮಾಡಿರುವ ಆಶ್ರಯ ಬಡಾವಣೆಯ ಮೂಲಭೂತ ಸೌಕರ್ಯಕ್ಕೆ ನಯಾ ಪೈಸೆ ಹಣ ಇಟ್ಟಿಲ್ಲ. ಈ ಎಲ್ಲಾ ಕಾರಣದಿಂದ ರಾಜ್ಯ ಸರ್ಕಾರದ ಗ್ರೇಟರ್ ಮೈಸೂರು ಯೋಜನೆ ಕೇವಲ ಹೆಸರಿಗೆ ಮಾತ್ರ ಇದ್ದು, ಯಾವುದೇ ರೀತಿಯಲ್ಲೂ ಪ್ರಯೋಜನಾಕಾರಿಯಾಗಿಲ್ಲ. ಈ ಮೂಲಕ ರಾಜ್ಯ ಬಜೆಟ್ ಮೈಸೂರಿಗೆ ನಿರಾಶದಾಯಕವಾಗಿದೆ.

ಟಿ.ಎಸ್.ಶ್ರೀವತ್ಸ, ಶಾಸಕ, ಕೆ.ಆರ್.ಕ್ಷೇತ್ರ, ಮೈಸೂರು.

ಉತ್ತಮ ಬಜೆಟ್



ಸಿದ್ದರಾಮಯ್ಯ ಅವರು 17 ಬಜೆಟ್ ಮಂಡಿಸುವ ಮೂಲಕ ದಾಖಲೆ ಬರೆದಿದ್ದಾರೆ. ಆರೋಗ್ಯ, ಶಿಕ್ಷಣ, ನೀರಾವರಿ ಕ್ಷೇತ್ರಕ್ಕೆ ಹೆಚ್ಚು ಒತ್ತು ನೀಡುವ ಮೂಲಕ ಉತ್ತಮ ಆಯವ್ಯಯ ಮಂಡಿಸಿದ್ದಾರೆ. ನನ್ನ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಮೈಸೂರಿನ ಜಯದೇವ ಹೃದ್ರೋಗ ಆಸ್ಪತ್ರೆಯನ್ನು 600 ಹಾಸಿಗೆಗಳ ಸಾಮರ್ಥ್ಯ ಆರೋಗ್ಯ ಸಂಸ್ಥೆಯಾಗಿ ಉನ್ನತೀಕರಣಕ್ಕೆ 180 ಕೋಟಿ ನೀಡಿದ್ದು, ಇದು ಮೈಸೂರು ಮಾತ್ರವಲ್ಲದೆ, ಸುತ್ತಮುತ್ತಲಿನ ಜಿಲ್ಲೆಗಳ ಜನರಿಗೆ ಅನುಕೂಲವಾಗಲಿದೆ. ಸಣ್ಣ ಸಣ್ಣ ಸಮುದಾಯವನ್ನು ಉತ್ತೇಜಿಸುವ ಹಾಗೂ ಅವರನ್ನು ಸಬಲರನ್ನಾಗಿ ಮಾಡುವ ಹಲವು ಯೋಜನೆ ಮಂಡಿಸಿದ್ದು, ಜನಪರ ಬಜೆಟ್ ಅನ್ನು ಸಿದ್ದರಾಮಯ್ಯ ಮಂಡಿಸಿದ್ದಾರೆ.

–**ಕೆ.ಹರೀಶ್‌ಗೌಡ,** ಶಾಸಕ, ಚಾಮರಾಜ ಕ್ಷೇತ್ರ, ಮೈಸೂರು.

ಎನ್.ಆರ್.ಕ್ಷೇತ್ರದ ಅಭಿವೃದ್ಧಿ ಮರೀಚಿಕೆ



ಕಾಂಗ್ರೆಸ್ ಸರ್ಕಾರ ಅಲ್ಪಸಂಖ್ಯಾತರ ಕಲ್ಯಾಣಕ್ಕೆ ಶ್ರಮಿಸುತ್ತಿದೆ ಎಂದು ಪ್ರಚಾರ ಮಾಡುತ್ತಾರೆ. ಆದರೆ ರಾಜ್ಯದಲ್ಲಿ ಅತಿ ಹೆಚ್ಚು ಅಲ್ಪಸಂಖ್ಯಾತರು ವಾಸ ಮಾಡುವ ನರಸಿಂಹರಾಜ ಕ್ಷೇತ್ರದ ಅಭಿವೃದ್ಧಿಗೆ ಸಿದ್ದರಾಮಯ್ಯ ಅವರು ವಿಶೇಷ ಅನುದಾನ ನೀಡಿಲ್ಲ. ಆ ಮೂಲಕ ಈ ಕ್ಷೇತ್ರದ ಮೂಲಸೌಕರ್ಯ ಅಭಿವೃದ್ಧಿಗೆ ಒತ್ತು ನೀಡದೇ ನಿರ್ಲಕ್ಷ್ಯ ಮಾಡಲಾಗಿದೆ.

ಸಂದೇಶ್ ಸ್ವಾಮಿ, ಮಾಜಿ ಮೇಯರ್, ಮೈಸೂರು.

ಅಲ್ಪಸಂಖ್ಯಾತರಿಗೆ ಮಹಾ ದ್ರೋಹ



ಸಿದ್ದರಾಮಯ್ಯ ಮಂಡಿಸಿರುವ ಬಜೆಟ್‌ನಲ್ಲಿ ಅಲ್ಪಸಂಖ್ಯಾತರು, ದಲಿತರಿಗೆ ಅನ್ಯಾಯ ಮಾಡಿದ್ದು, ಈ ವರ್ಗದವರಿಗೆ ಶಿಕ್ಷಣ ಹಾಗೂ ಆರೋಗ್ಯ ಕ್ಷೇತ್ರದಲ್ಲಿ ಆದ್ಯತೆ ನೀಡಿಲ್ಲ. ವಾಸ್ತವದಲ್ಲಿ ಅಲ್ಪಸಂಖ್ಯಾತರಿಗೆ ಮಹಾ ದ್ರೋಹ ಎಸಗಿದ್ದಾರೆ. ಶಿಶುನಾಳ ಶರೀಫರ ಹೆಸರಿನಲ್ಲಿ 10 ವಸತಿ ಶಾಲೆ ಸ್ಥಾಪನೆ, 117 ಮೌಲಾನಾ ಆಜಾದ್ ಮಾದರಿ ಶಾಲೆ ಸ್ಥಾಪನೆ ಸೇರಿದಂತೆ ಹಲವು ಯೋಜನೆ ಘೋಷಣೆ ಮಾಡಿದ್ದಾರೆ. ಈ ಮೂಲಕ ಇದು ಮುಸ್ಲಿಂರ ಬಜೆಟ್ ಎಂದು ಬಿಜೆಪಿ ನಾಯಕರು ಪ್ರಚಾರ ಮಾಡಲು ಅವಕಾಶ ಮಾಡಿಕೊಟ್ಟಿದ್ದಾರೆ.

ಅಬ್ದುಲ್ ಮಜೀದ್, ರಾಜ್ಯಾಧ್ಯಕ್ಷ, ಎಸ್‌ಡಿಪಿಐ.

ಗಟ್ಟಿತನದ ಬಜೆಟ್



ಸಿದ್ದರಾಮಯ್ಯ ಅವರು ಸರ್ವ ಜನರ ಸರ್ವಾಂಗೀಣ ಅಭಿವೃದ್ಧಿಗೆ ಪೂರಕವಾದ ಹಾಗೂ ಪ್ರಾದೇಶಿಕ ಅಸಮತೋಲನ ನಿವಾರಣೆಗೆ ವೈಜ್ಞಾನಿಕ ನೆಲಗಟ್ಟಿನ ಗಟ್ಟಿತನದ ಬಜೆಟ್ ಮಂಡಸಿದ್ದಾರೆ. ಈ ಮೂಲಕ ತಾವು ಎಲ್ಲಾ ವರ್ಗದ ಜನಾನುರಾಗಿ ಎಂಬುದನ್ನು ಸಾಬೀತು ಮಾಡಿದ್ದಾರೆ.

ಡಾ.ಬಿ.ಜೆ.ವಿಜಯ ಕುಮಾರ್, ಜಿಲ್ಲಾಧ್ಯಕ್ಷ, ಮೈಸೂರು ಜಿಲ್ಲಾ ಕಾಂಗ್ರೆಸ್

ಸಾಲದ ಹೊರೆ



ಸಿದ್ದರಾಮಯ್ಯ ಅವರು ದಾಖಲೆ ಬಜೆಟ್ ಮಂಡಿಸಿರುವುದಾಗಿ ಹೇಳುತ್ತಾರೆ. ಆದರೆ ಅತಿ ಹೆಚ್ಚು ಸಾಲ ಮಾಡಿ ದಾಖಲೆ ಕೂಡ ನಿರ್ಮಾಣ ಮಾಡಿದ್ದಾರೆ. ಮೈಸೂರು ಅಭಿವೃದ್ಧಿಗೆ ಯೋಜನೆ ಪ್ರಕಟಿಸಿದ್ದಾರೆಯೇ ಹೊರತು ಹಣ ಬಿಡುಗಡೆ ಮಾಡಿಲ್ಲ. ಒಟ್ಟಾರೆ ಯೋಜನೆ ಘೋಷಣೆ ಮಾಡಿ, ಅನುಷ್ಠಾನದ ಬಗ್ಗೆ ಮೌನ ವಹಿಸಿದ್ದಾರೆ.

ಎಂ.ಎ.ಮೋಹನ್, ವಕ್ತಾರ, ನಗರ ಬಿಜೆಪಿ, ಮೈಸೂರು.

ರಾಜ್ಯದ ಜನತೆಯ ನಿರೀಕ್ಷೆ ಹುಸಿ..



17ನೇ ಬಜೆಟ್ ಮಂಡಿಸಿ ದಾಖಲೆ ನಿರ್ಮಿಸಿರುವುದಷ್ಟೇ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಸಾಧನೆ. ಕರ್ನಾಟಕದ ಜನತೆಯ ನಿರೀಕ್ಷೆಗಳು ಹುಸಿಯಾಗಿವೆ. ಸಾಮಾನ್ಯ ಜನರನ್ನು ಸಂಕಷ್ಟಕ್ಕೆ ದೂಡಿರುವುದೇ ಇವರ ಸಾಧನೆ. ಶಿಕ್ಷಣ ಮತ್ತು ಆರೋಗ್ಯ ಕ್ಷೇತ್ರಕ್ಕೆ ಹೆಚ್ಚಿನ ಒತ್ತು ನೀಡಬೇಕಿತ್ತು. ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡಗಳ ಕಲ್ಯಾಣಕ್ಕಾಗಿ ಇಟ್ಟಿರುವ ಅನುದಾನವನ್ನು ದುರುಪಯೋಗ ಮಾಡಿಕೊಂಡಿರುವ ಏಕೈಕ ಮುಖ್ಯಮಂತ್ರಿ ಸಿದ್ದರಾಮಯ್ಯ.

–**ವಿ.ಶೈಲೇಂದ್ರ,** ಮಾಜಿ ಉಪಮೇಯರ್

ವೇಮುಲ ಕಾಯ್ದೆ ತಂದಿರುವುದರಿಂದ ಹೆಚ್ಚಿನ ಬಲ



ಜಿಲ್ಲೆಗೊಂದು ವಿವಿಗಳಾಗಿದ್ದರೂ, ಅಲ್ಲಿನ ಜಾತಿ ಮನಸ್ಥಿತಿ ಮಾತ್ರ ಬದಲಾಗಿಲ್ಲ. ಉನ್ನತ ವ್ಯಾಸಂಗ ಮಾಡುವ ತುಮುಲದಿಂದ ಹಳ್ಳಿಗಾಡಿನಿಂದ ಹಲವಾರು ವಿದ್ಯಾರ್ಥಿಗಳು ಅದರಲ್ಲೂ ಪರಿಶಿಷ್ಟ ಜಾತಿಗೆ ಸೇರಿದ ಮಕ್ಕಳೇ ಹೆಚ್ಚಾಗಿ ಪಟ್ಟಣಗಳ ಕಡೆ ಬರುತ್ತಾರೆ. ವಿವಿಗಳಿಂದ ಎಷ್ಟೇ ಉನ್ನತ ಶಿಕ್ಷಣ ನೀಡಿದರೂ ಹೆಚ್ಚಿನ ಶಿಕ್ಷಣ ಪಡೆದವರಿಂದಲೇ ಜಾತಿ ವ್ಯವಸ್ಥೆಯನ್ನು ಕಿತ್ತು ಹಾಕಲು ಸಾಧ್ಯವಾಗಿಲ್ಲ. ಜಾತಿ ಸಂಕೋಲೆ ಬೇರು ಮತ್ತಷ್ಟು ತಳ ಊರುತ್ತಿದೆ. ಪ್ರಾಥಮಿಕ, ಪ್ರೌಢ ಹಂತಕ್ಕಿಂತ ಹೆಚ್ಚಾಗಿ ಉನ್ನತ ಶಿಕ್ಷಣ ಹಂತದಲ್ಲಿ ವೇಮುಲ ಕಾಯ್ದೆ ತಂದಿರುವುದರಿಂದ ಉನ್ನತ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಹೆಚ್ಚಿನ ಬಲ ಸಿಕ್ಕಂತಾಗಿದೆ. ಇದು ಜಾತಿ ನಿಂದನೆ ವಿರುದ್ಧ ಹೋರಾಡಿ ಮಕ್ಕಳ ಹಿತ ಕಾಯುವ ಕೆಲಸ ಮಾಡಲಿದೆ. ಇನ್ನು ಕಾಲೇಜು ಹಂತದಲ್ಲಿ ಚುನಾವಣೆ ನಡೆಸಲು ಉತ್ತೇಜಿಸುತ್ತಿರುವುದು ಒಳ್ಳೆಯ ಸಂಗತಿ. ಇದೊಂದು ಪ್ರಜಾಪ್ರಭುತ್ವದ ಪ್ರಕ್ರಿಯೆಯ ಮೊದಲ ಹೆಜ್ಜೆ

–**ಎಂ.ಕೆ.ಸವಿತಾ,** ರಿಜಿಸ್ಟ್ರಾರ್, ಮೈಸೂರು ವಿವಿ

ಅಭಿವೃದ್ಧಿಗೆ ಬದ್ಧರಾಮಯ್ಯ



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಜ್ಯದ ಸರ್ವತೋಮುಖ ಅಭಿವೃದ್ಧಿಗೆ ಸಶಕ್ತ ಹಾಗೂ ಸುಸ್ಥಿರ ಅಭಿವೃದ್ಧಿ ಮಾದರಿಗಳನ್ನು ಒಳಗೊಂಡ ಬಜೆಟ್ ಮಂಡಿಸಿದ್ದಾರೆ.

ಬಜೆಟ್ ಅನ್ನು 11ಜಿ ಮಾದರಿ ಆರ್ಥಿಕತೆಗಳೆಂದು ವ್ಯಾಖ್ಯಾನಿಸಿರುವ ಅವರ ದೂರದೃಷ್ಟಿ ರಾಜ್ಯದ ಅಭಿವೃದ್ಧಿ ಮೇಲೆ ಅವರಿಗಿರುವ ಕಾಳಜಿಯನ್ನು ತೋರಿಸುತ್ತಿದೆ. ಪರಿಸರ ಪೂರಕ ಆರ್ಥಿಕ ಚಟುವಟಿಕೆಗಳಿಗೆ ಪೂರಕವಾಗಿ ಗ್ರೀನ್ ಎಕಾನಮಿ ಮತ್ತು ನಗರ ಕೇಂದ್ರಿತ ಸುಸ್ಥಿರ ಆರ್ಥಿಕತೆಗಾಗಿ ಗೋಯಿಂಗ್ ಅರ್ಬನ್ ಎಕಾನಮಿ ಗುರುತಿಸಿ ಅನುದಾನ ಮೀಸಲಿಟ್ಟಿರುವುದು ಅತ್ಯುತ್ತಮ ನಡೆಯಾಗಿದೆ.

ಕೆ.ವಿ. ಮಲ್ಲೇಶ್, ನಗರ ಪಾಲಿಕೆ ಮಾಜಿ ಸದಸ್ಯ

ಖಾಲಿ ಚೊಂಬು ಕೊಟ್ಟ ಕಾಂಗ್ರೆಸ್ ಸರ್ಕಾರ

ಬಜೆಟ್ ವಿರುದ್ಧ ಬಿಜೆಪಿ ಪ್ರತಿಭಟನೆ

ಬೆಂಗಳೂರು, ಮಾ.6– ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಶುಕ್ರವಾರ 2026–27ನೇ ಸಾಲಿನ ಬಜೆಟ್ ಮಂಡಿಸಿದ್ದು, ಕಾಂಗ್ರೆಸ್ ಸರ್ಕಾರ ರಾಜ್ಯದ ಜನತೆಗೆ ಖಾಲಿ ಚೊಂಬು ಕೊಟ್ಟಿದೆ ಎಂದು ಪ್ರತಿಪಕ್ಷ ಬಿಜೆಪಿ ಕಿಡಿಕಾರಿದೆ.

ಸಿಎಂ ಸಿದ್ದರಾಮಯ್ಯ ಅವರು ಇಂದು ವಿಧಾನಸಭೆಯಲ್ಲಿ ದಾಖಲೆಯ 17ನೇ ಬಾರಿ ಬಜೆಟ್ ಮಂಡಿಸಿದರು. ಆದರೆ ಪ್ರತಿಪಕ್ಷ ಬಿಜೆಪಿ ಈ ಬಜೆಟ್ ವಿರೋಧಿಸಿ, ಕೈಯ್ಯಲ್ಲಿ ಖಾಲಿ ಚೊಂಬು ಹಿಡಿದು ಪ್ರತಿಭಟನೆ ನಡೆಸಿದೆ.



ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ವಿಪಕ್ಷ ನಾಯಕ ಆರ್. ಅಶೋಕ್ ನೇತೃತ್ವದಲ್ಲಿ ಖಾಲಿ ಚೊಂಬು ಪ್ರದರ್ಶಿಸಿ ಪ್ರತಿಭಟನೆ ನಡೆಸಲಾಯಿತು

ರಾಜ್ಯದ ಜನತೆಗೆ ಖಾಲಿ ಚೊಂಬು ಕೊಟ್ಟ ಕಾಂಗ್ರೆಸ್ ಸರ್ಕಾರ ಎಂದು ಪ್ರತಿಪಕ್ಷ ನಾಯಕ ಆರ್ ಅಶೋಕ್, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಸೇರಿದಂತೆ ಹಲವು ಬಿಜೆಪಿ ನಾಯಕರು ರಾಜ್ಯ ಸರ್ಕಾರದ ವಿರುದ್ಧ ಧಿಕ್ಕಾರ ಕೂಗಿದರು.

ರಾಜ್ಯದ ಜನತೆಯನ್ನು ಸಾಲದ ಸುಳಿಯಲ್ಲಿ ಸಿಲುಕಿಸುವಂತಹ ಬಜೆಟ್ ಮಂಡಿಸಿದ ಸಿಎಂ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರದ ವಿರುದ್ಧ ಇಂದು ವಿಜಯೇಂದ್ರ ಮತ್ತು ಆರ್. ಅಶೋಕ್ ನೇತೃತ್ವದಲ್ಲಿ ಬಿಜೆಪಿ ಶಾಸಕರು ವಿಧಾನಸೌಧದ ಮುಂಭಾಗದಲ್ಲಿ ಖಾಲಿ ಚೊಂಬು ಪ್ರದರ್ಶಿಸುವ ಮೂಲಕ ಪ್ರತಿಭಟನೆ ನಡೆಸಿದರು.

ಈ ವೇಳೆ ಸುದ್ದಿಗಾರರನ್ನುದ್ದೇಶಿಸಿ ಮಾತನಾಡಿದ ಆರ್.ಅಶೋಕ್, ರಾಜ್ಯದ ಕಾಂಗ್ರೆಸ್ ಸರ್ಕಾರ ಸಾಲ ಪಡೆದ ಹಣದಲ್ಲಿ ಐಷಾರಾಮಿ ಜೀವನ ನಡೆಸುತ್ತಿದೆ. ಸಾಲ ಮಾಡಿ ತುಪ್ಪ ತಿನ್ನುತ್ತಿದೆ. ಈ ಬಜೆಟ್ ನೀರಸವಾಗಿದೆ. ಇದರಲ್ಲಿ ಯಾವುದೇ ಹೊಸ ಯೋಜನೆಗಳಿಲ್ಲ. ಹೊಸ ಯೋಜನೆ ಎಂದರೆ ಹೆಚ್ಚು ಹೆಚ್ಚು ಸಾಲ ಪಡೆಯುವುದು ಮಾತ್ರ ಎಂದು ಟೀಕಿಸಿದರು.

ಕಳೆದ ಮೂರು ವರ್ಷಗಳಲ್ಲಿ, ರಾಜ್ಯ ಸರ್ಕಾರವು 4.39 ಲಕ್ಷ ಕೋಟಿ ರೂ. ಸಾಲ ಮಾಡಿದೆ ಎಂದು ಅಶೋಕ್ ಆರೋಪಿಸಿದರು. ಮುಂದೆ ಅಧಿರಾಕ್ಕೆ ಬರುವ ಸರ್ಕಾರಗಳು ಬಡ್ಡಿಯನ್ನು ಪಾವತಿಸುವ ಸ್ಥಿತಿಯಲ್ಲಿರುವುದಿಲ್ಲ, ಅಸಲು ಮೊತ್ತವನ್ನು ಬಿಟ್ಟು, ಹಣಕಾಸಿನ ಕೊರತೆಯು 97,000 ಕೋಟಿ ರೂ.ಗಳನ್ನು ತಲುಪಿದೆ ಎಂದು ಬಿಜೆಪಿ ನಾಯಕ ಹೇಳಿದರು.

ಈ ಸಂದರ್ಭದಲ್ಲಿ ಪ್ರತಿಪಕ್ಷ ಉಪ ನಾಯಕರಾದ ಶ್ರೀ ಅರವಿಂದ್ ಬೆಲ್ಲದ್, ವಿಧಾನ ಪರಿಷತ್ ಮುಖ್ಯ ಸಚೇತಕರಾದ ಎನ್.ರವಿಕುಮಾರ್, ಶಾಸಕರು ಮತ್ತು ಪ್ರಮುಖರು ಉಪಸ್ಥಿತರಿದ್ದರು.

ಮೈಸೂರು ಸೇರಿದಂತೆ ರಾಜ್ಯದ ಬಸ್ ನಿಲ್ದಾಣಗಳಲ್ಲಿ ಬಜೆಟ್ ನೇರ ಪ್ರಸಾರ

ಮೈಸೂರು, ಮಾ.6(ಎಂಕೆ)– ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ 17ನೇ ದಾಖಲೆ ಬಜೆಟ್ ಭಾಷಣವನ್ನು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ವತಿಯಿಂದ ಮೈಸೂರು ಗ್ರಾಮಾಂತರ ಬಸ್ ನಿಲ್ದಾಣ ಸೇರಿದಂತೆ ರಾಜ್ಯದ ಆಯ್ದ ಬಸ್ ನಿಲ್ದಾಣಗಳಲ್ಲಿರುವ ಎಲ್‌ಇಡಿ ಮತ್ತು ಟಿವಿ ಪರದೆಗಳ ಮೂಲಕ ಶುಕ್ರವಾರ ನೇರ ಪ್ರಸಾರ ಮಾಡಲಾಯಿತು.



ಮೈಸೂರು ಗ್ರಾಮಾಂತರ ಬಸ್ ನಿಲ್ದಾಣದಲ್ಲಿ ಬಜೆಟ್ ನೇರ ಪ್ರಸಾರ ಮಾಡುತ್ತಿರುವುದು.

17ನೇ ಬಾರಿ ಬಜೆಟ್ ಮಂಡಿಸುವ ಮೂಲಕ ಹೊಸ ದಾಖಲೆ ಸೃಷ್ಟಿಸಿದ ಹಿನ್ನೆಲೆಯಲ್ಲಿ ಬಜೆಟ್ ಭಾಷಣದ ನೇರ ಪ್ರಸಾರವನ್ನು ರಾಜ್ಯದ ಜನತೆಗೆ ತಲುಪಿಸಲು ವಿಶೇಷ ವ್ಯವಸ್ಥೆಯನ್ನು ಮೊದಲ ಬಾರಿಗೆ ಮಾಡಲಾಗಿತ್ತು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ(ಡಿಐಪಿಆರ್)ಮೂಲದ ವೃತ್ತಿ ಮೀಡಿಯಾ ಸಲ್ಯೂಷನ್ಸ್ ಸಂಸ್ಥೆ ಸಹಭಾಗಿತ್ವದಲ್ಲಿ ರಾಜ್ಯದಾದ್ಯಂತ ಇರುವ 230 ಸರ್ಕಾರಿ ಬಸ್ ನಿಲ್ದಾಣಗಳಲ್ಲಿ ಅಳವಡಿಸಿರುವ ಡಿಜಿಟಲ್ ಸ್ಕ್ರೀನ್(ಎಲ್‌ಇಡಿ)ಮತ್ತು ಟಿವಿ ಪರದೆಗಳ ಮೂಲಕ ಬಜೆಟ್ ಮಂಡನೆಯ ನೇರ ಪ್ರಸಾರ ಮಾಡಲಾಯಿತು.

ಮೈಸೂರಿನ ಗ್ರಾಮಾಂತರ ಬಸ್ ನಿಲ್ದಾಣದಲ್ಲಿರುವ 10ಕ್ಕೂ ಹೆಚ್ಚು ಟಿವಿಗಳಲ್ಲಿ ಬಜೆಟ್ ಭಾಷಣದ ನೇರ ಪ್ರಸಾರವನ್ನು ಪ್ರಯಾಣಿಕರು ವೀಕ್ಷಣೆ ಮಾಡಿದರು. ಮೊದಲ ಪ್ರಯೋಗವಾಗಿದ್ದರಿಂದ ಪ್ರಸಾರದ ವೇಳೆ ಟಿವಿ ಪ್ರಸಾರದ ನಿರಂತರತೆಯಲ್ಲಿ ಸ್ವಲ್ಪ ತೊಡಕಾದರೂ ಬಸ್ ನಿಲ್ದಾಣದ ಮೂಲೆ ಮೂಲೆಗೂ ಭಾಷಣದ ಆಡಿಯೋ ಕೇಳಿಸುತ್ತಿತ್ತು.

ಉರ್ದು ಶಾಲೆಗಳ ಅಭಿವೃದ್ಧಿಗೆ 600 ಕೋಟಿ

ಬೆಂಗಳೂರು, ಮಾ.6– ಮುಖ್ಯಮಂತ್ರಿ ಸಿದ್ದರಾಮಯ್ಯ ಮಂಡಿಸಿದ ರಾಜ್ಯದ ಆಯ ವ್ಯಯದಲ್ಲಿ ಅಲ್ಪಸಂಖ್ಯಾತರ ಅಭಿವೃದ್ಧಿಗಾಗಿ ಅನೇಕ ಯೋಜನೆಗಳನ್ನು ಘೋಷಣೆ ಮಾಡಿದ್ದಾರೆ. ಅಲ್ಪಸಂಖ್ಯಾತರ ವಸತಿ ಶಾಲೆ ಗಳಿಗೆ ಹೆಚ್ಚಿನ ಬೇಡಿಕೆ ಇರುವ ಕಾರಣ ಸಂತ ಶಿಶುನಾಳ ಶರೀಫರ ಹೆಸರಿನಲ್ಲಿ 10 ಹೊಸ ವಸತಿ ಶಾಲೆಗಳನ್ನು ಸಿಬಿಎಸ್‌ಇ ಪಠ್ಯಕ್ರಮದಡಿಯಲ್ಲಿ ಪ್ರಾರಂಭಿಸಲಾಗುವುದು. ಇದಕ್ಕಾಗಿ ಪ್ರಸಕ್ತ ಸಾಲಿನಲ್ಲಿ 10 ಕೋಟಿ ರೂ.ಗಳ ಅನುದಾನ ಮೀಸಲಿಟ್ಟಿದ್ದಾರೆ.



ಹೆಚ್ಚಿನ ಬೇಡಿಕೆ ಇರುವ ಜಿಲ್ಲೆಗಳಲ್ಲಿ 150 ಸಂಖ್ಯಾಬಲದ 25 ಹೊಸ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಿಸಲಾಗುವುದು. ಹಾಲಿ ಕಾರ್ಯನಿರ್ವಹಿಸುತ್ತಿರುವ 25 ವಿದ್ಯಾರ್ಥಿನಿಲಯಗಳಲ್ಲಿ 50 ವಿದ್ಯಾರ್ಥಿಗಳ ಸಂಖ್ಯಾಬಲವನ್ನು ಹೆಚ್ಚಿಸಲಾಗುವುದು. 2025–26ನೇ ಸಾಲಿನಲ್ಲಿ 117 ಮೌಲಾನಾ ಆಜಾದ್ ಮಾದರಿ ಶಾಲೆಗಳು ಹಾಗೂ ಉರ್ದು ಶಾಲೆಗಳನ್ನು ಕೆಪಿಎಸ್ ಮಾದರಿಯಲ್ಲಿ 600 ಕೋಟಿ ವೆಚ್ಚದಲ್ಲಿ ಉನ್ನತೀಕರಿಸಲಾಗುತ್ತಿದೆ. ಪ್ರಸಕ್ತ ಸಾಲಿನಲ್ಲಿ ಇನ್ನೂ 100 ಶಾಲೆಗಳನ್ನು 400 ಕೋಟಿ ವೆಚ್ಚದಲ್ಲಿ ಇದೇ ಮಾದರಿಯಲ್ಲಿ ಉನ್ನತೀಕರಿಸಲಾಗುವುದು. ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳ ಪೈಕಿ 25 ವಸತಿ ಶಾಲೆಗಳಲ್ಲಿ ಪಿ.ಯು.ಸಿ ವಿಜ್ಞಾನ ಮತ್ತು ವಾಣಿಜ್ಯ ವಿಭಾಗಗಳನ್ನು ಪ್ರಾರಂಭಿಸಲಾಗುವುದು. 18 ಎ.ಪಿ.ಜೆ ಅಬ್ದುಲ್ ಕಲಾಂ ವಸತಿ ಶಾಲೆಗಳಲ್ಲಿ ವಾಣಿಜ್ಯ ವಿಭಾಗವನ್ನು ಪ್ರಾರಂಭಿಸಲಾಗುವುದು.

ಅಲ್ಪಸಂಖ್ಯಾತರ ವಸತಿ ಶಾಲೆಗಳಲ್ಲಿ ಪಿ.ಯು.ಸಿ ವ್ಯಾಸಂಗ ಮಾಡುತ್ತಿರುವ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಪ್ರವೇಶ ಪರೀಕ್ಷೆಯ ಮೂಲಕ ಆಯ್ಕೆ ಮಾಡಿ, ಅವರಿಗೆ ಕೆ–ಸಿಇಟಿ/ಜೆಇಇ/ಎನ್‌ಇಇಟಿ ಪರೀಕ್ಷೆಗಳಿಗೆ ಗುಣಮಟ್ಟದ ತರಬೇತಿ ನೀಡಲು ನಾಲ್ಕು ವಸತಿ ಶಾಲೆಗಳನ್ನು ಸ್ಥಾಪಿಸಲಾಗುವುದು. ಅಲ್ಲದೇ 20 ವಸತಿ ಶಾಲೆಗಳಲ್ಲಿನ ಮಕ್ಕಳಿಗೆ ವಿಶೇಷ ತರಬೇತಿ ನೀಡಲಾಗುವುದು.


ಎಲ್ಲಾ ಸಮುದಾಯಗಳ ವಿದ್ಯಾರ್ಥಿಗಳಿಗೆ ನಿರಂತರ ಕಲಿಕಾ ಅವಕಾಶಗಳನ್ನು ಒದಗಿಸಲು ಮತ್ತು ಜ್ಞಾನವನ್ನು ವೃದ್ಧಿಸಲು ಆಯ್ದ ವಕ್ಫ್ ಆಸ್ತಿಗಳಲ್ಲಿ ಕಲಿಕಾ ಕೇಂದ್ರ ಹಾಗೂ ನಾಗರಿಕ ಸೇವಾ ಕೇಂದ್ರಗಳನ್ನು ಪ್ರಾರಂಭಿಸಲಾಗುವುದು.

ಅಲ್ಪಸಂಖ್ಯಾತರ ಪ್ರತಿಭಾವಂತ ಬಡ ವಿದ್ಯಾರ್ಥಿಗಳಿಗೆ ತಾಂತ್ರಿಕ ಹಾಗೂ ಉನ್ನತ ಮಟ್ಟದ ಡಿಜಿಟಲ್ ಶಿಕ್ಷಣವನ್ನು ಪ್ರೋತ್ಸಾಹಿಸಲು 5,000 ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ಖರೀದಿಗಾಗಿ ತಲಾ 50,000 ರೂಗಳನ್ನು ನೀಡಲಾಗುವುದು. ಸಂವಿಧಾನ ಶಿಲ್ಪಿ ಡಾ.ಬಾಬಾ ಸಾಹೇಬ್ ಅಂಬೇಡ್ಕರ್ ಹಾಗೂ ಇತರೆ ಸಮಾಜ ಸುಧಾರಕರ ಪುಸ್ತಕಗಳನ್ನು ಉರ್ದು ಭಾಷೆಯಲ್ಲಿ ಅನುವಾದಿಸಲಾಗುವುದು.

ಬಜೆಟ್ ವೈಖರಿಗೆ ಕೇಂದ್ರ ಸಚಿವ ಹೆಚ್‌ಡಿಕೆ ಕಳವಳ

- 8.24 ಲಕ್ಷ ಕೋಟಿಗೆ ಏರಿದ ರಾಜ್ಯದ ಸಾಲ
- ಕಾಂಗ್ರೆಸ್ ಪಕ್ಷದ ಕ್ಯಾಬಿನೆಟ್, ಸ್ಟೇಟ್ ದರ್ಜೆ ಆಸಾಮಿಗಳ ಕಿಸೆಗೆ ಸಾಲದ ಹಣ
- ಕಾಂಗ್ರೆಸ್ಸಿಗರಿಗೆ ಗಂಜಿ ಕೇಂದ್ರವಾದ ಸರಕಾರ; ಬಂಡವಾಳ ವೆಚ್ಚ ಶೂನ್ಯ
- 16ನೇ ಹಣಕಾಸು ಆಯೋಗದಲ್ಲಿ ರಾಜ್ಯದ ತೆರಿಗೆ ಪಾಲನ್ನು 3.61%ರಿಂದ 4.7%ಗೆ ಏರಿಸಲಾಗಿದೆ

ಬೆಂಗಳೂರು: ರಾಜ್ಯ ಕಾಂಗ್ರೆಸ್ ಸರ್ಕಾರ ಸಾಲ ಮಾಡಿ ಕಾಂಗ್ರೆಸ್ ನಾಯಕರನ್ನು ಸಾಕುತ್ತಿದೆ. ಸರಕಾರವು ಕಾಂಗ್ರೆಸ್ಸಿಗರಿಗೆ ಗಂಜಿ ಕೇಂದ್ರವಾಗಿದೆ ಎಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಕಟುವಾಗಿ ಟೀಕಿಸಿದ್ದಾರೆ.



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಡಿಸಿದ ಬಜೆಟ್ ಬಗ್ಗೆ ಮಾಧ್ಯಮ ಹೇಳಿಕೆ ಬಿಡುಗಡೆ ಮಾಡಿರುವ ಕೇಂದ್ರ ಸಚಿವರು; ರಾಜ್ಯದ್ದು ಈಗ 4.48 ಲಕ್ಷ ಕೋಟಿ ಗಾತ್ರದ ಬಜೆಟ್. ರಾಜ್ಯದ ಈಗಿನ ಒಟ್ಟು ಸಾಲ 8.24 ಲಕ್ಷ ಕೋಟಿ ಆಗಿದೆ. ಈ ಸಾಲ ಕಳೆದ ವರ್ಷದಿಂದ ಈ ವರ್ಷಕ್ಕೆ 1.16 ಲಕ್ಷ ಕೋಟಿಯಿಂದ 1.32 ಲಕ್ಷ ಕೋಟಿಗೆ ಏರಿದೆ. ಮುಂದಿನ ವರ್ಷಕ್ಕೆ 9 ಲಕ್ಷ ಕೋಟಿ ಮೀರುವುದು ಗ್ಯಾರಂಟಿ. ಈ ಸಾಲದ ಗ್ಯಾರಂಟಿ ಭೀತಿ ಹುಟ್ಟಿಸುತ್ತದೆ ಎಂದು ಕಳವಳ ವ್ಯಕ್ತಪಡಿಸಿದ್ದಾರೆ.

ಸಾಲದ ದುಡ್ಡು ಕಾಂಗ್ರೆಸ್ಸಿಗರ ಕಿಸೆಗೆ ಸೇರುತ್ತಿದೆ: ಸಾಲ ಮಾಡುತ್ತಿದ್ದೀರಿ, ಸರಿ. ಅದನ್ನು ಏತಕ್ಕೆ ಬಳಕೆ ಮಾಡುತ್ತಿದ್ದೀರಿ. ಸಾಲಕ್ಕೆ ತಕ್ಕಂತೆ ಬಂಡವಾಳ ವೆಚ್ಚವೂ ಆಗಬೇಕಲ್ಲವೇ. ದುರಂತವೆಂದರೆ, ಬಂಡವಾಳ ವೆಚ್ಚ ಎಲ್ಲಿದೆಯೋ ಯಾರಿಗೂ ಗೊತ್ತಿಲ್ಲ. ಕಳೆದ ಮೂರು ವರ್ಷಗಳಿಂದ ಅಲ್ಲೇ ಇದೆ. ಇವರು ಸಾಲ ಮಾಡಿ ಮೋಜು ಮಾಡುತ್ತಿದ್ದಾರೆ. ಸಾಲದ ಮೇಲೆ ಸಾಲ ಮಾಡಿ 140ಕ್ಕೂ ಹೆಚ್ಚು ಕಾಂಗ್ರೆಸ್ ನಾಯಕರಿಗೆ ಕ್ಯಾಬಿನೆಟ್ ದರ್ಜೆ, ಸ್ಟೇಟ್ ಮಿನಿಸ್ಟರ್ ದರ್ಜೆ ದಯಪಾಲಿಸಿ ಪೊಗದಸ್ತಾಗಿ ಸಾಕುತ್ತಿದ್ದಾರೆ. ಅನುತ್ಪಾದಕ ವೆಚ್ಚಕ್ಕೆ ಹಣ ಪೋಲಾಗುತ್ತಿದ್ದು, ಈ ಸರಕಾರ ಕಾಂಗ್ರೆಸ್ ಕಾರ್ಯಕರ್ತರಿಗೆ ಗಂಜಿ ಕೇಂದ್ರವಾಗಿದೆ. ಸಾಲದ ದುಡ್ಡು ಅವರ ಕಿಸೆ ಸೇರುತ್ತಿದೆ. ವೋಟು ಕೊಟ್ಟ ಮಹಾಪಾಪಕ್ಕೆ ಜನತೆಯನ್ನು ಶಾಶ್ವತವಾಗಿ ಸಾಲದ ಕೂಪಕ್ಕೆ ನೂಕುವ ಧಾರುಣ ಬಜೆಟ್ ಇದಾಗಿದೆ ಎಂದು ಮುಖ್ಯಮಂತ್ರಿಗಳನ್ನು ತರಾಟೆಗೆ ತೆಗೆದುಕೊಂಡಿದ್ದಾರೆ.

ಮುಂಬರುವ ಸರಕಾರಗಳಿಗೆ ಕಾಂಗ್ರೆಸ್ ಸರಕಾರ ಸೃಷ್ಟಿಸುವ ಸಾಲ ಗುಂಡಿಯನ್ನು ಮುಚ್ಚುವುದೇ ಕೆಲಸ ಆಗಲಿದೆ ಎಂದು ಕೇಂದ್ರ ಸಚಿವರು ಹೇಳಿದ್ದಾರೆ.

ಸ್ಲೋಗನ್ ರಾಮಯ್ಯ: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು 'ಸ್ಲೋಗನ್ ರಾಮಯ್ಯ' ಎಂದು ಮೂದಲಿಸಿರುವ ಕುಮಾರಸ್ವಾಮಿ, ಬಜೆಟ್ಟಿನ ಸುದೀರ್ಘ ಪ್ರಲಾಪ ಆಲಿಸಿದೆ ಅವರಿಗೆ 17ನೇ ಬಜೆಟ್ ಮಂಡಿಸಿದ ಖುಷಿ, ಜನರಿಗೆ ಬರೆ ಎಳೆಸಿಕೊಂಡ ಬಿಸಿ. ದಾಖಲೆ ಮಾಡಲು ಹೋಗಿ ರಾಜ್ಯದ ಆರ್ಥಿಕತೆಯನ್ನು ದಿಕ್ಕಾಪಾಲಾಗಿಸಿದ್ದಾರೆ ಎಂದು ಕಿಡಿಕಾರಿದ್ದಾರೆ.

ಕರ್ನಾಟಕದ ಆರ್ಥಿಕತೆ ಹಿಂಜರಿಕೆಯತ್ತ ಸಾಗಿದೆ. ಸಿಎಜಿ ವರದಿ, ರಿಸರ್ವ್ ಬ್ಯಾಂಕ್ ಕೊಟ್ಟಿರುವ ಎಚ್ಚರಿಕೆಗಿಂತ ದೊಡ್ಡ ಆರ್ಥಿಕ ಅಪಾಯಕ್ಕೆ ಸಿಲುಕಿದೆ. ಕರ್ನಾಟಕ ಮುಂದಿನ ದಿನಗಳು ಇನ್ನೂ ದುರ್ಬರವಾಗಿವೆ. ಕಾಂಗ್ರೆಸ್ ಸರಕಾರವನ್ನು ರಾಜ್ಯದ ಜನರು ಕ್ಷಮಿಸುವುದಿಲ್ಲ ಎಂದು ಅವರು ಹೇಳಿದ್ದಾರೆ.

ಕೇಂದ್ರ ನಿಂದನೆ ಸರಿಯಲ್ಲ: ಈ ಆಯವ್ಯಯ ಕರ್ಣಕಠೋರ ಮತ್ತು ರಾಜ್ಯಕ್ಕೆ ಭಾರ. ಏಕೆಂದರೆ, ಮುಖ್ಯಮಂತ್ರಿಗಳು ಕೇಂದ್ರದ ನಿಂದನೆಯನ್ನು ಈ ಬಾರಿಯೂ ಮುಂದುವರಿಸಿದ್ದಾರೆ. ಅದು ಅಗತ್ಯವಿರಲಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ

ಆಯ-ವ್ಯಯ 2026-27ರ ಮುಖ್ಯಾಂಶಗಳು

ಆಯ-ವ್ಯಯ ಗಾತ್ರ: 4,48,004 ಕೋಟಿ ರೂ.

■ ಒಟ್ಟು ಸ್ವೀಕೃತಿಗಳು 4,47,240 ಕೋಟಿ ರೂ.; ರಾಜಸ್ವ ಸ್ವೀಕೃತಿಗಳು 3,15,050 ಕೋಟಿ ರೂ.; ಬಂಡವಾಳ ಸ್ವೀಕೃತಿಗಳು 190 ಕೋಟಿ ರೂ. ಇದರಲ್ಲಿ ಸಾರ್ವಜನಿಕ ಸಾಲ 1,32,000 ಕೋಟಿ ರೂ. ಸೇರಿದೆ. ■ ಒಟ್ಟು ವೆಚ್ಚ 4,48,004 ಕೋಟಿ ರೂ.; ರಾಜಸ್ವ ವೆಚ್ಚ 3,38,007 ಕೋಟಿ ರೂ.; ನಿವ್ವಳ ಬಂಡವಾಳ ವೆಚ್ಚ 74,682 ಕೋಟಿ ರೂ.; ಒಟ್ಟು ಬಂಡವಾಳ ವೆಚ್ಚ (Gross) 84,567 ಕೋಟಿ ರೂ., ಸಾಲ ಮರುಪಾವತಿ 35,316 ಕೋಟಿ ರೂ.ಗಳು. ■ ಆಯವ್ಯಯದಲ್ಲಿ ಎಸ್.ಸಿ.ಎಸ್.ಪಿ., ಟಿ.ಎಸ್.ಪಿ. ಅನುದಾನ ಹಂಚಿಕೆ 44,632 ಕೋಟಿ ರೂ.; ಎಸ್.ಸಿ. ಎಸ್.ಪಿ.ಗೆ 31,804 ಕೋಟಿ ರೂ. ಹಾಗೂ ಟಿ.ಎಸ್.ಪಿ.ಗೆ 12,828 ಕೋಟಿ ರೂ. ■ ಮಹಿಳಾ ಆಯವ್ಯಯದ ಹಂಚಿಕೆ 94,663 ಕೋಟಿ ರೂ.ಗಳು. ■ ಮಕ್ಕಳ ಆಯವ್ಯಯದ ಹಂಚಿಕೆ 63,135 ಕೋಟಿ ರೂ. ■ ರಾಜ್ಯದಲ್ಲಿ ವಿವಿಧ ಇಲಾಖೆಗಳಲ್ಲಿ ಖಾಲಿಯಿರುವ 56,432 ಹುದ್ದೆಗಳ ಭರ್ತಿ ಮಾಡುವ ಪ್ರಕ್ರಿಯೆಗೆ ಚಾಲನೆ. ■ ರಾಜ್ಯದ ರಸ್ತೆ ಮತ್ತು ಮೂಲಸೌಕರ್ಯ ಅಭಿವೃದ್ಧಿಗಾಗಿ 4,000 ಕೋಟಿ ರೂ. ವೆಚ್ಚದಲ್ಲಿ ಮುಖ್ಯಮಂತ್ರಿ ಮೂಲಸೌಕರ್ಯ ಅಭಿವೃದ್ಧಿ ಎರಡನೇ ಹಂತದ ಕಾರ್ಯಕ್ರಮ.

ಕೃಷಿ



■ ರೈತರ ನೆರವಿನ ನಾಲ್ಕು ಆಧಾರ ಸ್ತಂಭಗಳು ಅಂದರೆ ವೈಜ್ಞಾನಿಕ ಕೃಷಿ ಮಾರ್ಗದರ್ಶನ, ಹಣಕಾಸು ನೆರವು, ಉತ್ತಮ ಗುಣಮಟ್ಟದ ಕೃಷಿ ಪರಿಕರಗಳು ಮತ್ತು ಬೆಳೆ ನಿರ್ವಹಣೆ ಹಾಗೂ ಕೊಯ್ಲೋತ್ತರ ಸಂಗ್ರಹಣಾ ವಿಸ್ತರಣೆ. ■ ಕೃಷಿ ಬೆಳೆಗಳ ಮೌಲ್ಯವರ್ಧನೆ ಹಾಗೂ ಕೃಷಿ ತ್ಯಾಜ್ಯ ಮರುಬಳಕೆ ಉತ್ತೇಜಿಸಲು ಮುಂದಿನ ಮೂರು ವರ್ಷಗಳಲ್ಲಿ ಮುಖ್ಯಮಂತ್ರಿ ಕೃಷಿ ವಿಸ್ತಾರ ಯೋಜನೆ ಜಾರಿಗೆ 100 ಕೋಟಿ ರೂ. ■ ಸಿರಿಧಾನ್ಯ ಮತ್ತು ಸಾವಯವ ಉತ್ಪನ್ನಗಳನ್ನು ಉತ್ತೇಜಿಸಲು ಮಿಲೆಟ್ಹಬ್ ಏಕಗವಾಕ್ಷಿ ವ್ಯವಸ್ಥೆ. ■ ಇಲಾಖೆಯ ಎಲ್ಲಾ ಪ್ರಯೋಗಾಲಯಗಳಿಗೆ NABL ಮಾನ್ಯತೆ. ■ ನೂತನ ದ್ವಿದಳಧಾನ್ಯ ತಳಿಗಳ ಬಿತ್ತನೆ ಬೀಜಗಳ ಸಹಾಯಧನದಲ್ಲಿ ಹೆಚ್ಚಳ. ■ ಪರಿಸರ ಸ್ನೇಹಿ ಮತ್ತು ಸುಸ್ಥಿರ ಕೃಷಿ ಪದ್ಧತಿಗಳನ್ನು ಉತ್ತೇಜಿಸಲು ವಸುಧಾಮೃತ ಕಾರ್ಯಕ್ರಮ. ■ ಬೆಳೆಗಳಲ್ಲಿ ಕೀಟ ಹಾಗೂ ರೋಗಗಳ ನಿಯಂತ್ರಣಕ್ಕೆ ಸಸ್ಯ ಸಂಜೀವಿನಿ ಯೋಜನೆ. ■ ರೈತ ಕರೆ ಕೇಂದ್ರವನ್ನು AI ತಂತ್ರಜ್ಞಾನದಿಂದ ಉನ್ನತೀಕರಣ. ■ ಕೃಷಿಯಲ್ಲಿ ಉತ್ಪಾದನಾ ವೆಚ್ಚ ಕಡಿತಕ್ಕೆ ಹೈಟೆಕ್ ಹಾರ್ವೆಸ್ಟರ್ ಹಬ್ ಯೋಜನೆಯಡಿ ಬಿತ್ತನೆ ಮತ್ತು ನಾಟಿ ಯಂತ್ರಗಳ ಸೇರ್ಪಡೆ. ■ ಚಿತ್ರದುರ್ಗದ ಬಬ್ಬೂರಿನ ಜಿಲ್ಲಾ ಕೃಷಿ ತರಬೇತಿ ಕೇಂದ್ರವನ್ನು ರಾಜ್ಯಮಟ್ಟದ ಕೃಷಿ ಉದ್ದಿಮೆ ಕೇಂದ್ರವನ್ನಾಗಿ ಉನ್ನತೀಕರಣ ■ ಮಂಡ್ಯ ಜಿಲ್ಲೆಯ ಪಾಂಡವಪುರ ತಾಲ್ಲೂಕನ್ನು ಸಂಪೂರ್ಣ ಸಾವಯವ ತಾಲ್ಲೂಕನ್ನಾಗಿ ಪರಿವರ್ತಿಸಲು ಸಾವಯವ ಪ್ರಮಾಣೀಕರಣ ವ್ಯವಸ್ಥೆ ಜಾರಿ ■ ಭತ್ತದ ಕೃಷಿಯಲ್ಲಿ ನೀರಿನ ಬಳಕೆಯ ದಕ್ಷತೆಗೆ ಪರ್ಯಾಯ ತೇವ ಒಣಗಿಸುವ ವಿಧಾನಗಳಿಗೆ ಉತ್ತೇಜನ. ■ ಕೋಲಾರ ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ MSIL ವತಿಯಿಂದ ರೈತ ಮಾಲ್‌ಗಳ ಸ್ಥಾಪನೆ.



ತೋಟಗಾರಿಕೆ

■ ತೋಟಗಾರಿಕಾ ಇಲಾಖೆಯ ಕ್ಷೇತ್ರಗಳಲ್ಲಿ ಮತ್ತು ನರ್ಸರಿಗಳಲ್ಲಿ PPP ಮಾದರಿಯಲ್ಲಿ ತೋಟಗಾರಿಕೆ ಆಧಾರಿತ ಕೈಗಾರಿಕೆಗಳ ಸ್ಥಾಪನೆ. ■ ಅಡಿಕೆ ಮತ್ತು ತೆಂಗು ಬೆಳೆಗಳಲ್ಲಿ ಸಮುದಾಯ ಆಧಾರಿತ ರೋಗ ಕೀಟ ನಿಯಂತ್ರಣ ಕ್ರಮಗಳಿಗಾಗಿ 10 ಕೋಟಿ ರೂ. ■ ತೋಟಗಾರಿಕೆ ಉತ್ಪನ್ನಗಳಿಗಾಗಿ 64 ಕೋಟಿ ರೂ.ಗಳಲ್ಲಿ 12,000 ಮೆಟ್ರಿಕ್ ಟನ್ ಸಾಮರ್ಥ್ಯದ ಎರಡು ಶೀತಲಗೃಹಗಳ ನಿರ್ಮಾಣ. ■ ಮೈಸೂರಿನ ಲಿಂಗಾಂಬುಧಿ ಸಸ್ಯತೋಟದ ಸಮಗ್ರ ಅಭಿವೃದ್ಧಿ. ■ ನೀರಿನ ಸಂರಕ್ಷಣೆ ಮತ್ತು ರೋಗಗಳನ್ನು ತಡೆಗಟ್ಟಲು ಮಣ್ಣಿಲ್ಲದ ಕೃಷಿಗೆ ಪ್ರೋತ್ಸಾಹ.

ರೇಷ್ಮೆ



■ ಉತ್ತರ ಕರ್ನಾಟಕದಲ್ಲಿ ಬೆಳೆಯುವ ರೇಷ್ಮೆಗೂಡುಗಳನ್ನು ಎಲ್ಲಾ ಮಾರುಕಟ್ಟೆಯಲ್ಲಿ ಮಾರಾಟ ಮಾಡಲು ಪ್ರತಿ ಕೆ.ಜಿ. ಗೂಡಿನ ಸಾಗಾಣಿಕಾ ವೆಚ್ಚ 20 ರೂ. ಗೆ ಹೆಚ್ಚಳ. ■ ರಾಮನಗರ, ಶಿಡ್ಲಘಟ್ಟ, ಹಾವೇರಿ, ತಾಂಡವಪುರ ಹಾಗೂ ಕಲಬುರಗಿಯಲ್ಲಿ ಸಿಲ್ಕ್ ಪಾರ್ಕ್‌ಗಳ ಸ್ಥಾಪನೆ.



ಪಶುಸಂಗೋಪನೆ

■ ನಬಾರ್ಡ್ ಸಹಯೋಗದೊಂದಿಗೆ 100 ಪಶುವೈದ್ಯಕೀಯ ಸಂಸ್ಥೆಗಳ ನೂತನ ಕಟ್ಟಡಗಳ ನಿರ್ಮಾಣ. ■ ಬೆಳಗಾವಿ ಮತ್ತು ಕಲಬುರಗಿ ವಿಭಾಗಗಳಲ್ಲಿ ಕುರಿ/ಮೇಕೆ ಮತ್ತು ಹಸು/ಎಮ್ಮೆ ಖರೀದಿಗೆ ತಲಾ 10,000 ಫಲಾನುಭವಿಗಳಿಗೆ ಶೇ.25 ರಷ್ಟು ಸಹಾಯಧನ. ■ 15 ತಾಲೂಕುಗಳ ಪಶು ಆಸ್ಪತ್ರೆಗಳನ್ನು ಪಾಲಿಕ್ಲಿನಿಕ್‌ಗಳನ್ನಾಗಿ ಮೇಲ್ದರ್ಜೆಗೇರಿಸಲು 10 ಕೋಟಿ ರೂ. ■ ಬೋಯರ್ ಮೇಕೆ ತಳಿ ಸಂವರ್ಧನಾ ಕೇಂದ್ರ ಸ್ಥಾಪನೆ ಹಾಗೂ ಬಂಡೂರು ಕುರಿ ತಳಿ ಸಂವರ್ಧನಾ ಕೇಂದ್ರದ ಸಮಗ್ರ ಅಭಿವೃದ್ಧಿ. ■ ಜಾನುವಾರುಗಳ ಸಂತಾನೋತ್ಪತ್ತಿ ಸಮಸ್ಯೆಯನ್ನು ನಿವಾರಿಸಲು 1,000 ಗ್ರಾಮ ಪಂಚಾಯಿತಿಗಳಲ್ಲಿ "ಫಲಧಾರೆ" ಶಿಬಿರಗಳು. ■ ಬೆಂಗಳೂರು ಹಾಗೂ ಬೀದರ್‌ನ ಪಶು ವೈದ್ಯಕೀಯ ಮಹಾವಿದ್ಯಾಲಯಗಳಲ್ಲಿ ಸಿ.ಟಿ. ಸ್ಕ್ಯಾನಿಂಗ್ ಕೇಂದ್ರ ಸ್ಥಾಪನೆ. ■ ಬೆಂಗಳೂರು ಹಾಗೂ ಬೀದರ್‌ನಲ್ಲಿ "ಶ್ವಾನ ಸಂತಾನ ನಿಯಂತ್ರಣ ತರಬೇತಿ ಕೇಂದ್ರ" ಸ್ಥಾಪನೆ.

ಮೀನುಗಾರಿಕೆ



■ ಮೀನುಗಾರರಿಗೆ ಉಚಿತವಾಗಿ ಸರಬರಾಜು ಮಾಡುವ ಸಲಕರಣೆ ಕಿಟ್‌ಗಳ ವೆಚ್ಚ 20,000 ರೂ.ಗಳಿಗೆ ಹೆಚ್ಚಳ. ■ ಮಂಗಳೂರು ಮೀನುಗಾರಿಕೆ ಮಹಾವಿದ್ಯಾಲಯದಲ್ಲಿ ಸೆಂಟರ್ ಆಫ್ ಎಕ್ಸಲೆನ್ಸ್ ಸ್ಥಾಪನೆ. ■ ಬೆಳಗಾವಿ, ದಾವಣಗೆರೆ, ಹುಬ್ಬಳ್ಳಿ ಮತ್ತು ಚಿಕ್ಕಮಗಳೂರಿನಲ್ಲಿ ಮತ್ಸ್ಯದರ್ಶಿನಿಗಳ ಸ್ಥಾಪನೆ. ■ ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ ಮತ್ತು ಬಾಗಲಕೋಟೆಯಲ್ಲಿ ಅತ್ಯಾಧುನಿಕ ಮೀನು ಮಾರುಕಟ್ಟೆಗಳ ನಿರ್ಮಾಣ. ■ ಮೀನುಗಾರಿಕಾ ಕೊಂಡಿ ರಸ್ತೆ ನಿರ್ವಹಣಾ ಕಾಮಗಾರಿಗೆ 20 ಕೋಟಿ ರೂ.



ಸಹಕಾರ

■ 38 ಲಕ್ಷ ರೈತರಿಗೆ ಶೂನ್ಯ ಬಡ್ಡಿ ದರದಲ್ಲಿ 30,000 ಕೋಟಿ ರೂ.ಗಳ ಕೃಷಿ ಸಾಲ ವಿತರಣೆಯ ಗುರಿ. ■ 1,628 ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಗಣಕೀಕರಣ. ■ ವಿವಿಧ ಸೇವೆಗಳನ್ನು ಜನಸಾಮಾನ್ಯರಿಗೆ ಸುಲಭವಾಗಿ ಒದಗಿಸಲು ದತ್ತಾಂಶದ ಆನ್‌ಲೈನ್ ನಿರ್ವಹಣೆ. ■ ಕರ್ನಾಟಕ ರಾಜ್ಯ ಉಗ್ರಾಣ ನಿಗಮವನ್ನು ಆರ್ಥಿಕವಾಗಿ ಸದೃಢಗೊಳಿಸಲು ನಿಗಮದ ಅನುಪಯುಕ್ತ ಆಸ್ತಿಗಳ ನಗದೀಕರಣ. ■ ಪ್ರತಿ ಜಿಲ್ಲೆಯಲ್ಲಿ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ಸ್ಥಾಪನೆಗಾಗಿ ಆರ್‌ಬಿಐಗೆ ಪ್ರಸ್ತಾವನೆ.

ಜಲಸಂಪನ್ಮೂಲ



■ ಕೇಂದ್ರ ಪರಿಸರ ಸಚಿವಾಲಯದಿಂದ ಅರಣ್ಯ ತೀರುವಳಿ ಪಡೆದು ಮೇಕೆದಾಟು ಯೋಜನೆ ಅನುಷ್ಠಾನ. ■ ಹೆಚ್ಚುವರಿ ನೀರು ಸಂಗ್ರಹಣೆಗಾಗಿ ಎತ್ತಿನಹೊಳೆ ಯೋಜನೆಯಡಿ ಕೊರಟಗೆರೆ ತಾಲ್ಲೂಕಿನ ವಡೇರಹಳ್ಳಿ ಸಮೀಪ 1.2 ಟಿ.ಎಂ.ಸಿ. ಸಾಮರ್ಥ್ಯದ ಸಮತೋಲನ ಜಲಾಶಯ ನಿರ್ಮಾಣ. ಯೋಜನೆಯ ಎರಡನೆಯ ಹಂತವನ್ನು ಶೀಘ್ರವಾಗಿ ಪೂರ್ಣಗೊಳಿಸುವುದು. ■ ಭದ್ರಾ ಮೇಲ್ದಂಡೆ ಯೋಜನೆಯ ಚಿತ್ರದುರ್ಗ ಶಾಖಾ ಕಾಲುವೆ ಹಾಗೂ ಫೀಡರ್ ಕಾಮಗಾರಿಗಳನ್ನು ಪೂರ್ಣಗೊಳಿಸಿ 157 ಕೆರೆಗಳನ್ನು ತುಂಬಿಸಲು ಕ್ರಮ. ■ ಯುಕೆಪಿ-III ರಡಿ ಮುಳುಗಡೆಯಾಗುವ ಖುಷ್ಕಿ ಜಮೀನಿಗೆ ಎಕರೆಗೆ 30 ಲಕ್ಷ, ತರಿ ಜಮೀನಿಗೆ ಎಕರೆಗೆ 40 ಲಕ್ಷ ನಿಗದಿ; ಒಪ್ಪಂದದಡಿ ಭೂಸ್ವಾಧೀನ ಪ್ರಕ್ರಿಯೆಗೆ ಚಾಲ್ತಿ. ■ ತುಂಗಭದ್ರಾ ಅಣೆಕಟ್ಟಿನ ಶಿಥಿಲಗೊಂಡಿರುವ ಗೇಟುಗಳನ್ನು ಬದಲಾಯಿಸಿ 33 ಹೊಸ ಗೇಟುಗಳ ಅಳವಡಿಕೆಯನ್ನು ಮುಂಗಾರು ಪೂರ್ವದಲ್ಲಿ ಪೂರ್ಣಗೊಳಿಸಲಾಗುವುದು. ■ ನವಲಿ ಬಳಿ ಸಮತೋಲನ ಜಲಾಶಯ ನಿರ್ಮಾಣ ಸೇರಿದಂತೆ ಇತರೆ ಪರ್ಯಾಯ ಮಾರ್ಗೋಪಾಯಗಳ ಸಮಾಲೋಚನೆ. ■ ಕಳಸಾ-ಬಂಡೂರಾ ನಾಲಾ ಯೋಜನೆಗಳಿಗೆ ಕೇಂದ್ರ ಸರ್ಕಾರದ ಅರಣ್ಯ ತೀರುವಳಿ ದೊರೆತ ಕೂಡಲೇ ಕಾಮಗಾರಿಗಳ ಪ್ರಾರಂಭ. ■ ವಿಜಯಪುರದ ಬಾಬಾನಗರದಲ್ಲಿ ಸಂಗ್ರಹಣಾ ಜಲಾಶಯವನ್ನು ತುಬಚಿ-ಬಬಲೇಶ್ವರ ಏತ ನೀರಾವರಿ ಯೋಜನೆಯಡಿ ನಿರ್ಮಿಸಲು ತಾತ್ವಿಕ ಅನುಮೋದನೆ. ■ ಚಾಮರಾಜನಗರದ ಹನೂರು ತಾಲೂಕಿನಲ್ಲಿ 12,000 ಎಕರೆ ಅಚ್ಚುಕಟ್ಟು ಪ್ರದೇಶಕ್ಕೆ ನೀರಾವರಿ ಒದಗಿಸುವ ಉಡುತೊರೆಹಳ್ಳ ಯೋಜನೆಗೆ 490 ಕೋಟಿ ರೂ. ■ ಹತ್ತಿಕುಣಿ ಹಾಗೂ ತುಂಗಭದ್ರಾ ಎಡದಂಡೆ ಶಾಖಾ ಕಾಲುವೆ ಯೋಜನೆಯಡಿ Pressurised Piped Network ನೀರಾವರಿ ಪದ್ಧತಿ ಅಳವಡಿಕೆ.

ಸಣ್ಣ ನೀರಾವರಿ

■ 237 ಕೋಟಿ ರೂ. ಮೊತ್ತದಲ್ಲಿ ಹೆಬ್ಬಾಳ ನಾಗವಾರ ಕಣಿವೆಯ 3ನೇ ಹಂತದ ಯೋಜನೆಯ ಅನುಷ್ಠಾನ. ■ 140 ಕೋಟಿ ರೂ. ಮೊತ್ತದಲ್ಲಿ ಹೊಸಕೋಟೆ ತಾಲೂಕಿನಲ್ಲಿ ಕೆರೆ ತುಂಬಿಸುವ ಯೋಜನೆ ಅನುಷ್ಠಾನ.

ಜಿಎಸ್‌ಟಿ ಸಂಗ್ರಹದಲ್ಲಿ ಕರ್ನಾಟಕ ದೇಶದಲ್ಲೇ ನಂ.2!

ಬೆಂಗಳೂರು: ಜಿಎಸ್‌ಟಿ ಸಂಗ್ರಹದಲ್ಲಿ ಕರ್ನಾಟಕ ದೇಶದಲ್ಲಿ ಎರಡನೇ ಸ್ಥಾನದಲ್ಲಿದ್ದರೂ, ಜಿಎಸ್‌ಟಿ ದರಗಳ ತಾರ್ಕಿಕೀಕರಣದಿಂದ ರಾಜ್ಯದ ಪಾಲಿಗೆ ಧಕ್ಕೆಯಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ಹಿಂದಿನ ವರ್ಷ ಕರ್ನಾಟಕದಲ್ಲಿ 1.32 ಲಕ್ಷ ಕೋಟಿ ಜಿಎಸ್‌ಟಿ ಸಂಗ್ರಹವಾಗಿತ್ತು ಆದರೆ ಜಿಎಸ್‌ಟಿ ದರಗಳ ತಾರ್ಕಿಕೀಕರಣದಿಂದ ಕೇಂದ್ರದಿಂದ ರಾಜ್ಯಕ್ಕೆ ದೊರೆಯುವ ಪಾಲು ಕಡಿಮೆಯಾಯಿತು. 16ನೇ ಹಣಕಾಸು ಆಯೋಗವು ಕೇಂದ್ರದಿಂದ ರಾಜ್ಯಗಳಿಗೆ ನೀಡುವ ನಿಧಿಗಳ ಪಾಲನ್ನು ಹೆಚ್ಚಿಸಲು ಶಿಫಾರಸು ಮಾಡಿರುವುದರಿಂದ ಕೆಲವು ಮಟ್ಟಿಗೆ ಪರಿಹಾರ ದೊರಕಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.

ಆದರೆ ನಮಗೆ ನೀಡುತ್ತಿರುವ ಅನುದಾನ ಕಡಿಮೆ



2026-27ನೇ ಸಾಲಿನ ರಾಜ್ಯ ಬಜೆಟ್ ಮಂಡಿಸಿದ ಅವರು, ಭಾರತದಲ್ಲಿ ಸರಕು ಮತ್ತು ಸೇವಾ ತೆರಿಗೆ(ಜಿಎಸ್‌ಟಿ) ಸಂಗ್ರಹದಲ್ಲಿ ಕರ್ನಾಟಕ ರಾಜ್ಯವು ಮಹಾರಾಷ್ಟ್ರ ನಂತರ ಎರಡನೇ ಸ್ಥಾನದಲ್ಲಿದೆ. ಸರ್ಕಾರದ ನೌಕರರ ಪರಿಣಾಮಕಾರಿ ಕಾರ್ಯನಿರ್ವಹಣೆ, ಬಲವಾದ ಆರ್ಥಿಕ ವೃದ್ಧಿ ಹಾಗೂ ಕಲ್ಯಾಣ ಗ್ಯಾರಂಟಿ ಯೋಜನೆಗಳಿಂದ ಬಳಕೆ ಹೆಚ್ಚಾದ ಪರಿಣಾಮ ಈ ಸಾಧನೆ ಸಾಧ್ಯವಾಗಿದೆ ಎಂದರು. 2024-25 ಹಣಕಾಸು ವರ್ಷದಲ್ಲಿ ರಾಜ್ಯದಲ್ಲಿ ಸುಮಾರು 1.6 ಲಕ್ಷ ಕೋಟಿ ಜಿಎಸ್‌ಟಿ ಸಂಗ್ರಹವಾಗಿದ್ದು, ಇದು ಸುಮಾರು ಶೇ.15ರಷ್ಟು ಬೆಳವಣಿಗೆ ದಾಖಲಿಸಿದೆ. 2020-21ರಲ್ಲಿ ರಾಜ್ಯದ ತೆರಿಗೆ ಆದಾಯ ಕುಸಿತ ಕಂಡಿತ್ತು. ಆದರೆ 2021-22ರಿಂದ ಅದು ವೇಗವಾಗಿ ಏರಿಕೆ ಕಾಣತೊಡಗಿತು. 2022-23ರಲ್ಲಿ ತೆರಿಗೆ ಸಂಗ್ರಹಣದಲ್ಲಿ ದೊಡ್ಡ ಜಿಗಿತ ಕಂಡುಬಂದಿತು.

2023-24ರಲ್ಲಿ ಬೆಳವಣಿಗೆ ಬಹುತೇಕ ಸ್ಥಗಿತಗೊಂಡಂತಾಗಿದ್ದರೂ, 2024-25 ಮತ್ತು 2025-26ರಲ್ಲಿ ಮತ್ತೆ ವೇಗ ಪಡೆದಿದೆ. 2025-26ರಲ್ಲಿ ತೆರಿಗೆ ಆದಾಯವು 2 ಲಕ್ಷ ಕೋಟಿ ರೂ.ಗೂ ಅಧಿಕವಾಗುವ ನಿರೀಕ್ಷೆ ವ್ಯಕ್ತವಾಗಿದೆ.

ಕೇಂದ್ರ ಸರ್ಕಾರವು ಜಿಎಸ್‌ಟಿ ತರ್ಕಬದ್ಧಗೊಳಿಸಿದ್ದರಿಂದ ಮತ್ತು ತೆರಿಗೆ ವ್ಯವಸ್ಥೆಯಲ್ಲಿ ಬದಲಾವಣೆ ಮಾಡಿದ್ದರಿಂದ ರಾಜ್ಯಕ್ಕೆ ರಾಜಸ್ವ ಸಂಗ್ರಹಣೆ ಕಡಿಮೆ ಆಗಿದೆ. ಆದಾಗ್ಯೂ, ರಾಜ್ಯ ಸರ್ಕಾರ 3 ವರ್ಷಗಳಿಂದ ವಿತ್ತೀಯ ಶಿಸ್ತು ಕಾಯ್ದುಕೊಂಡು ಜವಾಬ್ದಾರಿತನ ಮೆರೆದಿದೆ ಎಂದು ಸಿಎಂ ಸಿದ್ದರಾಮಯ್ಯ ಹೇಳಿದ್ದಾರೆ. ದಾಖಲೆಯ 4.48 ಲಕ್ಷ ಕೋಟಿ ರೂ ಮೊತ್ತದ ಮುಂಗಡಪತ್ರವನ್ನು ವಿಧಾನಸಭೆಯಲ್ಲಿ ಇಂದು ಮಂಡಿಸಿದ ಸಿದ್ದರಾಮಯ್ಯ, ಜಿಎಸ್‌ಟಿ ಹಂಚಿಕೆಯಲ್ಲಿ ರಾಜ್ಯಗಳಿಗೆ ಆಗಿರುವ ಅನ್ಯಾಯವನ್ನು ವಿವರಿಸಿದ್ದಾರೆ.


ಗೃಹಲಕ್ಷ್ಮಿಯರಿಗೆ 28 ಸಾವಿರ ಕೋಟಿ ಮೀಸಲು



ಬೆಂಗಳೂರು: ಈ ಬಜೆಟ್‌ನಲ್ಲಿ ರಾಜ್ಯದ ಮಹಿಳೆಯರಿಗೆ ಸಿಹಿ ಸುದ್ದಿ ನೀಡಿದ್ದು, ರಾಜ್ಯ ಸರ್ಕಾರದ ಪ್ರಮುಖ ಗ್ಯಾರಂಟಿ ಯೋಜನೆಗಳಲ್ಲಿ ಒಂದಾದ 'ಗೃಹಲಕ್ಷ್ಮಿ' ಯೋಜನೆಗೆ 28 ಸಾವಿರ ಕೋಟಿ ರೂ ಹಂಚಿಕೆ ಮಾಡಿದ್ದಾರೆ. ರಾಜ್ಯದ ಅಭಿವೃದ್ಧಿ ಹಾಗೂ ಜನಕಲ್ಯಾಣ ಯೋಜನೆಗಳಿಗೆ ಹೆಚ್ಚಿನ ಒತ್ತು ನೀಡಲಾಗುತ್ತಿದ್ದು, ಈ ಬಜೆಟ್‌ನಲ್ಲಿ ವಿಶೇಷವಾಗಿ ಕಾಂಗ್ರೆಸ್ ಸರ್ಕಾರದ ಪ್ರಮುಖ ಗ್ಯಾರಂಟಿ ಯೋಜನೆಗಳಲ್ಲೊಂದಾದ ಗೃಹಲಕ್ಷ್ಮಿ ಯೋಜನೆಗೆ 28,608 ಕೋಟಿ ಮೀಸಲಿರಿಸಲಾಗಿದೆ. ಈ ಯೋಜನೆಯ ಮೂಲಕ ರಾಜ್ಯದ ಲಕ್ಷಾಂತರ ಮಹಿಳೆಯರ ಆರ್ಥಿಕ ಸಬಲೀಕರಣಕ್ಕೆ ಸರ್ಕಾರ ಬದ್ಧವಾಗಿದೆ ಎಂದು ಹೇಳಿದ್ದಾರೆ.

ಕಾಂಗ್ರೆಸ್ ಸರ್ಕಾರದ ಮಹತ್ವಾಕಾಂಕ್ಷೆಯ ಗೃಹಲಕ್ಷ್ಮಿ ಯೋಜನೆಗೆ ಸಿಎಂ ಸಿದ್ದರಾಮಯ್ಯ ತಮ್ಮ ಬಜೆಟ್‌ನಲ್ಲಿ ಹೆಚ್ಚಿನ ಅನುದಾನ ಘೋಷಿಸಿದ್ದು, ಯೋಜನೆ ಅಡಿ ಮನೆ ಯಜಮಾನಿಗೆ ಪ್ರತಿ ತಿಂಗಳು 2 ಸಾವಿರ ರೂ. ನೀಡಲಾಗುತ್ತಿದೆ. ಗ್ಯಾರಂಟಿ ಯೋಜನೆಗಳಿಂದ ಜನಸಾಮಾನ್ಯರಿಗೆ ನೆರವಾಗುವುದರ ಜತೆಗೆ ಅಭಿವೃದ್ಧಿ ಯೋಜನೆಗಳನ್ನೂ ಮುಂದುವರಿಸಲಾಗುವುದು. ಅಂತೆಯೇ ಗ್ಯಾರಂಟಿ ಯೋಜನೆಗಳು ಜನರ ಆರ್ಥಿಕ ಸ್ಥಿತಿಯನ್ನು ಸುಧಾರಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತಿವೆ. ಜೊತೆಗೆ ಮೂಲಸೌಕರ್ಯ ಅಭಿವೃದ್ಧಿಗೂ ಸರ್ಕಾರ ಹೆಚ್ಚಿನ ಆದ್ಯತೆ ನೀಡಿದೆ ಎಂದು ಹೇಳಿದ್ದಾರೆ.

ಅಧಿಕ ಬಾರಿ ಬಜೆಟ್ ಮಂಡಿಸಿದ ರಾಜ್ಯದ ಮೊದಲ, ದೇಶದ ದ್ವಿತೀಯ ಹೆಗ್ಗಳಿಕೆ ಸಿದ್ದರಾಮಯ್ಯರದ್ದು!



ಬೆಂಗಳೂರು: ದೇಶದ ವಿವಿಧ ರಾಜ್ಯಗಳಲ್ಲಿ ಹಣಕಾಸು ಸಚಿವರಾಗಿ ಹಾಗೂ ಮುಖ್ಯಮಂತ್ರಿಗಳಾಗಿ ಅತಿ ಹೆಚ್ಚು ಬಾರಿ ಬಜೆಟ್ ಮಂಡಿಸಿದ ಹಾಲಿ ಮತ್ತು ಮಾಜಿ ನಾಯಕರ ಪಟ್ಟಿಯನ್ನು ಗಮನಿಸಿದರೆ, ಅದರಲ್ಲಿ ಕರ್ನಾಟಕದ ನಾಯಕರ ಸಾಧನೆ ಎದ್ದು ಕಾಣುತ್ತದೆ. ರಾಷ್ಟ್ರಮಟ್ಟದಲ್ಲಿ ಅತಿ ಹೆಚ್ಚು ಬಜೆಟ್ ಮಂಡಿಸಿದವರ ಪೈಕಿ ಗುಜರಾತ್‌ನ ಮಾಜಿ ಹಣಕಾಸು ಸಚಿವ (ಕರ್ನಾಟಕದ ಮಾಜಿ ರಾಜ್ಯಪಾಲ) ವಜುಭಾಯಿ ವಾಲಾ ಅವರು 18 ಬಾರಿ ಬಜೆಟ್ ಮಂಡಿಸಿ ಮೊದಲ ಸ್ಥಾನದಲ್ಲಿದ್ದಾರೆ.

ಕರ್ನಾಟಕದ ಹಾಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಒಟ್ಟು 17 ಬಾರಿ ಬಜೆಟ್ ಮಂಡಿಸುವ ಮೂಲಕ ದೇಶದಲ್ಲೇ ಎರಡನೇ ಅತಿ ಹೆಚ್ಚು ಬಜೆಟ್ ಮಂಡಿಸಿದ ನಾಯಕ ಎಂಬ ಹೆಗ್ಗಳಿಕೆಗೆ ಪಾತ್ರರಾಗಿದ್ದಾರೆ. ಕರ್ನಾಟಕದ ಮಟ್ಟಿಗೆ ಸಿದ್ದರಾಮಯ್ಯನವರದ್ದೇ ಅತಿ ದೊಡ್ಡ ದಾಖಲೆಯಾಗಿದೆ.

ಇದಕ್ಕೂ ಮೊದಲು, ಸಿದ್ದರಾಮಯ್ಯ ಅವರು ಉಪಮುಖ್ಯಮಂತ್ರಿಯಾಗಿ ಏಳು ಬಾರಿ ಬಜೆಟ್ ಮಂಡಿಸಿದ್ದಾರೆ. ಅವರು ಮೂರು ಮುಖ್ಯಮಂತ್ರಿಗಳ ಅಡಿಯಲ್ಲಿ, 1995 ಮತ್ತು 1996ರಲ್ಲಿ ಹೆಚ್.ಡಿ.ದೇವೇಗೌಡರ ನೇತೃತ್ವದಲ್ಲಿ ಎರಡು ಬಾರಿ, 1997, 1998 ಮತ್ತು 1999ರಲ್ಲಿ ಜೆ.ಎಚ್.ಪಟೇಲ್ ನೇತೃತ್ವದಲ್ಲಿ ಮೂರು ಬಾರಿ ಮತ್ತು 2005 ಮತ್ತು 2006ರಲ್ಲಿ ಎನ್.ಧರಂ ಸಿಂಗ್ ಅವರ ನೇತೃತ್ವದಲ್ಲಿ ಎರಡು ಬಾರಿ ಬಜೆಟ್ ಮಂಡಿಸಿದ್ದಾರೆ.

ಇನ್ನು ಅವಿಭಜಿತ ಆಂಧ್ರಪ್ರದೇಶದ ಮಾಜಿ ಮುಖ್ಯಮಂತ್ರಿ ಕೆ.ರೋಸಯ್ಯ ತಮ್ಮ ಸುದೀರ್ಘ ರಾಜಕೀಯ ಜೀವನದಲ್ಲಿ ರಾಜ್ಯದ ಖಜಾನೆಯನ್ನು ನಿರ್ವಹಿಸುವಲ್ಲಿ ಪರಿಣತಿಗೆ ಹೆಸರುವಾಸಿಯಾಗಿದ್ದರು. ಅವರು ಸತತವಾಗಿ ಏಳು ಬಾರಿ ಸೇರಿದಂತೆ ಒಟ್ಟು 16 ಬಜೆಟ್ ಮಂಡಿಸಿದ್ದಾರೆ. ಅಸ್ಸಾಂನ ಮಾಜಿ ಮುಖ್ಯಮಂತ್ರಿ ತರುಣ್ ಗೊಗೊಯ್ ತಮ್ಮ ಮೂರು ಅವಧಿಯಲ್ಲಿ ಸತತ 15 ಬಜೆಟ್‌ಗಳನ್ನು ಮಂಡಿಸಿದರು. ತಮಿಳುನಾಡಿಗೆ ದಾಖಲೆಯ ಸಚಿವರಾಗಿದ್ದ ವಿ.ಆರ್ ನೆಡುಂಚೆಳಿಯನ್, ಎಂ.ಜಿ.ರಾಮ ಚಂದ್ರನ್ ಮತ್ತು ಜೆ.ಜಯಲಲಿತಾ ನೇತೃತ್ವದ ಸಚಿವ ಸಂಪುಟಗಳಲ್ಲಿ 12 ವರ್ಷಗಳ ಕಾಲ ಹಣಕಾಸು ಸಚಿವರಾಗಿ ಸೇವೆ ಸಲ್ಲಿಸಿ, 14 ಬಜೆಟ್ ಮಂಡಿಸಿದ್ದಾರೆ. ಕರ್ನಾಟಕದ ಮಾಜಿ ಮುಖ್ಯಮಂತ್ರಿ ಮತ್ತು ಹಣಕಾಸು ಸಚಿವರಾಗಿದ್ದ ರಾಮಕೃಷ್ಣ ಹೆಗ್ಡೆ ಹಾಗೂ ಕೇರಳದ ಅನುಭವಿ ರಾಜಕಾರಣಿ ಕೆ.ಎಂ.ಮಣಿ ತಲಾ 13 ಬಾರಿ ಬಜೆಟ್ ಮಂಡಿಸಿದ್ದಾರೆ.

ಶಿಕ್ಷಣ, ಮಹಿಳಾ-ಮಕ್ಕಳ ಇಲಾಖೆಗೆ ಬಂಪರ್ ಅನುದಾನ!



ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ 2026-2027ನೇ ಸಾಲಿನ ರಾಜ್ಯ ಬಜೆಟ್‌ನಲ್ಲಿ ಶಿಕ್ಷಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಇಂಧನ ಇಲಾಖೆಗೆ ಬಂಪರ್ ಅನುದಾನವನ್ನು ಘೋಷಣೆ ಮಾಡಿದ್ದಾರೆ.

■ **ಶಿಕ್ಷಣ:** 47,224 ಕೋಟಿ ■ **ಮಹಿಳಾ ಮತ್ತು ಮಕ್ಕಳ ಕಲ್ಯಾಣ:** 34,929 ಕೋಟಿ ■ **ಇಂಧನ:** 29,947 ಕೋಟಿ ■ **ಗ್ರಾಮೀಣಾಭಿವೃದ್ಧಿ-ಪಂಚಾಯತ್‌ರಾಜ್:** 26,559 ಕೋಟಿ ರೂ. ■ **ಲೋಕೋಪಯೋಗಿ ಮತ್ತು ಸಾರಿಗೆ:** 23,100 ಕೋಟಿ ■ **ನೀರಾವರಿ:** 22,436 ಕೋಟಿ ರೂ. ■ **ನಗರಾಭಿವೃದ್ಧಿ ಮತ್ತು ವಸತಿ:** 22,203 ಕೋಟಿ ರೂ. ■ **ಕಂದಾಯ:** 19,843 ಕೋಟಿ ■ **ಸಮಾಜ ಕಲ್ಯಾಣ:** 18,612 ಕೋಟಿ ರೂ. ■ **ಆರೋಗ್ಯ ಮತ್ತು ಕುಟುಂಬ ಕಲ್ಯಾಣ:** 17,817 ಕೋಟಿ ರೂ. ■ **ಒಳಾಡಳಿತ (ಗೃಹ):** 11,424 ಕೋಟಿ ರೂ. ■ **ಕೃಷಿ ಮತ್ತು ತೋಟಗಾರಿಕೆ:** 8,373 ಕೋಟಿ ರೂ. ■ **ಆಹಾರ ಮತ್ತು ನಾಗರಿಕ ಸರಬರಾಜು:** 7,942 ಕೋಟಿ ■ **ಪಶುಸಂಗೋಪನೆ ಮತ್ತು ಮೀನುಗಾರಿಕೆ:** 4,084 ಕೋಟಿ ■ **ಇತರೆ ವಲಯಗಳು:** 1,72,757 ಕೋಟಿ ರೂ.

ಸಾಮಾಜಿಕ ಜಾಲತಾಣ ಬಳಕೆ ಅಪ್ರಾಪ್ತರಿಗೆ ನಿಷಿದ್ಧ!



ಬೆಂಗಳೂರು: ಹೆಚ್ಚುತ್ತಿರುವ ಮೊಬೈಲ್ ಬಳಕೆ ಮಕ್ಕಳ ಮೇಲೆ ಕೆಟ್ಟ ಪರಿಣಾಮ ಬೀರುತ್ತಿರುವ ಹಿನ್ನೆಲೆಯಲ್ಲಿ ರಾಜ್ಯ ಸರ್ಕಾರ 16ಕ್ಕಿಂತ ಒಳಪಟ್ಟ ವಯಸ್ಸಿನ ಮಕ್ಕಳಿಗೆ ಸಾಮಾಜಿಕ ಜಾಲತಾಣ ಬಳಕೆಯನ್ನು ನಿಷೇಧ ಮಾಡಿದೆ.

ವಿಧಾನಸಭೆಯಲ್ಲಿ ಪ್ರಸಕ್ತ ಸಾಲಿನ ರಾಜ್ಯ ಬಜೆಟ್ ಮಂಡನೆ ಮಾಡಿದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, 16 ವಯಸ್ಸಿನ ಮಕ್ಕಳಿಗೆ ಸಾಮಾಜಿಕ ಜಾಲತಾಣದ ಬಳಕೆಯನ್ನು ನಿಷೇಧ ಮಾಡಿರುವುದಾಗಿ ಘೋಷಣೆ ಮಾಡಿದ್ದಾರೆ.

ಪ್ರಸಕ್ತ ಸಾಲಿನ ಬಜೆಟ್‌ನಲ್ಲಿ ಹೆಚ್ಚುತ್ತಿರುವ ಮೊಬೈಲ್ ಬಳಕೆಯಿಂದ ಮಕ್ಕಳ ಮೇಲೆ ಬೀರುವ ಅಡ್ಡ ಪರಿಣಾಮದ ಬಗ್ಗೆ ಪ್ರಸ್ತಾಪ ಮಾಡಲಾಗಿದ್ದು, ಇದನ್ನು ತಡೆಗಟ್ಟುವ ಉದ್ದೇಶದಿಂದ 16 ವರ್ಷದೊಳಗಿನ ಮಕ್ಕಳಿಗೆ ಸಾಮಾಜಿಕ ಜಾಲತಾಣಗಳ ಬಳಕೆ ನಿಷೇಧಿಸಲಾಗುವುದು ಎಂದು ಉಲ್ಲೇಖ ಮಾಡಲಾಗಿದೆ. ಇದು ಮಕ್ಕಳ ಆರೋಗ್ಯ, ವಿದ್ಯಾಭ್ಯಾಸ ಹಾಗೂ ಏಳಿಗೆಯ ದೃಷ್ಟಿಯಿಂದ ಒಳ್ಳೆಯ ತೀರ್ಮಾನವಾಗಿದ್ದು, ಕೇಂದ್ರ ಸರ್ಕಾರದ ಆರ್ಥಿಕ ಸಮೀಕ್ಷಾ ವರದಿಯಲ್ಲೂ ಮಕ್ಕಳಿಗೆ ಮೊಬೈಲ್ ಬಳಕೆ ನಿಷೇಧಿಸುವ ಬಗ್ಗೆ ಪ್ರಸ್ತಾಪ ಮಾಡಲಾಗಿತ್ತು.

ರೋಹಿತ್ ವೇಮುಲ ಕಾಯಿದೆ ಜಾರಿ: ಕಾಲೇಜುಗಳಲ್ಲಿ ಚುನಾವಣೆಗೆ ಅಸ್ತು!



ಬೆಂಗಳೂರು, ಮಾ.6(ಕೆಎಂಶಿ)-ಉನ್ನತ ಶಿಕ್ಷಣ ವಲಯದಲ್ಲಿ ಸಾಮಾಜಿಕ ನ್ಯಾಯ ಕಲ್ಪಿಸಲು, ರಾಜ್ಯದ ಎಲ್ಲ ಸರ್ಕಾರಿ, ಖಾಸಗಿ ಮತ್ತು ಡೀಮ್ಡ್ ವಿಶ್ವವಿದ್ಯಾಲಯಗಳಲ್ಲಿ ಜಾತಿ ಆಧಾರಿತ ದೌರ್ಜನ್ಯ ತಡೆಯಲು ರೋಹಿತ್ ವೇಮುಲ ಕಾಯಿದೆ ಜಾರಿಗೆ ತರಲಾಗುತ್ತದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಿಸಿದ್ದಾರೆ.

ವಿದ್ಯಾರ್ಥಿಗಳಲ್ಲಿ ನಾಯಕತ್ವ ಗುಣ ಬೆಳೆಸಲು ಕಾಲೇಜು ಮತ್ತು ವಿವಿಗಳಲ್ಲಿ ವಿದ್ಯಾರ್ಥಿ ಸಂಘಗಳ ಚುನಾವಣೆ ನಡೆಸಲು ಉದ್ದೇಶಿಸಲಾಗಿದೆ ಎಂದರು.

ಎಡಿಬಿ ಶಿಕ್ಷಣ ಯೋಜನೆ: ಏಷ್ಯಾ ಅಭಿವೃದ್ಧಿ ಬ್ಯಾಂಕ್ ನೆರವಿನೊಂದಿಗೆ 2,500 ಕೋಟಿ ರೂ. ವೆಚ್ಚದಲ್ಲಿ 'ಕರ್ನಾಟಕ ಉನ್ನತ ಶಿಕ್ಷಣ ಪರಿವರ್ತನೆ ಯೋಜನೆ' ಜಾರಿಗೊಳಿಸಿ, 40 ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳು ಮತ್ತು 11 ಪಾಲಿಟೆಕ್ನಿಕ್‌ಗಳನ್ನು ಮಾದರಿ ಸಂಸ್ಥೆಗಳನ್ನಾಗಿ ರೂಪಿಸಲಾಗುತ್ತಿದೆ. ಸರ್ಕಾರಿ ಪ್ರಥಮ ದರ್ಜೆ ಮತ್ತು ಇಂಜಿನಿಯರಿಂಗ್ ಕಾಲೇಜುಗಳಲ್ಲಿ 2,000 ಹಾಗೂ ಸಾರ್ವಜನಿಕ ವಿವಿಗಳಲ್ಲಿ 1,000 ಬೋಧಕ ಹುದ್ದೆಗಳನ್ನು ಭರ್ತಿ ಮಾಡಲಾಗುವುದು.

ಮಹಿಳಾ ವಿದ್ಯಾರ್ಥಿಗಳಿಗೆ ಮೂಲಸೌಕರ್ಯ ಒದಗಿಸಲು 25 ಸರ್ಕಾರಿ ಪದವಿ ಕಾಲೇಜುಗಳು ಸೇರಿ ಒಟ್ಟು 31 ಸಂಸ್ಥೆಗಳಿಗೆ 31 ಕೋಟಿ ರೂ. ನೀಡಲಾಗುವುದು. ಸ್ಟೆಮ್ ವಿಭಾಗದ 3,000 ಮಹಿಳಾ ಪದವೀಧರರಿಗೆ 13.50 ಕೋಟಿ ರೂ. ವೆಚ್ಚದಲ್ಲಿ ಕೌಶಲ್ಯ ತರಬೇತಿ ಮತ್ತು ಮಹಿಳಾ ಅತಿಥಿ ಉಪನ್ಯಾಸಕಿಯರಿಗೆ 90 ದಿನಗಳ ಮಾತೃತ್ವ ರಜೆ ಸೌಲಭ್ಯ ಕಲ್ಪಿಸಲಾಗಿದೆ.

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಅಭಿವೃದ್ಧಿಗೆ ಈ ವರ್ಷವೂ 100 ಕೋಟಿ ಒದಗಿಸಲಾಗುವುದು. ಧಾರವಾಡ ಮತ್ತು ಬೆಂಗಳೂರಿನಲ್ಲಿ ತಲಾ 10 ಕೋಟಿ ವೆಚ್ಚದಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳ ಅಧ್ಯಯನ ಕೇಂದ್ರ ಸ್ಥಾಪನೆ, ಬಸವಕಲ್ಯಾಣದಲ್ಲಿ ಖಾಸಗಿ ವಚನ ವಿವಿ ಸ್ಥಾಪನೆಗೆ 25 ಎಕರೆ ಜಮೀನು ಮಂಜೂರು ಮಾಡಲಾಗಿದೆ.

ಉತ್ತಮ ಕಲಿಕೆ ಉಜ್ವಲ ಭವಿಷ್ಯ: ವಿದ್ಯಾರ್ಥಿಗಳಿಗೆ ಒಂದೇ ಸೂರಿನಡಿ ಗುಣಮಟ್ಟದ ಶಿಕ್ಷಣ ಒದಗಿಸಲು 'ಉತ್ತಮ ಕಲಿಕೆ ಉಜ್ವಲ ಭವಿಷ್ಯ' ಎಂಬ ಘೋಷವಾಕ್ಯದಡಿ ಒಟ್ಟು 800 ಶಾಲೆಗಳನ್ನು ಕರ್ನಾಟಕ ಪಬ್ಲಿಕ್ ಶಾಲೆಗಳನ್ನಾಗಿ ಉನ್ನತೀಕರಿಸಲು ತೀರ್ಮಾನಿಸಿದ್ದು, ಇದಕ್ಕಾಗಿ ಮುಂದಿನ ಮೂರು ವರ್ಷಗಳಲ್ಲಿ 3,900 ಕೋಟಿ ರೂ. ವೆಚ್ಚ ಮಾಡಲಾಗುವುದು. 184 ಹಿರಿಯ ಪ್ರಾಥಮಿಕ ಶಾಲೆಗಳನ್ನು ಪ್ರೌಢಶಾಲೆಗಳನ್ನಾಗಿ ಹಾಗೂ 50 ಪ್ರೌಢಶಾಲೆಗಳನ್ನು ಪದವಿ ಪೂರ್ವ ಕಾಲೇಜುಗಳನ್ನಾಗಿ ಮೇಲ್ದರ್ಜೆಗೇರಿಸಲಾಗಿದೆ ಎಂದರು.

ಶಾಲೆಗಳ ಕೊಠಡಿ ನಿರ್ಮಾಣ ಹಾಗೂ ದುರಸ್ತಿಗೆ 565 ಕೋಟಿ ರೂ, ಶೌಚಾಲಯ ನಿರ್ಮಾಣಕ್ಕೆ 75 ಕೋಟಿ ಮತ್ತು ನಿರ್ವಹಣೆಗಾಗಿ 125 ಕೋಟಿ ರೂ. ಅನುದಾನವನ್ನು ಎಸ್‌ಡಿಎಂಸಿಗಳಿಗೆ ನೇರವಾಗಿ ಬಿಡುಗಡೆ ಮಾಡಲಾಗುವುದು. ವಿದ್ಯಾವಿಕಾಸ ಯೋಜನೆಯಡಿ ಪೂರ್ವ ಪ್ರಾಥಮಿಕ ಮಕ್ಕಳಿಗೆ ಚಟುವಟಿಕೆ ಪುಸ್ತಕಗಳು, 1 ರಿಂದ 10ನೇ ತರಗತಿಯವರೆಗೆ ಮೌಲ್ಯ ಶಿಕ್ಷಣ ಪುಸ್ತಕಗಳು ಹಾಗೂ ಪಿಯುಸಿ ವಿದ್ಯಾರ್ಥಿಗಳಿಗೆ ಉಚಿತ ಪಠ್ಯಪುಸ್ತಕಗಳನ್ನು ನೀಡಲಾಗುವುದು. ಐಐಟಿ ಧಾರವಾಡದ ಸಹಯೋಗದಲ್ಲಿ 8 ರಿಂದ 12ನೇ ತರಗತಿಯ 12.28 ಲಕ್ಷ ವಿದ್ಯಾರ್ಥಿಗಳಿಗೆ 5 ಕೋಟಿ ರೂ. ವೆಚ್ಚದಲ್ಲಿ ಕೃತಕ ಬುದ್ಧಿಮತ್ತೆ ಆಧಾರಿತ 'ವೈಯಕ್ತಿಕ ಸ್ವಯಂ-ಕಲಿಕಾ ಡಿಜಿಟಲ್ ಟ್ಯೂಟರ್' ಸೌಲಭ್ಯ ಕಲ್ಪಿಸಲಾಗುವುದು.

ವಿದ್ಯಾರ್ಥಿಗಳಲ್ಲಿ ಮಾನಸಿಕ ಒತ್ತಡ ನಿವಾರಿಸಲು 204 ಬಿಆರ್‌ಸಿ ಕೇಂದ್ರಗಳಲ್ಲಿ ಮಾನಸಿಕ ಆರೋಗ್ಯ ಸಲಹೆಗಾರರ ನೇಮಕ ಹಾಗೂ 16 ವರ್ಷದೊಳಗಿನ ಮಕ್ಕಳಿಗೆ ಸಾಮಾಜಿಕ ಜಾಲತಾಣ ನಿಷೇಧಿಸುವ ಮಹತ್ವದ ನಿರ್ಧಾರ ಕೈಗೊಳ್ಳಲಾಗಿದೆ, ಇದಲ್ಲದೆ, ವಿದ್ಯಾರ್ಥಿಗಳಿಗೆ ನೀಡುವ ಸವಲತ್ತುಗಳನ್ನು ನೇರ ನಗದು ವರ್ಗಾವಣೆ ಮೂಲಕ ವಿತರಿಸಲು ಕ್ರಮವಹಿಸಲಾಗಿದೆ ಎಂದರು.

ಕೃಷಿ ಸುಧಾರಣೆಗೆ ಮುಖ್ಯಮಂತ್ರಿ ಕೃಷಿ ವಿಸ್ತಾರ ಯೋಜನೆ

ಬೆಂಗಳೂರು: ಧರೆಯ ಕೃಷಿ ಶುದ್ಧವಾಗಿಯಲ್ಲದೆ, ಸಸಿ ಶುದ್ಧವಿಲ್ಲ ಎಂಬ ವಚನಕಾರ ಶಿವಲೆಂಕ ಮಂಚಣ್ಣ ಅವರ ಸಾಲುಗಳೊಂದಿಗೆ ಕೃಷಿ ಬಜೆಟ್ ಮಂಡಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, ರೈತ ಸಮೃದ್ಧನಾದರೆ ಕರ್ನಾಟಕ ಸಮೃದ್ಧವಾಗುತ್ತದೆ ಎಂಬ ಆಶಯದೊಂದಿಗೆ ಕೃಷಿ ಕ್ಷೇತ್ರಕ್ಕೆ ಹಲವು ಮಹತ್ವದ ಯೋಜನೆಗಳನ್ನು 2026-27ನೇ ಸಾಲಿನ ಬಜೆಟ್‌ನಲ್ಲಿ ಘೋಷಿಸಿದ್ದಾರೆ.

ಬೀಜದಿಂದ ಮಾರುಕಟ್ಟೆಯವರೆಗೆ ರೈತರಿಗೆ ಸಮಗ್ರ ಬೆಂಬಲ ನೀಡುವ ಉದ್ದೇಶದಿಂದ ಬಜೆಟ್‌ನಲ್ಲಿ ತಂತ್ರಜ್ಞಾನ, ಮಾರುಕಟ್ಟೆ ವಿಸ್ತರಣೆ ಹಾಗೂ ಸಾವಯವ ಕೃಷಿಗೆ ಹೆಚ್ಚಿನ ಒತ್ತು ನೀಡಿದ್ದು, ಹಲವು ಪ್ರಮುಖ ಘೋಷಣೆಗಳನ್ನು ಮಾಡಿದ್ದಾರೆ.

■ **ಮುಖ್ಯಮಂತ್ರಿ ಕೃಷಿ ವಿಸ್ತಾರ ಯೋಜನೆ:** ಉತ್ಪಾದನೋತ್ತರ ಕೃಷಿ ಚಟುವಟಿಕೆಗಳಾದ ಸಂಸ್ಕರಣೆ, ಮೌಲ್ಯವರ್ಧನೆ ಮತ್ತು ಮಾರುಕಟ್ಟೆ ಸಂಪರ್ಕ ಕಲ್ಪಿಸಿ ರೈತರಿಗೆ ಹೆಚ್ಚುವರಿ ಆದಾಯ ತಂದುಕೊಡಲು ಮುಂದಿನ ಮೂರು ವರ್ಷಗಳಲ್ಲಿ 100 ಕೋಟಿ ರೂ. ವೆಚ್ಚದಲ್ಲಿ 'ಮುಖ್ಯಮಂತ್ರಿ ಕೃಷಿ ವಿಸ್ತಾರ ಯೋಜನೆ' ಜಾರಿಗೆ ತರಲಾಗುವುದು. ಕೃಷಿಕರಿಗೆ ಕೀಟಗಳ ವಿರುದ್ಧ ಹೋರಾಡಲು ಸಹಾಯ ಮಾಡುವ ಉದ್ದೇಶದಿಂದ ಮುಂದಿನ ಮೂರು ವರ್ಷಗಳ ಕಾಲ 'ಸಸ್ಯ ಸಂಜೀವಿನಿ' ಯೋಜನೆಯನ್ನು ಪ್ರಾರಂಭಿಸಲಾಗುತ್ತದೆ. ಜೊತೆಗೆ, ಪಶುವೈದ್ಯಕೀಯ ಕಾಲೇಜುಗಳಲ್ಲಿ ಸಿಟಿ ಸ್ಕ್ಯಾನಿಂಗ್ ಯಂತ್ರಗಳನ್ನು ಸ್ಥಾಪಿಸಲು ಸರ್ಕಾರ ನಿರ್ಧರಿಸಿದ್ದು, ಅವುಗಳನ್ನು ಬೆಳಗಾವಿ ಮತ್ತು ಬೆಂಗಳೂರಿನ ಪಶುವೈದ್ಯಕೀಯ ಕಾಲೇಜುಗಳಲ್ಲಿ ಅಳವಡಿಸಲಾಗುತ್ತದೆ ಎಂದು ಮುಖ್ಯಮಂತ್ರಿ ತಿಳಿಸಿದ್ದಾರೆ.



■ **ಎಐ ಆಧಾರಿತ 'ರೈತ ಕರೆ ಕೇಂದ್ರ':** ರೈತರಿಗೆ ಹವಾಮಾನ, ಮಾರುಕಟ್ಟೆ ದರ, ಕೃಷಿ ತಾಂತ್ರಿಕತೆ ಮತ್ತು ಇಲಾಖಾ ಮಾಹಿತಿಯನ್ನು ಒಂದೇ ಸೂರಿನಡಿ ತ್ವರಿತವಾಗಿ ಒದಗಿಸಲು ಕೃಷಿ ಇಲಾಖೆಯ 'ರೈತ ಕರೆ ಕೇಂದ್ರ'ವನ್ನು ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನದೊಂದಿಗೆ ಉನ್ನತೀಕರಿಸಲಾಗುವುದು.

■ **ಮಣ್ಣಿನ ಆರೋಗ್ಯಕ್ಕೆ 'ವಸುಧಾಮೃತ':** ಮಣ್ಣಿನಲ್ಲಿ ಸಾವಯವ ಇಂಗಾಲ ಮತ್ತು ಭೌತಿಕ, ರಾಸಾಯನಿಕ ಗುಣಮಟ್ಟ ಹೆಚ್ಚಿಸಲು ಹಾಗೂ ಪರಿಸರ ಸ್ನೇಹಿ ಸುಸ್ಥಿರ ಕೃಷಿ ಪದ್ಧತಿ ಉತ್ತೇಜಿಸಲು ಮುಂದಿನ 3 ವರ್ಷಗಳಲ್ಲಿ 'ವಸುಧಾಮೃತ' ಹೊಸ ಕಾರ್ಯಕ್ರಮ ಜಾರಿಗೊಳಿಸಲಾಗುವುದು.

■ **ಕೋಲಾರದಲ್ಲಿ ಎಂಎಸ್‌ಐಎಲ್ ರೈತ ಮಾಲ್:** ರೈತರಿಗೆ ಗುಣಮಟ್ಟದ ಬೀಜ, ರಸಗೊಬ್ಬರ, ಕೀಟನಾಶಕ ಮತ್ತು ಕೃಷಿ ಯಂತ್ರೋಪಕರಣಗಳು ಒಂದೇ ಸೂರಿನಡಿ ಕೈಗೆಟಕುವ ದರದಲ್ಲಿ ಸಿಗುವಂತೆ ಮಾಡಲು, ಪ್ರಾಯೋಗಿಕವಾಗಿ ಕೋಲಾರ ಜಿಲ್ಲೆಯ ಪ್ರತಿಯೊಂದು ತಾಲೂಕಿನಲ್ಲಿ ಎಂಎಸ್‌ಐಎಲ್ ವತಿಯಿಂದ 'ರೈತ ಮಾಲ್'ಗಳನ್ನು ಸ್ಥಾಪಿಸಲಾಗುವುದು.

ಪಾಂಡವಪುರ ಸಂಪೂರ್ಣ ಸಾವಯವ ತಾಲೂಕು

ಮಂಡ್ಯ ಜಿಲ್ಲೆಯ ಪಾಂಡವಪುರ ತಾಲೂಕನ್ನು 'ಸಂಪೂರ್ಣ ಸಾವಯವ ತಾಲೂಕನ್ನಾಗಿ' ಪರಿವರ್ತಿಸಲು ಅಧಿಕೃತ ಸಾವಯವ ಪ್ರಮಾಣೀಕರಣ ವ್ಯವಸ್ಥೆಯನ್ನು ಜಾರಿಗೆ ತರಲಾಗುವುದು.

■ **ಖೋಟಾ ಬೀಜ, ಕೀಟನಾಶಕ ಜಾಲಕ್ಕೆ ಬ್ರೇಕ್:** ರೈತರಿಗೆ ಕಳಪೆ ಹಾಗೂ ದೋಷಪೂರಿತ ಬೀಜ, ಕೀಟನಾಶಕ ಪೂರೈಕೆ ಮಾಡುವುದು ಹಾಗೂ ಮಾರುಕಟ್ಟೆ ದರಕ್ಕಿಂತ ಹೆಚ್ಚಿನ ಬೆಲೆಗೆ ಮಾರಾಟ ಮಾಡುವುದನ್ನು ತಡೆಗಟ್ಟಲು ಸರ್ಕಾರ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಿದೆ. ಈ ಬಗ್ಗೆ ಅಧ್ಯಯನ ನಡೆಸಿ ಶಿಫಾರಸು ಮಾಡಲು 'ರಾಜ್ಯ ಮಟ್ಟದ ಸಲಹಾ ಸಮಿತಿ' ರಚನೆ.

■ **ಮಿಲೆಟ್ (ಸಿರಿಧಾನ್ಯ) ಹಬ್ ಸ್ಥಾಪನೆ:** ಸಿರಿಧಾನ್ಯ ಮತ್ತು ಸಾವಯವ ಉತ್ಪನ್ನಗಳನ್ನು ಉತ್ತೇಜಿಸಲು ನಿರ್ಮಿಸಲಾಗುತ್ತಿರುವ 'ಮಿಲೆಟ್ ಹಬ್' ಅನ್ನು ಸ್ವಾವಲಂಬಿ ಸಂಸ್ಥೆಯನ್ನಾಗಿ ಮಾಡಲಾಗುವುದು. ಇದು ರೈತರು ಮತ್ತು ನವ ಉದ್ಯಮಿಗಳಿಗೆ ತಾಂತ್ರಿಕ ಸಹಾಯ, ಸಂಸ್ಕರಣಾ ಸೌಲಭ್ಯ ಮತ್ತು ಗುಣಮಟ್ಟದ ಪ್ರಮಾಣೀಕರಣ ಒದಗಿಸಲಿದೆ.

■ **ಅಥಣಿಯಲ್ಲಿ ಕೃಷಿ ಕಾಲೇಜು:** ತಜ್ಞರ ವರದಿಯ ಶಿಫಾರಸಿನಂತೆ ಬೆಳಗಾವಿ ಜಿಲ್ಲೆಯ ಅಥಣಿಯಲ್ಲಿ ಹೊಸ ಕೃಷಿ ಕಾಲೇಜು ಸ್ಥಾಪಿಸಲು ಅಗತ್ಯವಿರುವ ಪ್ರಥಮ ಹಂತದ ಮೂಲಸೌಕರ್ಯ ಒದಗಿಸಲಾಗುವುದು.

■ **ಇನ್ನಿತರ ಘೋಷಣೆಗಳು:** ಕೃಷಿ ಚಟುವಟಿಕೆಯಲ್ಲಿ ಶ್ರಮ ಮತ್ತು ಸಮಯ ಉಳಿಸಲು 'ಹೈಟೆಕ್ ಹಾರ್ವೆಸ್ಟರ್ ಹಬ್' ಯೋಜನೆಯಡಿ ಅತ್ಯಾಧುನಿಕ ನಾಟಿ ಮತ್ತು ಕೊಯ್ಲು ಯಂತ್ರಗಳ ಸೇರ್ಪಡೆ. ಚಿತ್ರದುರ್ಗ ಜಿಲ್ಲೆಯ ಬಬ್ಬೂರಿನ ಕೃಷಿ ತರಬೇತಿ ಕೇಂದ್ರವನ್ನು 'ರಾಜ್ಯಮಟ್ಟದ ಕೃಷಿ ಉದ್ದಿಮೆ ತರಬೇತಿ ಕೇಂದ್ರವನ್ನಾಗಿ ಉನ್ನತೀಕರಣ. ಹವಾಮಾನ ಬದಲಾವಣೆ ತಡೆಗಟ್ಟಲು ಭತ್ತದ ಕೃಷಿಯಲ್ಲಿ ನೀರಿನ ದಕ್ಷತೆ ಹೆಚ್ಚಿಸುವ ಪರ್ಯಾಯ ತೇವ-ಒಣಗಿಸುವ ವಿಧಾನಕ್ಕೆ ಉತ್ತೇಜನ. ನೂತನ ದ್ವಿದಳ ಧಾನ್ಯ(ಬೇಳೆಕಾಳು) ತಳಿಗಳ ಬಿತ್ತನೆ ಬೀಜ ಬಳಕೆಗೆ ರೈತರಿಗೆ ನೀಡುತ್ತಿರುವ ಸಹಾಯಧನ ಹೆಚ್ಚಳ. ಕೃಷಿ ಇಲಾಖೆಯ ಎಲ್ಲಾ ಪ್ರಯೋಗಾಲಯಗಳಿಗೆ ಎನ್‌ಎಬಿಎಲ್ ಮಾನ್ಯತೆ ಪಡೆದು ನಿಖರ ಪರೀಕ್ಷಾ ವರದಿ ನೀಡಲು ಕ್ರಮ ಕೈಗೊಳ್ಳುವುದು.

ಮೈಸೂರು ಮಿತ್ರ ಶನಿವಾರ 7 ಮಾರ್ಚ್ 2026

ಬಜೆಟ್‌ನಲ್ಲಿ ಕೊಡಗು ಜಿಲ್ಲೆಗೆ ಭರಪೂರ ಕೊಡುಗೆ



ಮಡಿಕೇರಿ,ಮಾ.6–ಮುಖ್ಯಮಂತ್ರಿ ಸಿದ್ದರಾಮಯ್ಯ ಮಂಡಿಸಿದ ಬಜೆಟ್‌ನಲ್ಲಿ ಕೊಡಗು ಜಿಲ್ಲೆಗೆ ಬಜೆಟ್‌ನಲ್ಲಿ ಭರಪೂರ ಕೊಡುಗೆಗಳು ಧಕ್ಕಿವೆ. ಮಾನವ–ವನ್ಯ ಪ್ರಾಣಿ ಸಂಘರ್ಷವನ್ನು ಕಡಿಮೆ ಮಾಡುವ ಉದ್ದೇಶದಿಂದ ಕರ್ನಾಟಕ ಮಾನವ–ವನ್ಯಪ್ರಾಣಿ ಸಂಘರ್ಷ ನಿವಾರಣಾ ಕಾರ್ಯತಂತ್ರ ಯೋಜನೆ ಅನುಷ್ಠಾನಗೊಳಿಸಲು ಮುಂದಿನ 5 ವರ್ಷದಲ್ಲಿ 1,500 ಕೋಟಿ ರೂ.ಗಳ ವೆಚ್ಚದಲ್ಲಿ ವಿವಿಧ ಕಾಮ ಗಾರಿಗಳನ್ನು ಕೈಗೊಳ್ಳಲಾಗುವುದು. ಇದ ಕ್ಕಾಗಿ ಪ್ರಸಕ್ತ ಸಾಲಿನಲ್ಲಿ 269 ಕೋಟಿ ರೂ.ಗಳನ್ನು ಮೀಸಲಿರಿಸಲಾಗಿದೆ ಎಂದು ಮುಖ್ಯಮಂತ್ರಿಗಳು ಘೋಷಿಸಿದ್ದಾರೆ. ಇದರಿಂದ ಕೊಡಗಿನಲ್ಲಿ ಕಂಡು ಬರುತ್ತಿರುವ ಕಾಡಾನೆ ಹಾವಳಿಗೆ ಅಲ್ಪ ಮಟ್ಟಿನ ತೆರೆ ಬೀಳುವ ಸಾಧ್ಯತೆಗಳಿವೆ. ಸೋಲಾರ್ ಬೇಲಿ, ಆನೆ ಕಂದಕಗಳ, ರೈಲ್ವೆ ಬ್ಯಾರಿಕೇಡ್ ಅಳವಡಿಕೆಯಂತಹ ಹಲವು ವರ್ಷಗಳ ಬೇಡಿಕೆ ಈ ಘೋಷಣೆ ಮೂಲಕ ಈಡೇರುವ ನಿರೀಕ್ಷೆ ಮೂಡಿಸಿದೆ.

ಹಾರಂಗಿ ಜಲಾಶಯದ ಕೆಳಭಾಗದಲ್ಲಿ ಸೇತುವೆ ನಿರ್ಮಾಣ ಕಾಮಗಾರಿ, ಮಡಿಕೇರಿ–ಕುಶಾಲನಗರ ಪ್ರದೇಶದಲ್ಲಿ ಚೆಕ್ ಡ್ಯಾಂ ಮತ್ತು ನಾಲೆ ನಿರ್ಮಾಣ ಕಾಮಗಾರಿ, ಪೊನ್ನಂಪೇಟೆ ಭಾಗದಲ್ಲಿ ಚೆಕ್ ಡ್ಯಾಂ ಹಾಗೂ ನಾಲೆ ನಿರ್ಮಾಣ, ಸೋಮವಾರಪೇಟೆ ತಾಲೂಕಿನ ಐಗೂರು–ಅರೆಯೂರಿನಲ್ಲಿ ನಾಲೆ ಹಾಗೂ ತಡೆಗೋಡೆ ಅಭಿವೃದ್ಧಿ, ವಿರಾಜಪೇಟೆ ತಾಲೂಕು ಭಾಗದಲ್ಲಿ ತೋಡಿಗೆ ತಡೆಗೋಡೆ ನಿರ್ಮಾಣ, ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದ ಜನರು ಹೆಚ್ಚಿನ ಸಂಖ್ಯೆಯಲ್ಲಿ ವಾಸಿಸುತ್ತಿರುವ ಕಾಲೋನಿಗಳಲ್ಲಿ ಅಗತ್ಯ ಮೂಲಭೂತ ಸೌಕರ್ಯ ಅಭಿವೃದ್ಧಿಗೆ 1,332 ಕೋಟಿ ರೂ.ಗಳನ್ನು ವೆಚ್ಚ ಮಾಡಲಾಗಿದೆ. ಇದರಿಂದ ಆ ಕಾಲೋನಿಗಳಲ್ಲಿ ಮೂಲ ಸೌಕರ್ಯ ಅಭಿವೃದ್ಧಿಯಾಗುವ ಸಾಧ್ಯತೆ ಇದೆ.

ಅರಣ್ಯ ಹಾಗೂ ಅರಣ್ಯದಂಚಿನಲ್ಲಿ ವಾಸಿ ಸುತ್ತಿರುವ ಸಮುದಾಯಗಳ ವಸತಿ ರಹಿತ 11 ಕುಟುಂಬಗಳಿಗೆ 4.50 ಲಕ್ಷ ರೂ.ಗಳ ವೆಚ್ಚದಲ್ಲಿ ಒಟ್ಟು 282 ಕೋಟಿ ರೂ.ಗಳಲ್ಲಿ ಮನೆ ನಿರ್ಮಾಣ ಮಾಡಲಾಗುತ್ತಿದೆ ಇದರಿಂದ ಅರಣ್ಯ ವಾಸಿಗಳಿಗೂ ಸೂರು ಸಿಗುವ ನಿರೀಕ್ಷೆ ಮೂಡಿದೆ. 'ಕರ್ನಾಟಕ ಆದಿವಾಸಿ ಅಭಿವೃದ್ಧಿ ನಿಗಮ' ಸ್ಥಾಪಿಸುವ ಘೋಷಣೆ ಮಾಡಲಾಗಿದ್ದು ಜಿಲ್ಲೆಯ ಜೇನುಕುರುಬ ಸಮುದಾಯಕ್ಕೆ ಅನುಕೂಲವಾಗಲಿದೆ.

ಕೊಡವ ನಿಗಮಗಳ ಮೂಲಕ ವಿವಿಧ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸಲಾಗುವುದು ಎಂದು ಮುಖ್ಯಮಂತ್ರಿಗಳು ಘೋಷಣೆ ಮಾಡಿದ್ದು, ನಿಗಮದ ಚಟುವಟಿಕೆ ಮತ್ತಷ್ಟು ಚುರುಕಾಗುವ ಲಕ್ಷಣಗಳು ಕಂಡು ಬರುತ್ತಿದೆ. ಸೋಮವಾರಪೇಟೆ ತಾಲೂಕಿನಲ್ಲಿ ಶ್ರಮಿಕ ವಸತಿ ಶಾಲೆಗೆ ಬಜೆಟ್‌ನಲ್ಲಿ ಅನುಮೋ ದನೆ ನೀಡಲಾಗಿದೆ.

ಮಕ್ಕಳ ಕ್ರೀಡಾ ಪ್ರತಿಭೆಯನ್ನು ಪ್ರೋತ್ಸಾಹಿಸಲು ಸುಸಜ್ಜಿತ ಕ್ರೀಡಾ ತರಬೇತಿ ವಸತಿನಿಲಯವನ್ನು ವಿರಾಜಪೇಟೆಯಲ್ಲಿ ನಿರ್ಮಿಸಲು ಕ್ರಮಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿಗಳು ಘೋಷಿಸಿರುವುದು ಕ್ರೀಡಾ ಪ್ರತಿಭೆಗಳಿಗೆ ಅನುಕೂಲವಾಗಲಿದೆ ಎಂದು ಅಂದಾಜಿಸಲಾಗಿದೆ.

ನಿರ್ದಿಷ್ಟ ಗುರಿ ಇದ್ದರೆ ಒತ್ತಡ ಇರಲ್ಲ

ವಿದ್ಯಾರ್ಥಿಗಳಿಗೆ ಪೂಜಾ ಸಜೇಶ್ ಸಲಹೆ



ರೆ.ಫಾ.ಜೇಮ್ಸ್ ಡೊಮಿನಿಕ್ ಶಿಬಿರದ ಪ್ರತಿಜ್ಞಾ ವಿಧಿ ಬೋಧಿಸಿದರು.

ವಿರಾಜಪೇಟೆ, ಮಾ.6–ಕೊಡಗು ವಿಶ್ವ ವಿದ್ಯಾನಿಲಯ, ರಾಷ್ಟ್ರೀಯ ಸೇವಾ ಯೋಜನೆ ಘಟಕ ಸೈಂಟ್ ಆ್ಯನ್ಸ್ ಪದವಿ ಕಾಲೇಜು ವಿರಾಜಪೇಟೆ ಸಂಯುಕ್ತಾಶ್ರಯದಲ್ಲಿ ಕಲ್ತೋಡು ನಾಂಗಾಲದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಆವರಣದಲ್ಲಿ ವಾರ್ಷಿಕ ವಿಶೇಷ ಶಿಬಿರ ಏರ್ಪಡಿಸಲಾಗಿತ್ತು.

ಲಿಟಲ್ ಸ್ಕಾಲರ್ ಅಕಾಡೆಮಿ ಮುಖ್ಯಸ್ಥೆ ಪೂಜಾ ಸಜೇಶ್ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಕಲಿಕೆಯೊಂದಿಗೆ ಸಮಾಜದ ಆಗು–ಹೋಗುಗಳಿಗೆ ಪ್ರತಿಸ್ಪಂದಿಸುವ ಗುಣಗಳನ್ನು ವಿದ್ಯಾರ್ಥಿ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ವಿದ್ಯಾರ್ಥಿ ಜೀವನ ಒತ್ತಡದಲ್ಲಿದೆ ಎಂದು ಹೇಳುವುದು ಸುಳ್ಳು. ಒತ್ತಡಗಳನ್ನು ನಾವು ಸೃಷ್ಟಿ ಮಾಡಿಕೊಳ್ಳುವುದು. ನಿರ್ದಿಷ್ಟವಾದ ಗುರಿ ಹೊಂದಿದಲ್ಲಿ ಒತ್ತಡದಿಂದ ಹೊರ ಬರಲು ಸಾಧ್ಯ. ಸಾಮಾಜಿಕ ಕಳಕಳಿಯೊಂದಿಗೆ ಭಾವನಾತ್ಮಕ ಸಂಬಂಧಗಳನ್ನು ಹೊಂದುವುದು ಮುಖ್ಯ. ಶಿಬಿರದ ಮೂಲಕ ಉತ್ತಮ ಸಮಾಜದ ನಿರ್ಮಾಣದ ಗುರಿ ನಿಮ್ಮದಾಗಲಿ ಎಂದರು.

ಶಿಬಿರದ ಧ್ವಜಾರೋಹಣ ಮಾಡಿದ ಬಿಟ್ಟಂಗಾಲ ಗ್ರಾಪಂ ಅಧ್ಯಕ್ಷ ಮೂಕಚಂಡ ಪ್ರಸನ್ನ ಸುಬ್ಬಯ್ಯ, ಸಂತ ಅನ್ನಮ್ಮ ದೇವಾಲಯದ ಪ್ರಧಾನ ಧರ್ಮಗುರು ವಿದ್ಯಾಸಂಸ್ಥೆಗಳ ವ್ಯವಸ್ಥಾಪಕರಾದ ರೆ.ಫಾ. ಜೇಮ್ಸ್ ಡೊಮಿ ನಿಕ್, ಶಿಬಿರದ ಪ್ರತಿಜ್ಞಾ ವಿಧಿ ಬೋಧಿಸಿದ ಸಂತ ಅನ್ನಮ್ಮ ಪದವಿ ಕಾಲೇಜಿನ ವ್ಯವಸ್ಥಾಪಕ ರೆಫಾ ಮದಲೈಮುತ್ತು ಮಾತನಾಡಿದರು. ರಾಷ್ಟ್ರೀಯ ಸೇವಾ ಯೋಜನೆ ಶಿಬಿರಾಧಿಕಾರಿ ಬಿ.ಎನ್. ಶಾಂತಿಭೂಷಣ್ ಅವರು ಶಿಬಿರದ ಪ್ರಾಸ್ತಾವಿಕ ನುಡಿಗಳನ್ನಾಡಿದರು.

ಕಲ್ತೋಡು ನಾಂಗಾಲ ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷರಾದ ಆಶಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು, ನಾಂಗಾಲ ದಾನಿಗಳಾದ ಕುಪ್ಪಂಡ ಗೋಪಾಲ್ ಬೋಪಯ್ಯ, ಸಂತ ಅನ್ನಮ್ಮ ಪದವಿ ಕಾಲೇಜಿನ ಪ್ರಾಂಶುಪಾಲೆ ತೃಪ್ತಿ ಬೋಪಣ್ಣ ಮಾತನಾಡಿದರು. ಸ.ಹಿ.ಪ್ರಾ. ಶಾಲೆಯ ಮುಖ್ಯೋಪಾಧ್ಯಾಯರಾದ ಫ್ಯಾನ್ಸಿ ಲೋಬೋ, ಶಿಬಿರಾಧಿಕಾರಿ ಬಿ.ಎನ್.ಶಾಂತಿಭೂಷಣ್ ಇದ್ದರು.

ಆಕಸ್ಮಿಕ ಗುಂಡೇಟು ತಗುಲಿ ಯುವಕ ಸಾವು



ಮಡಿಕೇರಿ, ಮಾ.6–ಗುಂಡೇಟು ತಗುಲಿ ಯುವಕನೋರ್ವ ಸಾವನ್ನಪ್ಪಿದ ಘಟನೆ ಕೊಡ್ಲಿಪೇಟೆಯಲ್ಲಿ ನಡೆದಿದೆ. ಇಲ್ಲಿನ ನಿವಾಸಿ ಸಂಜೀವ್(30) ಎಂಬಾತನೇ ಸಾವನ್ನಪ್ಪಿದ ದುರ್ದೈವಿ ಯಾಗಿದ್ದಾನೆ. ಸಂಜೆ ವೇಳೆ ತೋಟದಲ್ಲಿ ಕರಿಮೆಣಸು ಕುಯ್ಯಲು ತೆರಳಿದ್ದಾಗ ಗುಂಡೇಟು ತಗುಲಿದ್ದು, ಗಾಯಾಳುವನ್ನು ತಕ್ಷಣವೇ ಹಾಸನದ ಖಾಸಗಿ ಆಸ್ಪತ್ರೆಗೆ ಕರೆದೊಯ್ಯುತ್ತಿರುವಾಗ ಮಾರ್ಗ ಮಧ್ಯದಲ್ಲಿ ಸಾವನ್ನಪ್ಪಿದ್ದಾನೆ.

ಸಾವಿನ ಕುರಿತು ಸಾರ್ವಜನಿಕ ವಲಯದಲ್ಲಿ ಶಂಕೆ ವ್ಯಕ್ತವಾಗಿದ್ದು, ಪೊಲೀಸರು, ವಿಧಿ ವಿಜ್ಞಾನ ತಜ್ಞರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಶನಿವಾರಸಂತೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಪ್ರಕರಣಕ್ಕೆ ಸಂಬಂಧಿಸಿದಂತೆ ಮೂವರು ಶಂಕಿತರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸುತ್ತಿದ್ದಾರೆ ಎಂದು ವಿಶ್ವಸನೀಯ ಮೂಲಗಳು ತಿಳಿಸಿವೆ. ಗುಂಡೇಟು ಘಟನೆ ಆಕಸ್ಮಿಕವೋ ಅಥವಾ ಉದ್ದೇಶ ಪೂರ್ವಕವೋ ಎಂಬುದು ವಿಚಾರಣೆಯಿಂದ ಬೆಳಕಿಗೆ ಬರಬೇಕಿದೆ.

ಸುಸ್ಥಿರ ಹಿಂದೂ ಸಮಾಜ ನಿರ್ಮಾಣಕ್ಕೆ

ಕುಂಭಕರ್ಣನ ನಿದ್ರೆಯಿಂದ ಎಚ್ಚರಗೊಳ್ಳಿ



ಮಡಿಕೇರಿ, ಮಾ.6–ಸುಸ್ಥಿರ ಹಿಂದೂ ಸಮಾಜದ ನಿರ್ಮಾಣಕ್ಕೆ ಹಿಂದುಗಳು ಕುಂಭಕರ್ಣನ ನಿದ್ರೆಯಿಂದ ಎಚ್ಚರಗೊಳ್ಳಬೇಕು ಎಂದು ಬೌದಿಕ್ ಟಿ.ಸಿ.ಚಂದ್ರನ್ ಸಲಹೆ ನೀಡಿ ದರು.

ತಿತಿಮತಿ ಮಂಡಲ ಹಿಂದೂ ಸಂಗಮ ಸಮಿತಿ ವತಿಯಿಂದ ರಾಮಮಂದಿರ ಮುಂಭಾಗ ನಡೆದ ಹಿಂದೂ ಸಂಗಮ ಕಾರ್ಯಕ್ರಮದಲ್ಲಿ ಮುಖ್ಯ ಭಾಷಣಕಾರರಾಗಿ ಮಾತನಾಡಿ, ಜಾಗತಿಕ ಮಟ್ಟದಲ್ಲಿ ಮಾರ್ಗದರ್ಶನ ಮಾಡುವಂತಹ ಪ್ರಾಮುಖ್ಯತೆಯನ್ನು ಹಿಂದೂ ಧರ್ಮ ಹೊಂದಿದೆ ಎಂದರು. ಸೌಹಾರ್ದತೆಯ ನೆಲೆಯಲ್ಲಿ ಹಿಂದೂ ರಾಷ್ಟ್ರವನ್ನು ಕಟ್ಟಿ ಬೆಳೆಸಬೇಕಾದರೆ, ಪ್ರತಿಯೊಬ್ಬ ಹಿಂದೂ ತನ್ನ ಆದ್ಯ ಕರ್ತವ್ಯವನ್ನು ಮರೆಯಬೇಕಾಗಿದೆ ಎಂದು ಹೇಳಿದರು.

ಈ ದೇಶ ಪರಿವರ್ತನೆಗೊಳ್ಳಬೇಕಾದರೆ ಮನೆ ಮನದಲ್ಲಿ ಹಿಂದುತ್ವದ ಪ್ರತಿಪಾದನೆಯಾಗಬೇಕು. ದೇಶ ಬೆಳೆದಂತೆ ಹಿಂದೂ ಧರ್ಮವೂ ಕೂಡ ಬೆಳೆದು ನಿಲ್ಲಬೇಕು. ಈ ನಿಟ್ಟಿನಲ್ಲಿ ಹಿಂದುಗಳಾದ ನಾವು ಜಾಗೃತಿಯಿಂದ ಜೀವನ ನಡೆಸಬೇಕು ಎಂದು ಹೇಳಿದರು. ಸಭೆಯಲ್ಲಿ ಹಿಂದೂ ಸಂಗಮ ಸಮಿತಿ ಅಧ್ಯಕ್ಷ ಚೆಪ್ಪುಡಿರ ರಾಮಕೃಷ್ಣ, ನಿವೃತ್ತ ಶಿಕ್ಷಕಿ ಪೋರಂಗಡ ರಾಣಿ ಉಪಸ್ಥಿತರಿದ್ದರು.

ಸಿದ್ದಾಪುರದಲ್ಲಿ ಪೊಲೀಸ್ ಪಥಸಂಚಲನ



ಸಾರ್ವಜನಿಕ ಶಾಂತಿ ಮತ್ತು ಸುವ್ಯವಸ್ಥೆಗೆ ಭದ್ರತೆ ಒದಗಿಸುವ ನಿಟ್ಟಿನಲ್ಲಿ ಸಿದ್ದಾಪುರದಲ್ಲಿ ಪಥಸಂಚಲನ ನಡೆಸಲಾಯಿತು. ಸಂತ ಅನ್ನಮ್ಮ ಶಾಲೆ ಬಳಿಯಿಂದ ಆರಂಭವಾಗಿ ಪಟ್ಟಣದ ಪ್ರಮುಖ ರಸ್ತೆಗಳಲ್ಲಿ ಸಂಚರಿಸಿ ನಾಗರಿಕರಲ್ಲಿ ಧೈರ್ಯ, ಆತ್ಮವಿಶ್ವಾಸ ತುಂಬುವಲ್ಲಿ ಪ್ರಮುಖ ಪಾತ್ರ ವಹಿಸಿತು. ಜಿಲ್ಲಾ ಸಶಸ್ತ್ರ ಮೀಸಲು ಪಡೆ ಹಾಗೂ ಸ್ಥಳೀಯ ಪೊಲೀಸ್ ಪಡೆ ಪೆರೇಡ್ ನಡೆಸಿದರು. ಠಾಣಾಧಿಕಾರಿ ಮಂಜುನಾಥ್ ನೇತೃತ್ವದಲ್ಲಿ ಡಿವೈಎಸ್‌ಪಿ ಸೂರಜ್, ಸಿಪಿಐ ರಾಜು, ಹಾಗೂ ಜಿಲ್ಲಾ ಸಶಸ್ತ್ರದಳದ ಇನ್ಸ್‌ಪೆಕ್ಟರ್ ಪ್ರದೀಪ್ ಹಾಜರಿದ್ದರು.

ಗ್ರಾಮೀಣಾಭಿವೃದ್ಧಿಗೆ ಒತ್ತು ನೀಡದ ಪ್ಯಾಚ್ ಅಪ್ ವರ್ಕ್ ಬಜೆಟ್



ಮಂಡ್ಯ: ರೈತರ ನಿರೀಕ್ಷೆಗಳನ್ನ ಈ ಬಜೆಟ್ ಹುಸಿಗೊಳಿಸಿದ್ದು, ಬೆಲೆ ಏರಿಕೆ, ನಿರುದ್ಯೋಗ, ಕೃಷಿ ಸಂಕಷ್ಟ, ಗ್ರಾಮೀಣ ಅಭಿವೃದ್ಧಿಗೆ ಒತ್ತು ನೀಡದ ಪ್ಯಾಚ್ ಅಪ್ ವರ್ಕ್ ಬಜೆಟ್ ಆಗಿದೆ ಎಂದು ಇದು ಕರ್ನಾಟಕ ಪ್ರಾಂತ ರೈತ ಸಂಘದ ಜಿಲ್ಲಾ ಸಂಚಾಲಕ ಎನ್.ಎಲ್.ಭರತ್‌ರಾಜ್ ತಿಳಿಸಿದ್ದಾರೆ.

ರಾಜ್ಯದ ರೈತರು ಬೆಳೆ ನಷ್ಟ, ಸಾಲದ ಒತ್ತಡ, ನೀರಾವರಿ ಸಮಸ್ಯೆ ಹಾಗೂ ಬೆಳೆಗಳಿಗೆ ಸಮರ್ಪಕ ಬೆಲೆ ಸಿಗದ ಕಾರಣ ಸಂಕಷ್ಟದಲ್ಲಿದ್ದಾರೆ. ಇಂತಹ ಸಂದರ್ಭದಲ್ಲಿ ರೈತರಿಗೆ ನೇರ ಪ್ರಯೋಜನವಾಗುವ ಹೊಸ ಯೋಜನೆಗಳು, ಸಾಲ ಪರಿಹಾರ ಕ್ರಮಗಳು ಮತ್ತು ಕೃಷಿಗೆ ಹೆಚ್ಚಿನ ಅನುದಾನ ಘೋಷಿಸಬೇಕಾಗಿತ್ತು. ಆದರೆ ಈ ಬಜೆಟ್‌ನಲ್ಲಿ ರೈತರಿಗೆ ಸ್ಪಷ್ಟವಾದ ನೆರವು ಕಾಣಿಸುತ್ತಿಲ್ಲ ಎಂದು ತಿಳಿಸಿದ್ದಾರೆ.

ಕೃಷಿ ಕ್ಷೇತ್ರಕ್ಕೆ ಆದ್ಯತೆ



ಇದೊಂದು ಉತ್ತಮ ಆಯ್ಯವ್ಯಯ. ಎಲ್ಲ ವರ್ಗದವರಿಗೂ ಸಾಮಾಜಿಕ ನ್ಯಾಯ ಕಲ್ಪಿಸಲಾಗಿದೆ. ಬಜೆಟ್‌ನಲ್ಲಿ ಕೃಷಿ ಕ್ಷೇತ್ರಕ್ಕೆ ಆದ್ಯತೆ ನೀಡಲಾಗಿದೆ. ಕೃಷಿ ಮತ್ತು ತೋಟಗಾರಿಕಾ ಕ್ಷೇತ್ರಕ್ಕೆ ಹೆಚ್ಚಿನ ಅನುದಾನ ಕೊಡಲಾಗಿದೆ. ಇದಲ್ಲದೆ ನೀರಾವರಿ ಕ್ಷೇತ್ರ ಹಾಗೂ ನಾಲೆಗಳ ಆಧುನೀಕರಣಕ್ಕೆ ಪ್ರಾಮುಖ್ಯತೆ ನೀಡಿರುವುದು ಉತ್ತಮ ವಿಷಯ. ಇದರಿಂದ ಜಿಲ್ಲೆಯ ರೈತರಿಗೆ ದೊಡ್ಡಮಟ್ಟದ ಅನುಕೂಲವಾಗಲಿದೆ. ಇದಲ್ಲದೆ ಪಾಂಡವಪುರ ತಾಲೂಕನ್ನು ಸಾವಯವ ತಾಲೂಕಾಗಿ ಮಾಡಲು ಮುಂದಾಗಿರುವುದು ಒಳ್ಳೆಯ ಬೆಳವಣಿಗೆ. ಅದೇ ರೀತಿ ಕೈಗಾರಿಕೆ ಸ್ಥಾಪನೆಗೆ 100 ಎಕರೆ ಜಮೀನನ್ನು ಬಜೆಟ್‌ನಲ್ಲಿಯೇ ಘೋಷಣೆ ಮಾಡಲಾಗಿದೆ. ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರು ಇನ್ನಾದರೂ ಕೈಗಾರಿಕೆ ಪ್ರಾರಂಭಿಸಲು ಮುಂದಾಗಲಿ.

–ಸಿ.ತ್ಯಾಗರಾಜು, ಮಾಜಿ ಅಧ್ಯಕ್ಷರು, ಮಂಡ್ಯ ತಾಲೂಕು ಪಂಚಾಯಿತಿ

ನಿರೀಕ್ಷೆಯಂತೆ ನಿರಾಶದಾಯಕ



ಸಿಎಂ ಸಿದ್ದರಾಮಯ್ಯ ಅವರು ಮಂಡಿಸಿದ ಬಜೆಟ್ ನಿರಾಸದಾಯಕ. ಇದು ನಿರೀಕ್ಷೆ ಕೂಡ ಆಗಿತ್ತು. ರಾಜ್ಯದ ಬೊಕ್ಕಸವೆಲ್ಲ ಖಾಲಿ ಮಾಡಿರುವ ಕಾಂಗ್ರೆಸ್ ಸರ್ಕಾರ ಉತ್ತಮ ಯೋಜನೆ ನೀಡಲಿದೆ ಎಂದುಕೊಳ್ಳುವುದು ತಪ್ಪು. ಹಣವಿಲ್ಲದೆ ಅಭಿವೃದ್ಧಿ ಯೋಜನೆ ಹೇಗೆ ಅನುಷ್ಠಾನ ಗೊಳಿಸಲು ಸಾಧ್ಯ. ಗ್ಯಾರಂಟಿ ಯೋಜನೆಗಳ ಹೆಸರಿನಲ್ಲಿ ಅಭಿವೃದ್ಧಿಯನ್ನು ಸಂಪೂರ್ಣವಾಗಿ ನಿಲ್ಲಿಸಲಾಗಿದೆ. ಮಾತ್ರವಲ್ಲದೆ ಗ್ಯಾರಂಟಿ ಯೋಜನೆಗೆ ಅನುದಾನ ಒದಗಿಸಲು ಜನಸಾಮಾನ್ಯರ ಮೇಲೆ ಹೊರೆ ಹಾಕಲಾಗುತ್ತಿದೆ. ಈ ಬಾರಿಯ ಬಜೆಟ್‌ನಲ್ಲಿಯೂ ವಿಶೇಷ ಕಾರ್ಯಕ್ರಮಗಳಿಲ್ಲ. ಜನರ ಮೂಗಿಗೆ ತುಪ್ಪ ಸವರುವ ಕೆಲಸವನ್ನು ಮಾಡಲಾಗಿದೆ. **–ಇಂಡುವಾಳು ಎಸ್.ಸಚ್ಚಿದಾನಂದ, ಬಿಜೆಪಿ ಮುಖಂಡ.**

ಯುಪಿಎಸ್‌ಸಿ ಪರೀಕ್ಷೆ ಪಾಸ್ ಮಾಡಿದ ಮಂಡ್ಯದ ಬಡ ರೈತನ ಮಗ ಧನಂಜಯ



ಮಂಡ್ಯ: ಶುಕ್ರವಾರ ಪ್ರಕಟವಾದ 2025ರ ಯುಪಿಎಸ್‌ಸಿ ಪರೀಕ್ಷೆ ಫಲಿತಾಂಶದಲ್ಲಿ ಮಂಡ್ಯ ಜಿಲ್ಲೆಯ ರೈತನ ಪುತ್ರ ತೇರ್ಗಡೆಯಾಗಿ ಐಎಎಸ್ ಅಧಿಕಾರಿಯಾಗಿದ್ದಾರೆ.

ಮಂಡ್ಯ ಜಿಲ್ಲೆಯ ನಾಗಮಂಗಲ ತಾಲೂಕಿನ ಕರಡಹಳ್ಳಿ ಗ್ರಾಮದ ರಾಮಚಂದ್ರ ಹಾಗೂ ಮಂಗಳಮ್ಮ ದಂಪತಿಯ ಬಡ ಕುಟುಂಬದ ಧನಂಜಯ ಯುಪಿಎಸ್ ಪರೀಕ್ಷೆಯಲ್ಲಿ 554ನೇ ರ‍್ಯಾಂಕ್ ಪಡೆದು ಐಎಎಸ್ ಅಧಿಕಾರಿಯಾಗಲು ಸಜ್ಜಾಗಿದ್ದಾರೆ.

ಈ ಬಗ್ಗೆ ತಮ್ಮ ಸಂತಸ ಹಂಚಿಕೊಂಡಿರುವ ಧನಂಜಯ ಅವರು, 2019ರಲ್ಲಿ ಯುಪಿಎಸ್‌ಸಿ ಜರ್ನಿ ಆರಂಭಿಸಿದೆ ಮೊದಲ ಮತ್ತು ಎರಡನೇ ಪ್ರಯತ್ನದಲ್ಲಿ ನಾನು ಆಯ್ಕೆಯಾಗಲಿಲ್ಲ, ತದನಂತರ 2022, 2024 ಮತ್ತು 2025ರಲ್ಲಿ ಸಂದರ್ಶನ ಕೊಟ್ಟಿದ್ದೆ. ಆದರೂ ಆಯ್ಕೆಯಾಗಲಿಲ್ಲ ಎಂಬ ಬೇಸರ ಇತ್ತು. ಪ್ರಸ್ತುತ 2026ರಲ್ಲಿ ನಾನು ಯುಪಿಎಸ್ ಪರೀಕ್ಷೆಯಲ್ಲಿ ಪಾಸಾಗಿ ಆಯ್ಕೆಯಾಗಿದ್ದು, ಏಳು ವರ್ಷದ ನನ್ನ ಪಯಣಕ್ಕೆ ಒಂದು ಅರ್ಥ ಬಂದಿದೆ ಎಂದರು.

ಬೆಂಗಳೂರಿನ ಅಕ್ಕ ಅಕಾಡೆಮಿ ಮತ್ತು ಆಚಾರ್ಯ ಅಕಾಡೆಮಿಯಲ್ಲಿ ಟೀಚಿಂಗ್ ಮತ್ತು ಮೆಂಟರ್ ಆಗಿ ಕೆಲಸ ಮಾಡುತ್ತಿರುವ ನಾನು ಐಎಎಸ್ ಅಧಿಕಾರಿಯಾಗುತ್ತಿರುವುದಕ್ಕೆ ತುಂಬಾ ಖುಷಿಯಾಗುತ್ತಿದೆ. ಸ್ನೇಹಿತರು ಮತ್ತು ಅಕಾಡೆಮಿಯ ವಿದ್ಯಾರ್ಥಿಗಳು ಖುಷಿ ಪಡುತ್ತಿದ್ದಾರೆ. ನನ್ನ ತಂದೆ–ತಾಯಿ ಕೂಲಿ ಮಾಡಿ ನನ್ನ ಓದಿಸಿದ್ದಾರೆ. ನನ್ನ ತಮ್ಮ ಸಹ ಎಂಕಾಂ ಮುಗಿಸಿ ಉದ್ಯೋಗವಿಲ್ಲದೇ ಮನೆಯಲ್ಲಿದ್ದಾನೆ. ನನ್ನಣ್ಣನಿಗೆ ಕೆಲಸ ಆಗಲಿ ಎಂದು ಮನೆಯಲ್ಲಿ ಹಸುಗಳನ್ನು, ಜಮೀನು ನೋಡಿಕೊಂಡಿದ್ದ. ತಂದೆ ತಾಯಿ ಸಹ ಹಸು ನೋಡಿಕೊಂಡು ಕೃಷಿ ಕೆಲಸ ಮಾಡುತ್ತಾರೆ ಎಂದು ಕುಟುಂಬದ ಪರಿಸ್ಥಿತಿ ವಿವರಿಸಿದರು. ಡಿಗ್ರಿ ಓದುವಾಗ ನನಗೆ ಯಾವುದೇ ಕನಸಿರಲಿಲ್ಲ. ವೀಕೆಂಡ್ ವಿತ್ ರಮೇಶ್‌ನಲ್ಲಿ ಅನೇಕ ಸಾಧಕರನ್ನು ನೋಡಿ, ಯುಪಿಎಸ್ ಓದಬೇಕೆಂಬ ಹಂಬಲದಿಂದ ಹೈದರಾ ಬಾದ್ ಸೇರಿ ಹಲವೆಡೆಗೆ ಹೋಗಿದ್ದೆ. ಪ್ರತಿ ಸಾರಿ ಸಹ ಇಂಟರ್‌ವ್ಯೂತನಕ ಹೋಗಿ ವಾಪಸ್ ಬಂದೆ. ಇದೀಗ ಯಶಸ್ವಿಯಾಗಿ ನನ್ನ ಪಯಣ ಪೂರೈಸಿದ್ದೇನೆ. 10ನೇ ತರಗತಿವರೆಗೂ ಕನ್ನಡ, ನಂತರ ಇಂಗ್ಲೀ ಷ್‌ನಲ್ಲಿ ಓದಿ, ಇಂಗ್ಲೀಷ್‌ನಲ್ಲೇ ಪರೀಕ್ಷೆ ಬರೆದಿದ್ದು, ಇದೀಗ ಐಪಿಎಸ್ ಅಧಿಕಾರಿಯಾಗುತ್ತೇನೆಂಬ ಹಂಬಲ ನನ್ನಲ್ಲಿದೆ ಐಪಿಎಸ್, ಐಎಎಸ್, ಐಆರ್‌ಎಸ್ ಪೈಕಿ ಐಎಎಸ್ ಅಥವಾ ಐಆರ್‌ಎಸ್ ಹುದ್ದೆ ಸಿಗಬಹುದೆಂಬ ಕನಸಿದೆ ಎಂದು ತಿಳಿಸಿದರು.

> **ಐಎಎಸ್ ಅಧಿಕಾರಿ ಡಿ.ಕೆ.ರವಿ ಅವರು ನನಗೆ ಸ್ಫೂರ್ತಿಯಾಗಿದ್ದು, ಅವರ ತರ ಕೆಲಸ ಮಾಡಬೇಕೆಂಬ ಹಂಬಲ ಇದೆ. ಹರಿಯಾಣ ಮೂಲದ ಐಎಎಸ್ ಅಧಿಕಾರಿ ಅಶೋಕ್ ಎಂಬುವವರು ಸಹ ನನಗೆ ಸ್ಫೂರ್ತಿ.**

ನಾನು ಆಯ್ಕೆಯಾಗಿರುವ ವಿಷಯ ಕೇಳಿ ಮನೆಯಲ್ಲಿ ಬಾವುಕರಾಗಿದ್ದಾರೆ. ಮನೆಯವರು ಏಳು ವರ್ಷದವರೆಗೂ ಕಾಯುತ್ತಿದ್ದರು. ಪ್ರತಿ ಸಾರಿಯೂ ಆಗದೇ ಇದ್ದಾಗ ಅಳುತ್ತಾ ಬೇಸರ ಪಡುತ್ತಿದ್ದೆ. ಇದೀಗ ಆಗಿದ್ದು, ಖುಷಿ ಇದೆ. ಈ ಬಾರಿ ಆಗದಿದ್ದರೆ ಒಂದೆ ರಡು ವರ್ಷ ವಿರಾಮ ಪಡೆಯುವ ಚಿಂತನೆಯಲ್ಲಿದ್ದೆ.

ಇದಲ್ಲದೇ ಇಂಟರ್‌ವ್ಯೂನಲ್ಲಿ ಭಾಷೆ ಮಹತ್ವ ದ್ದಾಗಲ್ಲ, ಇಂಗ್ಲೀಷ್ ತೊಡಕಾಗಲ್ಲ. ಆರಂಭದಲ್ಲಿ ಕನ್ನಡ ಮಧ್ಯಮದಿಂದ ಬಂದ ನನಗೂ ಅರ್ಥ ಆಗುತ್ತಿರಲಿಲ್ಲ. ಇಂದಿನ ವಿದ್ಯಾರ್ಥಿಗಳಿಗೂ ಇಂಗ್ಲೀಷ್‌ನಲ್ಲಿ ಆರಾಮಾಗಿ ಯುಪಿಎಸ್ ಮಾಡಬಹುದು. ಎಂದರು.

ಕುಡಿದ ಮತ್ತಿನಲ್ಲಿ ಮಾರಣಾಂತಿಕ ಹಲ್ಲೆ: ವ್ಯಕ್ತಿ ಗಂಭೀರ

ಹಲಗೂರು: ಸಮೀಪದ ಪುರದೊಡ್ಡಿ ಗ್ರಾಮದ ಕೆ.ಎಂ. ದೊಡ್ಡಿ ಮಾರ್ಗದ ಕಾವೇರಿ ವೈನ್ಸ್ ಸ್ಟೋರ್ ಬಳಿ ಕುಡಿದ ಮತ್ತಿನಲ್ಲಿ ವ್ಯಕ್ತಿಯೊಬ್ಬನ ಮೇಲೆ ಮಾರಕಾಸ್ತ್ರದಿಂದ ಹಲ್ಲೆ ನಡೆಸಿ ಪರಾರಿಯಾದ ಘಟನೆ ನಡೆದಿದೆ. ಹಲ್ಲೆಗೊಳಗಾದ ಮಂಜುನಾಥ್ ಪುರದೊಡ್ಡಿ ಗ್ರಾಮದ ನಿವಾಸಿಯಾಗಿದ್ದಾರೆ. ಗುರುವಾರ ರಾತ್ರಿ ಕಾವೇರಿ ವೈನ್ಸ್ ಸ್ಟೋರ್ ಬಳಿ ಕ್ಷುಲ್ಲಕ ವಿಚಾರಕ್ಕೆ ಸಂಬಂಧಿಸಿ ಪ್ರಶಾಂತ್ ಎಂಬ ವ್ಯಕ್ತಿ ಕುಡಿದ ಮತ್ತಿನಲ್ಲಿ ಮಂಜುನಾಥ್ ಮೇಲೆ ಮಾರಕಾಸ್ತ್ರದಿಂದ ಹಲ್ಲೆ ನಡೆಸಿ ಸ್ಥಳದಿಂದ ಪರಾರಿಯಾಗಿದ್ದಾನೆ ಎಂದು ತಿಳಿದು ಬಂದಿದೆ. ಹಲ್ಲೆಯಿಂದ ಗಂಭೀರವಾಗಿ ಗಾಯಗೊಂಡ ಮಂಜುನಾಥ್ ಅವರನ್ನು ತಕ್ಷಣ ಆಸ್ಪತ್ರೆಗೆ ದಾಖಲಿಸಲಾಗಿದೆ. ಅವರ ಸ್ಥಿತಿ ಚಿಂತಾಜನಕವಾಗಿದೆ ಎಂದು ಮೂಲಗಳು ತಿಳಿಸಿವೆ. ಈ ಸಂಬಂಧ ಹಲಗೂರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಚಲನಚಿತ್ರ ನಿರ್ಮಾಪಕ ನರಹಳ್ಳಿ ಜ್ಞಾನೇಶ್ ವಿಧಿವಶ



ಪಾಂಡವಪುರ: ತಾಲೂಕಿನ ನರಹಳ್ಳಿ ಗ್ರಾಮದವರಾಗಿದ್ದ, ಮೈಸೂರು ನಿವಾಸಿ ಚಲನಚಿತ್ರ ನಿರ್ಮಾಪಕ, ನಿರ್ದೇಶಕ, ಸಂಕಲನಕಾರ ಹಾಗೂ ಸಂಘಟಕ ನರಹಳ್ಳಿ ಜ್ಞಾನೇಶ್ (48) ಗ್ರಾಮದ ತಮ್ಮ ನಿವಾಸದಲ್ಲಿ ಹೃದಯಾಘಾತದಿಂದ ಶುಕ್ರವಾರ ನಿಧನರಾದರು.

ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಗೆ ಇತ್ತೀಚೆಗಷ್ಟೇ ನಡೆದಿದ್ದ ಚುನಾವಣೆಯಲ್ಲಿ ನಿರ್ಮಾಪಕರ ವಲಯದಿಂದ ಸ್ಪರ್ಧಿಸಿ ಮೈಸೂರು–ಮಂಡ್ಯ ಜಿಲ್ಲೆಗಳನ್ನು ಪ್ರತಿನಿಧಿಸುವ ಮೂಲಕ ನಿರ್ದೇಶಕರಾಗಿ ಆಯ್ಕೆಯಾಗಿದ್ದರು. ಕಳೆದ ಎರಡು ದಶಕಗಳಿಂದ ಕಿರುತೆರೆ ಮತ್ತು ಹಿರಿತೆರೆಯಲ್ಲಿ ಸಕ್ರಿಯರಾಗಿದ್ದ ನರಹಳ್ಳಿ ಜ್ಞಾನೇಶ್ ಸುರೇಶ್ ಅರಸ್ ಅವರ ಬಳಿ ಸಂಕಲನ ಕಲಿತು ಹಲವಾರು ಧಾರವಾಹಿಗಳು, ಸಾಕ್ಷ್ಯ ಚಿತ್ರಗಳು, ಕಿರುಚಿತ್ರಗಳು, ಸಿನಿಮಾಗಳಿಗೆ ಸಂಕಲನಕಾರರಾಗಿ ಕೆಲಸ ಮಾಡಿದ್ದರು. ಇವರು ಜಗ್ಗೇಶ್ ಅಭಿನಯದ 'ಎದ್ದೇಳು ಮಂಜುನಾಥ' ಸಿನಿಮಾದ ಸಂಕಲನಕ್ಕಾಗಿ ರಾಜ್ಯ ಪ್ರಶಸ್ತಿ ಸಹ ಪಡೆದಿದ್ದರು.

ರೈತ ಸಂಘಟನೆಯಲ್ಲಿ ಪತ್ನಿ ಕೋಕಿಲ ಅವರ ಜೊತೆಗೆ ಸಕ್ರಿಯರಾಗಿದ್ದ ಜ್ಞಾನೇಶ್ ಅವರು ರೈತ ಮುಖಂಡ, ಮಾಜಿ ಶಾಸಕ ಕೆ.ಎಸ್.ಪುಟ್ಟಣ್ಣಯ್ಯ ಅವರ ಆಪ್ತ ಒಡನಾಡಿಯಾಗಿದ್ದರು. ಮೇಲುಕೋಟೆಯ ಪುತಿನ ರಂಗಮಂದಿರದಲ್ಲಿ ಕಳೆದ ತಿಂಗಳಷ್ಟೇ ಕೆ.ಎಸ್.ಪುಟ್ಟಣ್ಣಯ್ಯ ಅವರಿಗೆ ರಂಗನಮನ ಸಲ್ಲಿಸುವ 'ಹೊಂಬಾಳೆ ನಾಟಕೋತ್ಸವ' ಆಯೋಜಿಸಿದ್ದರು. ಮೂರು ದಿನಗಳ ನಾಟಕೋತ್ಸವದಲ್ಲಿ ಅಪರಿಮಿತ ಉತ್ಸಾಹದಿಂದ ಓಡಾಡಿದ್ದರು.

ಮೃತರ ಅಂತ್ಯಕ್ರಿಯೆ ಅವರ ಸ್ವಗ್ರಾಮ ಪಾಂಡವಪುರ ತಾಲೂಕಿನ ನರಹಳ್ಳಿಯಲ್ಲಿ ನೆರವೇರಿತು. ಮೃತರಿಗೆ ಪಾಂಡವಪರ ತಾಲೂಕು ರೈತ ಸಂಘದ ಮಹಿಳಾ ಘಟಕದ ಅಧ್ಯಕ್ಷೆ ಕೋಕಿಲ, ಪುತ್ರ ಚಿರಾಗ್, ಪುತ್ರಿ ಇಂಪನಾ ಇದ್ದಾರೆ.

ವೆಂಕಟೇಶ್



ಶ್ರೀರಂಗಪಟ್ಟಣ: ತಾಲೂಕಿನ ಪಿ. ಹೊಸಹಳ್ಳಿ ಗ್ರಾಮದ ಜೆಡಿಎಸ್ ಮುಖಂಡ ವೆಂಕಟೇಶ್ (55) ಶುಕ್ರವಾರ ಮುಂಜಾನೆ ಹೃದಯಘಾತದಿಂದ ನಿಧನರಾಗಿದ್ದಾರೆ. ಮೃತರು ಪತ್ನಿ ಹಾಗೂ ಇಬ್ಬರು ಹೆಣ್ಣು ಮಕ್ಕಳು ಸೇರಿ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಸ್ವಗ್ರಾಮ ಪಿ.ಹೊಸಹಳ್ಳಿಯ ಮೃತರ ತೋಟದಲ್ಲಿ ಸಂಜೆ ಅಂತ್ಯಕ್ರಿಯೆ ನೆರವೇರಿಸಲಾಯಿತು.

ರಾಜಣ್ಣ



ಶ್ರೀರಂಗಪಟ್ಟಣ: ಪಟ್ಟಣದ ಪೊಲೀಸ್ ಕ್ವಾಟ್ರಸ್ ಹಿಂಭಾಗದ ರಸ್ತೆ ಯಲ್ಲಿ ವಾಸವಾಗಿರುವ ಡ್ರೈವರ್ ರಾಜಣ್ಣ (77) ಶುಕ್ರವಾರ ಸಂಜೆ ಅನಾರೋಗ್ಯದಿಂದ ನಿಧನ ಹೊಂದಿದ್ದಾರೆ. ದಿವಂಗತರು ಪತ್ನಿ ಹಾಗೂ ಓರ್ವ ಪುತ್ರ, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು ಗಳನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ನಾಳೆ ಶನಿವಾರ ಮಧ್ಯಾಹ್ನ 12 ಗಂಟೆಗೆ ಪಟ್ಟಣದ ಶಂಭುಲಿಂಗಯ್ಯನ ಕಟ್ಟೆಯಲ್ಲಿ ನೆರವೇರಲಿದೆ.

ರಾಜ್ಯ ಬಜೆಟ್‌ನಲ್ಲಿ ಗಡಿ ಜಿಲ್ಲೆಗೆ ವಿವಿಧ ಯೋಜನೆಗಳ ಕೊಡುಗೆ

ಹನೂರಿನ ಉಡುತೊರೆಹಳ್ಳ ಯೋಜನೆಗೆ 490 ಕೋಟಿ ಅನುದಾನ

ಚಾಮರಾಜನಗರ: ಸಿದ್ದರಾಮಯ್ಯ ಅವರು ಎರಡನೇ ಬಾರಿಗೆ ಮುಖ್ಯಮಂತ್ರಿಯಾದ ಬಳಿಕ ಮಂಡಿಸಿದ ಬಜೆಟ್‌ನಲ್ಲಿ ಚಾಮರಾಜನಗರ ತಾಲೂಕಿನ ಸುವರ್ಣಾವತಿ ಜಲಾಶಯದ ನಾಲೆಗಳ ಅಭಿವೃದ್ಧಿ, ಹನೂರಿನ ಉಡುತೊರೆಹಳ್ಳ ಯೋಜನೆಗೆ 490 ಕೋಟಿ ಅನುದಾನ, ಗುಂಡ್ಲುಪೇಟೆ ಪಟ್ಟಣದಲ್ಲಿ ಸಂಚಾರ ಪೊಲೀಸ್ ಠಾಣೆ ಹಾಗೂ ಒಳಚರಂಡಿ ಅಭಿವೃದ್ಧಿ ಗೊಳಿಸುವ ಘೋಷಣೆ ಮಾಡಲಾಗಿದೆ.

ರಾಜ್ಯ ಬಜೆಟ್‌ನಲ್ಲಿ ಈ ಬಾರಿ ವಿವಿಧ ಯೋಜನೆಗಳನ್ನು ಜಿಲ್ಲೆಗೆ ನೀಡಲಾಗಿದ್ದರೂ, ಜನರ ನಿರೀಕ್ಷೆಯಷ್ಟು ದೊರಕಿಲ್ಲ. ಬಜೆಟ್‌ನಲ್ಲಿ ಚಾಮರಾಜನಗರ ಜಿಲ್ಲೆಯ ಹೆಸರು ಅಲ್ಲಲ್ಲಿ ಮಾತ್ರ ಉಲ್ಲೇಖಿಸಲಾಗಿದೆ. ಜಿಲ್ಲೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ವಿಶೇಷ ಅನುದಾನ ನೀಡುತ್ತಾರೆ. ಬಜೆಟ್‌ನಲ್ಲಿ ಜಿಲ್ಲೆಗೆ ಸಾಕಷ್ಟು ಕೊಡುಗೆ ದೊರೆಯುತ್ತದೆ ಎಂಬ ಜನರ ಅಪಾರ ನಿರೀಕ್ಷೆ ಹುಸಿಯಾಗಿದೆ.

ರಾಜ್ಯ ಬಜೆಟ್‌ನಲ್ಲಿ ಸಿಕ್ಕಿದ್ದೇನು: ಚಾಮರಾಜನಗರ ತಾಲೂಕಿನ ಅವಳಿ ಜಲಾಶಯಗಳಲ್ಲಿ ಒಂದಾಗಿರುವ ಸುವರ್ಣಾವತಿ ಜಲಾಶಯದ ಅಭಿವೃದ್ಧಿಗೆ ರಾಜ್ಯ ಸರ್ಕಾರ ಈ ಬಾರಿಯ ಬಜೆಟ್‌ನಲ್ಲಿ ಯೋಜನೆ ರೂಪಿಸಿದೆ.

ಸುವರ್ಣಾವತಿ ನದಿಯ ವ್ಯಾಪ್ತಿಯ ಸರಣಿ ಕೆರೆಗಳ, ಫೀಡರ್ ನಾಲೆಗಳ ಹಾಗೂ ಅಡ್ಡಮೋರಿ ಕಾಮಗಾರಿ ಸೇರಿದಂತೆ ಜಲಾಶಯದ ನಾಲೆಗಳ ಅಭಿವೃದ್ಧಿಗೆ ಅಗತ್ಯ ಕ್ರಮ ಕೈಗೊಳ್ಳುವ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಿಳಿಸಿದ್ದಾರೆ.

ಕಟ್ಟಡ ಕಾರ್ಮಿಕರ ಮಕ್ಕಳ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ ನೀಡುವ ಉದ್ದೇಶದಿಂದ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕ ಇಲಾಖೆಯಡಿ ಚಾಮರಾಜನಗರ ಜಿಲ್ಲೆಯಲ್ಲಿ ಶ್ರಮಿಕ ವಸತಿ ಶಾಲೆ ಪ್ರಾರಂಭಿಸುವ ಕುರಿತು ಬಜೆಟ್ ನಲ್ಲಿ ಮುಖ್ಯಮಂತ್ರಿಗಳು ಪ್ರಸ್ತಾಪಿಸಿದ್ದಾರೆ.



ಸ್ವಚ್ಛತೆಯನ್ನು ಕಾಪಾಡುವ ದೃಷ್ಟಿಯಿಂದ ಗುಂಡ್ಲುಪೇಟೆಯಲ್ಲಿ ಒಳಚರಂಡಿ ಕಾಮಗಾರಿ ನಡೆಸಲು ಕ್ರಮ ಕೈಗೊಳ್ಳುವುದು ಹಾಗೂ ಗುಂಡ್ಲುಪೇಟೆಯಲ್ಲಿ ಸಂಚಾರ ಪೊಲೀಸ್ ಠಾಣೆ ಆರಂಭಿಸುವ ಕುರಿತು ಬಜೆಟ್‌ನಲ್ಲಿ ತಿಳಿಸಲಾಗಿದೆ. ಹನೂರು ತಾಲೂಕಿನಲ್ಲಿ ಅಂತರ್ಜಲ ಹೆಚ್ಚಿಸಿ ಕುಡಿಯುವ ನೀರು ಹಾಗೂ 12 ಸಾವಿರ ಎಕರೆ ಬಾಧಿತ ಅಚ್ಚುಕಟ್ಟು ಪ್ರದೇಶಕ್ಕೆ ನೀರಾವರಿ ಒದಗಿಸಲು ಉಡುತೊರೆಹಳ್ಳ ಯೋಜನೆಯನ್ನು 490 ಕೋಟಿ ರೂ. ಮೊತ್ತದಲ್ಲಿ ಕೈಗೆತ್ತಿಕೊಳ್ಳುವ ಕುರಿತು ಸಿದ್ದರಾ ಮಯ್ಯ ಅವರು ಹನೂರು ಭಾಗದ ನೀರಾವರಿ ಯೋಜನೆಗೆ ಬಂಪರ್ ಕೊಡುಗೆ ನೀಡಿದ್ದಾರೆ. ಜೊತೆಗೆ ಹನೂರು–ರಾಂಪುರ–ಪಾಲಾರ್–70 ಕಿ.ಮೀ. ರಸ್ತೆ ಅಭಿವೃದ್ಧಿಗೆ ಆದ್ಯತೆ ನೀಡಲಾಗಿದೆ.

ಗುಂಡ್ಲುಪೇಟೆಯಲ್ಲಿ ಸಂಚಾರಿ ಠಾಣೆ, ಸುವರ್ಣಾವತಿ ಜಲಾಶಯದ ಅಭಿವೃದ್ಧಿ


ಕೆಲವು ದಿನಗಳ ಹಿಂದೆಯಷ್ಟೇ ಈ ಯೋಜನೆಯನ್ನು ಈ ಸಾಲಿನಲ್ಲೇ ಕೈಗೆತ್ತಿಕೊಳ್ಳಬೇಕೆಂದು ಹನೂರಿನಿಂದ ಬೆಂಗಳೂರಿಗೆ ರೈತರು ಕಾಲ್ನಡಿಗೆ ಮೂಲಕ ತೆರಳಿ ಸಿಎಂಗೆ ಒತ್ತಾಯಿಸಿದ್ದರು. ಇಂದು ಈ ಯೋಜನೆಗೆ ಸಿಎಂ ಅಸ್ತು ಎಂದಿರುವುದು ಈ ಭಾಗದ ರೈತರ ಮೊಗದಲ್ಲಿ ಸಂತಸ ಮೂಡಿಸಿದೆ. ಕೆರೆಕಟ್ಟೆಗಳು, ಜನ–ಜಾನುವಾರುಗಳಿಗೆ ಸಮರ್ಪಕ ನೀರಿನ ವ್ಯವಸ್ಥೆ ಕಲ್ಪಿಸುವ ಈ ಯೋಜನೆ ಘೋಷಣೆಯಾಗುತ್ತಿದ್ದಂತೆ ಹನೂರು ತಾಲೂಕಿನ ಅಜ್ಜೀಪುರದಲ್ಲಿ ರೈತರು ಸಂಭ್ರಮಾಚರಣೆ ನಡೆಸಿದರು.

ಏನಿತ್ತು ಗಡಿ ಜಿಲ್ಲೆ ಜನರ ನೀರಿಕ್ಷೆ?: ಜಿಲ್ಲಾ ಉಸ್ತುವಾರಿ ಸಚಿವರಾದ ಕೆ.ವೆಂಕಟೇಶ್ ಅವರು ರೇಷ್ಮೆ ಹಾಗೂ ಪಶು ಸಂಗೋಪನೆ ಸಚಿವರಾಗಿದ್ದರಿಂದ ಜಿಲ್ಲೆಯಲ್ಲಿ ರೇಷ್ಮೆ ಪುನಶ್ಚೇತನಕ್ಕೆ ಅವರು ಸರ್ಕಾರಕ್ಕೆ ಹೆಚ್ಚಿನ ಒತ್ತಡ ತಂದು ಜಿಲ್ಲೆಯಲ್ಲಿ ರೇಷ್ಮೆ ಮಾರುಕಟ್ಟೆ ಅಭಿವೃದ್ಧಿ, ರೇಷ್ಮೆ ಬೆಳೆಯ ಕ್ಷೇತ್ರ ವಿಸ್ತರಣೆಗೆ ವಿಶೇಷ ಅನುದಾನ ದೊರೆಯು ತ್ತದೆ ಎಂಬ ಆಸೆ ಈ ಭಾಗದ ರೈತರಲ್ಲಿ ಚಿಗುರೊಡೆದಿತ್ತು. ಆದರೆ, ಆ ಬಗ್ಗೆ ಯಾವುದೇ ಪ್ರಸ್ತಾಪವಿಲ್ಲ. ಚಾಮರಾಜನಗರ ಜಿಲ್ಲಾ ಕೇಂದ್ರಕ್ಕೆ ಎರಡನೇ ಹಂತದ ಕುಡಿಯುವ ನೀರಿನ ಯೋಜನೆ ಪ್ರಸ್ತಾವ, ಹೊಸ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣ ನಿರ್ಮಾಣ, ಮಲೆಮಹದೇಶ್ವರಸ್ವಾಮಿ ಬೆಟ್ಟದಲ್ಲಿ ಸುಸಜ್ಜಿತ ಆಸ್ಪತ್ರೆ ನಿರ್ಮಾಣ, ಚಾಮರಾಜನಗರ ಪ್ರವಾಸೋದ್ಯಮಕ್ಕೆ ಆದ್ಯತೆ, ಜಿಲ್ಲೆಗೆ ವಿಶೇಷ ಅನುದಾನದ ಪ್ಯಾಕೇಜ್ ಘೋಷಣೆ ಸೇರಿದಂತೆ ಇತರೆ ಅಭಿವೃದ್ಧಿ ಕಾರ್ಯಗಳಿಗೆ ಬಜೆಟ್‌ನಲ್ಲಿ ಆದ್ಯತೆ ನೀಡಿಲ್ಲ.

ಒಟ್ಟಾರೆ ರಾಜ್ಯ ಬಜೆಟ್‌ನಲ್ಲಿ ಗಡಿ ಜಿಲ್ಲೆಯ ಜನರ ಹಲವಾರು ನಿರೀಕ್ಷೆಗಳು ಹುಸಿಯಾಗಿದ್ದು, ವಿವಿಧ ಯೋಜನೆಗಳಿಗೆ ತೃಪ್ತಿಪಟ್ಟುಕೊಳ್ಳುವಂತಾಗಿದೆ.

ರಾಜ್ಯ ಬಜೆಟ್‌ಗೆ ಮಿಶ್ರ ಪ್ರತಿಕ್ರಿಯೆ

ರೈತರ ಅಭಿವೃದ್ಧಿಗೆ ಪೂರಕವಲ್ಲದ ಬಜೆಟ್



ಬಜೆಟ್‌ನಲ್ಲಿ ರೈತ ಅಭಿವೃದ್ಧಿಗೆ ಪೂರಕವಾದ ಯೋಜನೆಗಳು ಸ್ಪಷ್ಟವಾಗಿಲ್ಲ. ಕಳೆದ ಎರಡು ವರ್ಷದಿಂದ ಕಬ್ಬು ಬೆಳೆಗಾರರ 950 ಕೋಟಿ ಬಾಕಿ ನೀಡುವಲ್ಲಿ ಸರ್ಕಾರ ವಿಫಲವಾಗಿದೆ. ಕಬ್ಬು ಬೆಳೆ ಗಾರರ ಉತ್ತರ ಮತ್ತು ದಕ್ಷಿಣ ತಾರತಮ್ಯ ನೀತಿ ನಿವಾರಿಸುವಲ್ಲಿ ಸರ್ಕಾರ ಎಡವಿದೆ. ರಾಜ್ಯದ ವ್ಯಾಪ್ತಿಯ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳಲ್ಲಿ ರೈತರ ಬಲವರ್ಧನೆಗೆ ಸಾಲವನ್ನದ ಪ್ರಸ್ತಾಪವಿಲ್ಲ. ಆದ್ದರಿಂದ ಇದು ರೈತರ ಮೂಗಿಗೆ ತುಪ್ಪ ಸವರುವ ಬಜೆಟ್ ಆಗಿದೆ. **– ಹಳ್ಳಿಕೆರೆಹುಂಡಿ ಭಾಗ್ಯರಾಜ್, ಅಧ್ಯಕ್ಷರು, ರಾಜ್ಯ ಕಬ್ಬುಬೆಳೆಗಾರರ ಸಂಘ.**

490 ಕೋಟಿ ಘೋಷಣೆಗೆ ಅಭಿನಂದನೆ



ಹನೂರು ಕ್ಷೇತ್ರದ ಕುಡಿಯುವ ನೀರು ಹಾಗೂ ಕೆರೆಗಳಿಗೆ ನೀರು ತುಂಬಿಸುವ ಉಡುತೊರೆಹಳ್ಳ ಯೋಜನೆಗೆ 490 ಕೋಟಿ ಘೋಷಣೆ ಮಾಡಿರುವುದು ಅಭಿನಂದನರ್ಹವಾಗಿದೆ.

ಇದರಿಂದ 22 ಹಳ್ಳಿಗಳಿಗೆ ಹಾಗೂ 12,000 ಎಕರೆ ಕೃಷಿ ಜಮೀನಿಗೆ ನೀರಾವರಿ ಸೌಲಭ್ಯ ಸಿಗಲಿದ್ದು, ಕೆರೆಗಳನ್ನು ತುಂಬಿಸುವುದರಿಂದ ಅಂತರ್ಜಲ ಮಟ್ಟ ಸಹ ಏರಿಕೆಯಾಗಿ ಅನುಕೂಲವಾಗಲಿದೆ.

–ಡಾ.ಎಸ್. ದತ್ತೇಶಕುಮಾರ್, ಬಿಜೆಪಿ ಮುಖಂಡ

ಇದೊಂದು ಸಾಲದ ಬಜೆಟ್



ಸಿಎಂ ಸಿದ್ದರಾಮಯ್ಯ ಅಧಿಕಾರಕ್ಕೆ ಬಂದ ನಂತರ 4 ಲಕ್ಷಕೋಟಿ ಸಾಲವಾಗಿದೆ ವಿನಾಃ ಯಾವುದೇ ಅಭಿವೃದ್ಧಿ ಕೆಲಸವಾಗಿಲ್ಲ. 5ನೇ ಗ್ಯಾರಂಟಿಯಾದ ಯುವನಿಧಿಗೆ ಈ ಬಾರಿ ಅನುದಾನ ನೀಡಿಲ್ಲ. ಹೀಗಾಗಿ ಈ ಗ್ಯಾರಂಟಿಯನ್ನು ಸರ್ಕಾರ ನಿಲ್ಲಿಸಿದೆ. ಜಿಲ್ಲೆಗೆ 25–30 ಬಾರಿ ಬಂದಿರುವುದಾಗಿ ಹೇಳುವ ಮುಖ್ಯಮಂತ್ರಿಗಳು ಜಿಲ್ಲೆಯ ಅಭಿವೃದ್ಧಿಗೆ ಯಾವುದೇ ಪೂರಕ ಯೋಜನೆ ಜಾರಿ ಮಾಡಿಲ್ಲ. ತಮ್ಮ ಸ್ವ–ಕ್ಷೇತ್ರವಾದ ಮೈಸೂರಿಗೆ ಹೆಚ್ಚು ಆದ್ಯತೆ ನೀಡಿ, ಪಕ್ಕದ ಜಿಲ್ಲೆಯನ್ನು ಕಡೆಗಣಿಸಿದ್ದಾರೆ.

–ಎಂ. ರಾಮಚಂದ್ರ, ಬರ ಪರಿಹಾರ ಸಮಿತಿ

ಅತ್ಯುತ್ತಮವಾದ ಬಜೆಟ್



ಈ ಬಾರಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಂಡಿಸಿರುವ ಬಜೆಟ್ ಅತ್ಯುತ್ತಮವಾದ ಬಜೆಟ್ ಆಗಿದೆ. ರಾಜ್ಯದ ಎಲ್ಲಾ ಕ್ಷೇತ್ರ ಜನರ ಅಭಿವೃದ್ಧಿಗೆ ಪೂರಕವಾಗಿದೆ. ಚಾಮರಾಜ ನಗರ ಕ್ಷೇತ್ರದಲ್ಲಿ ವಿಶೇಷವಾಗಿ ಸುವರ್ಣಾವತಿ ಜಲಾಶಯದ ಅಭಿವೃದ್ಧಿ, ಶ್ರಮಿಕರ ವಸತಿ ಶಾಲೆ ಸ್ಥಾಪನೆ ಸೇರಿದಂತೆ ಜಿಲ್ಲೆಗೆ ವಿವಿಧ ಯೋಜನೆಗಳನ್ನು ಘೋಷಣೆ ಮಾಡಲಾಗಿದೆ. **– ಸಿ. ಪುಟ್ಟರಂಗಶೆಟ್ಟಿ, ಶಾಸಕರು.**

ಯಾವುದೇ ಪ್ರಯೋಜನವಿಲ್ಲ



ಮುಖ್ಯಮಂತ್ರಿ ಸಿದ್ದರಾಮಯ್ಯನವರು ನೆರೆಯ ಮೈಸೂರು ಜಿಲ್ಲೆಯರಾಗಿದ್ದು, ಚಾಮರಾಜನಗರದ ಸಮಸ್ಯೆಗಳ ಸಂಪೂರ್ಣ ಅರಿವು ಅವರಿಗೆ ಇದೆ. ಈ ಕಾರಣಕ್ಕಾಗಿ ಚಾಮರಾಜನಗರಕ್ಕೆ ಮುಖ್ಯಮಂತ್ರಿ ಅವರ ಅಮೃತ್ ಯೋಜನೆ ಅಡಿ ಕನಿಷ್ಠ 100 ಕೋಟಿ ರೂಪಾಯಿಯನ್ನು ಜಿಲ್ಲಾ ಕೇಂದ್ರ ಚಾಮರಾಜನಗರ ಪಟ್ಟಣದ ಅಭಿವೃದ್ಧಿಗಾಗಿ ನೀಡಬೇಕಿತ್ತು. ಚಾಮರಾಜನಗರ ಪಟ್ಟಣಕ್ಕೆ ಪದೇ ಪದೇ ಸಿದ್ದರಾಮಯ್ಯನವರು ಮುಖ್ಯಮಂತ್ರಿಯಾಗಿ ಭೇಟಿ ನೀಡಿದ್ದರು ಸಹ ಯಾವುದೇ ಪ್ರಯೋಜನವಾಗಿಲ್ಲ. **–ಮಲ್ಲೇಶ್, ಬಿಜೆಪಿ ರೈತ ಮುಖಂಡ.**

ಕುಡಿದು ತಾಪಂ ಕಚೇರಿಗೆ ನುಗ್ಗಿದ ವ್ಯಕ್ತಿ

ಕೊಳ್ಳೇಗಾಲ: ಕುಡಿದ ಮತ್ತಿನಲ್ಲಿ ತಾ.ಪಂ ಕಚೇರಿಗೆ ಬಂದ ವ್ಯಕ್ತಿಯೋರ್ವ ಕಾರ್ಯ ನಿರ್ವಾಹಕ ಅಧಿಕಾರಿಯನ್ನು ನಿಂದಿಸಿ ಕರ್ತವ್ಯಕ್ಕೆ ಅಡ್ಡಿಪಡಿಸಿರುವ ಘಟನೆ ಇಂದು ಜರುಗಿದೆ. ಮುಳ್ಳೂರು ಗ್ರಾಮದ ಮಂಟೇಲಿಂಗ ಶೆಟ್ಟಿರವರ ಮಗನಾದ ರಾಚಪ್ಪಾಜಿ ಎಂಬಾತ ಕರ್ತವ್ಯಕ್ಕೆ ಅಡ್ಡಿಪಡಿಸಿದ್ದ ವ್ಯಕ್ತಿ. ಇ–ಸ್ವತ್ತು ವಿಚಾರವಾಗಿ ತಾಪಂಗೆ ಬಂದ ರಾಚಪ್ಪಾಜಿ ಎನ್ನುವನು ಏಕಾಏಕಿ ಇಒ ಗುರುಶಾಂತಪ್ಪ ಬೆಳ್ಳುಂಡಗಿ ಅವರನ್ನು ನಿಂದಿಸಿ ಕಚೇರಿ ಕರ್ತವ್ಯಕ್ಕೆ ಅಡ್ಡಿ ಉಂಟು ಮಾಡಿ ಸಾರ್ವಜನಿಕರ ಕೆಲಸ ಕಾರ್ಯಗಳಿಗೆ ತೊಂದರೆಯನ್ನುಂಟು ಮಾಡಿದ್ದಾನೆ ಎಂದು ಇಒ ಗುರುಶಾಂತಪ್ಪ ಬೆಳ್ಳುಂಡಗಿ ಅವರು ಪೊಲೀಸರಿಗೆ ದೂರು ಸಲ್ಲಿಸಿದ್ದಾರೆ. ಈ ಸಂಬಂಧ ಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು, ಆರೋಪಿಯನ್ನು ಬಂಧಿಸಿದ್ದಾರೆ.

ಶೇಖರಪ್ಪ ನಿಧನ



ಚಾಮರಾಜನಗರ: ತಾಲೂಕಿನ ನಂಜೇದೇವನಪುರ ಗ್ರಾಮದ ಹಿರಿಯ ಮುಖಂಡರಾದ ಗುರುಲಿಂಗಪ್ಪ ಉರುಫ್ ಶೇಖರಪ್ಪ (84) ಶುಕ್ರವಾರ ನಿಧನರಾಗಿದ್ದಾರೆ. ಮೃತರು ಪತ್ನಿ ಪದ್ಮ, ಪುತ್ರರಾದ ಜಿಲ್ಲಾ ಸಹಕಾರ ಯೂನಿಯನ್ ಮಾಜಿ ನಿರ್ದೇಶಕ ಕುಮಾರಸ್ವಾಮಿ, ಈಶ್ವರಿ ಟ್ರಾಕ್ಟರ್ ಪಾಲುದಾರ ಪ್ರಶಾಂತ್, ಆರೋಗ್ಯ ಇಲಾಖೆಯ ಮೇಲ್ವಿಚಾರಕರಾದ ಮಹದೇವಪ್ರಸಾದ್ ಹಾಗೂ ಸಹೋದರ ತಾಪಂ ಮಾಜಿ ಸದಸ್ಯ ಸದಾಶಿವಮೂರ್ತಿ ಸೇರಿದಂತೆ ಅಪಾರ ಬಂದು– ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ನಾಳೆ ಶನಿವಾರ ಮಧ್ಯಾಹ್ನ ಸ್ವಗ್ರಾಮ ನಂಜೇದೇವನಪುರದ ಅವರ ತೋಟದಲ್ಲಿ ನಡೆಯಲಿದೆ ಎಂದು ಸಂಬಂಧಿಕರು ತಿಳಿಸಿದ್ದಾರೆ.

ವರ್ಗೀಕೃತ ಜಾಹೀರಾತು

ಪ್ರತಿ ಸೋಮವಾರ, ಗುರುವಾರ ಮತ್ತು ಶನಿವಾರ ರೂ. 600 + 30 ಮಾತ್ರ

ಜಾಹೀರಾತಿಗೆ ಸಂಪರ್ಕಿಸಿ 0821–2496522/23

Life Partner ಆಗಲು ಶ್ರೀಮಂತ **Govt. Job** ವರನಿಗೆ 2ನೇ ಸಂಬಂಧಕ್ಕೆ ವಧು ಬೇಕಾಗಿದ್ದಾರೆ

ಲಿಂಗಾಯತ 50/5.5/BA, B.Ed, BPEd., Salary 1 ಲಕ್ಷಕ್ಕಿಂತ ಅಧಿಕ Well Settled, ಹೊಲ/ತೋಟ/ ಹೊಂದಿರುವ Independent ಮಕ್ಕಳಿಲ್ಲದಂತಹ ವಿಚ್ಛೇದಿತ ವರನಿಗೆ 2ನೇ ಸಂಬಂಧಕ್ಕೆ ವಿಧವೆ/ವಿಚ್ಛೇದಿತೆ/ ನೌಕರಸ್ಥೆ/ವ್ಯಾಪಾರಸ್ಥೆ/ವಧು ಬೇಕಾಗಿದ್ದಾರೆ. ಯಾವುದೇ ಜಾತಿಯ ಅಭ್ಯಂತರವಿಲ್ಲ. ಮಕ್ಕಳಿದ್ದರೂ ಪರವಾಗಿಲ್ಲ(ಸರಳ ವಿವಾಹಕ್ಕೆ ಮೊದಲ ಆದ್ಯತೆ.)

ಮೈಸೂರು : 9742458242

ಬೇಕಾಗಿದ್ದಾರೆ

ಮೈಸೂರಿನ ಕುವೆಂಪುನಗರದಲ್ಲಿರುವ ಸುಸಜ್ಜಿತವಾದ ವೃದ್ಧಾಶ್ರಮ (OLD AGE HOME)ಗೆ ವಯಸ್ಸಾದ ವೃದ್ಧರನ್ನು ನೋಡಿಕೊಳ್ಳಲು 2 ವರ್ಷ ಮೇಲ್ಪಟ್ಟು ಅನುಭವವಿರುವ ನುರಿತ ನರ್ಸ್ ಅಥವಾ ದಾದಿಯರು M/F ಬೇಕಾಗಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ:

7353430309

LAND FOR SALE

Mysore Bangalore Highway
Near toll plaza
Total 28 Guntas
General property
18 kms from Manipal
Hospital Contact:

7899871415

Bank Auction Property Consultant

Buy bank auction properties safely & legally. Legal verification / bank coordination / bidding support, registration assistance. Price will be below the market value & reasonable.

8553050040, 6364554306

ಬಾಡಿಗೆಗೆ

INDUSTRIAL SHED/ GODOWN FOR RENT

200 mtrs from
Mys - Blr Express way,
Srirangapatna (Ganjam)
Total Area: 2500 Sqft.,
Building Area: 1800 Sqft.,

Call: 9901854422 9986306007

ಹೊಸ ಮನೆ ಮಾರಾಟಕ್ಕಿದೆ

50x40 Duplex
Preeti Layout, Near Malegalada Maramma Temple, Ring Road, Srirampura, Mysore

9945615736

ಸೈಟ್ ಮಾರಾಟಕ್ಕಿದೆ

30x50(ರಿವಿನ್ಯೂ)
ವಿಜಯನಗರ 2ನೇ ಹಂತ
(ವಿದ್ಯಾವರ್ಧಕ ಇಂಜಿನಿಯರ್ ಕಾಲೇಜು ಹಿಂಭಾಗ)

9886651605

ಮೂಲ ಹಕ್ಕು ಪತ್ರ ಕಳೆದಿದೆ

ಕೊಳ್ಳೇಗಾಲ ತಾ|| ಸಿದ್ದಯ್ಯನಪುರ ಗ್ರಾಮದ ನಿವಾಸಿಯಾದ ಶಿವ ಎಂಬುವವರಿಗೆ ಸೇರಿದ ನಿವೇಶನ ಸಂಖ್ಯೆ 28ರ ಮೂಲ ಹಕ್ಕು ಪತ್ರ ಕಳೆದಿರುತ್ತದೆ. ಈ ಹಕ್ಕುಪತ್ರ ಯಾರಿಗಾದರೂ ಸಿಕ್ಕಿದಲ್ಲಿ ಈ ಕೆಳಕಂಡ ನಂಬರ್‌ನ್ನೂ ಸಂಪರ್ಕಿಸಿ:

9964881621

40X60
site sale, University Layout, Call

9880273834

SITE FOR SALE

ಪೊಲೀಸ್ ಬಡಾವಣೆ 30x40
ಸಾತಗಳ್ಳಿ ಬಡಾವಣೆ 30x40
ಕಿಂಗ್ ಸಿಟಿ 30x40
ಪ್ಯಾರಾಡೈಸ್ ಎನ್‌ಕ್ಲೇವ್ 30x40

Mob: 9448447035

FOR SALE

MUDA site - 40x60
Vijayanagar 2nd Stage
Good Location
Genuine Buyers only

Call: 9164208890

NO BROKERAGE

MUDA/DTCP SITES

ತಕ್ಷಣ ಮನೆ ಕಟ್ಟಲು ನಮ್ಮ ಲೇಔಟ್‌ನಲ್ಲಿ
ಬನ್ನೂರು ಮೇನ್ ರೋಡ್ 24–30 ಲಕ್ಷ
ಹೊಸೂರು ರಸ್ತೆ, ಇಲವಾಲ 27–36 ಲಕ್ಷ
ಬೋಗಾದಿ ರಸ್ತೆ 32–54 ಲಕ್ಷ
ಲಲಿತಾದ್ರಿಪುರ ರಿಂಗ್ ರಸ್ತೆ 34–45.5 ಲಕ್ಷ
ಹೆಬ್ಬಾಳ ಇನ್ಫೋಸಿಸ್ ಹತ್ತಿರ 36–55 ಲಕ್ಷ

81230 75038
Broker Excuse

ಮೈಸೂರಿನಾದ್ಯಂತ ಕಂಪನಿಗಳಿಗೆ ಮನೆಯಿಂದಲೇ ಕೆಲಸ ಡೇಟಾ ಎಂಟ್ರಿ ಪ್ಯಾಕಿಂಗ್ ಕೆಲಸಗಳಿಗೆ ನೇರ ಆಯ್ಕೆ. 20,000 ದಿಂದ ಕೊರಿಯರ್ ಲಭ್ಯವಿದೆ.

9964322833
9742133993

ಛತ್ರ ಕಾಲಿ ಇದೆ

ಜಯಮ್ಮ ಗೋವಿಂದೇಗೌಡ ಕಲ್ಯಾಣ ಮಂಟಪ
ದಿನಾಂಕ : 19–04–2026 ಹಾಗೂ 20–04–2026
ಕುವೆಂಪುನಗರ, ಮೈಸೂರು

9880111112
9900666920

ಸೈಟು ಮಾರಾಟಕ್ಕಿದೆ

20x30
ಪಶ್ಚಿಮದಿಕ್ಕು
ಲಾಲ್‌ಬಹದ್ದೂರ್‌ಶಾಸ್ತ್ರಿ ನಗರ, ಸಂಪರ್ಕಿಸಿ,

9844588066

ಬೇಕಾಗಿದ್ದಾರೆ

ಬಾರ್ ಅಂಡ್ ರೆಸ್ಟೋರೆಂಟ್‌ನಲ್ಲಿ ಕೆಲಸ ಮಾಡಲು ಹುಡುಗರು ಬೇಕಾಗಿದ್ದಾರೆ. ಸ್ಥಳ : ಹೆಬ್ಬಾಳ್ ಮೈಸೂರು, ಸಂಪರ್ಕಿಸಿ:

8105421199
8892736969

WANTED

Computer Basic Knowledge
Vijayanagar 4th Stage

M: 90085 80560

ಕೆಲಸಕ್ಕೆ ಬೇಕಾಗಿದ್ದಾರೆ

ಪ್ರತಿಷ್ಠಿತ ಬಾರ್ ಅಂಡ್ ರೆಸ್ಟೋರೆಂಟ್‌ನಲ್ಲಿ ಕೌಂಟರ್ ಬಿಲ್ಲಿಂಗ್ ಮಾಡಲು ಮತ್ತು ಸಪ್ಲೈಯರ್‌ಗಳು ಬೇಕಾಗಿದ್ದಾರೆ. ಊಟ ವಸತಿ ಸೌಲಭ್ಯವಿರುತ್ತದೆ.

9739259781
9449651240

ಜಮೀನು ಮಾರಾಟಕ್ಕಿದೆ

ಮೈಸೂರಿನ RT ನಗರ ರಿಂಗ್ ರೋಡ್‌ನಿಂದ ಕೇವಲ 3 KM ದೂರದಲ್ಲಿರುವ ಬಲ್ಲಹಳ್ಳಿಯಲ್ಲಿ (Yellow Zone) 8.5 ಎಕರೆ ಭೂಮಿ Fencing 3 Borewell Labour House ಹಾಗೂ ತೋಟ ಶಂಕರ ನಗರ ಲೇಔಟ್ ಹತ್ತಿರ
'ಮಧ್ಯವರ್ತಿಗಳಿಗೆ ಅವಕಾಶವಿಲ್ಲ'

9036284426

Sarojani Funland Urgent Hiring

Playzone attendant required immediately
* Supervise kids play area * Handle tickets & token. Call now:

6360921458

Immedaite joining / attractive salary.

ಬೇಕಾಗಿದ್ದಾರೆ

ಕೆಲ್ಲಟ್ಟಿ ಕಿಚನ್ ವೆಜ್‌ಕೆಫೆಗೆ 4 ಸಿಬ್ಬಂದಿ, ಕರ್ತವ್ಯಗಳು
* ತರಕಾರಿ ಹೆಚ್ಚುವವರು
* ರೊಟ್ಟಿ ಮಾಡುವವರು
ಕುವೆಂಪುನಗರದಲ್ಲಿ
ಬೆಳಗ್ಗೆ 6 ರಿಂದ ಸಂಜೆ 3
ಮಧ್ಯಾಹ್ನ 1 ರಿಂದ ರಾತ್ರಿ 10

9986758555

SITE FOR SALE

25x80, Two Sides Corner SITE in Kuvempunagar "M" Block Behind RMP Quarters, Mysore

9036859766

FOR SALE

40x60, MUDA Auction Site @ Vijayanagar 4th Stage, 1st Phase.
100x55 E/F @ Vijayangar 4th Stage, 2nd Phase, 80 Ft Road. 65x40 House for Sale at Yadavagiri 4th Cross.
10 Acres Land near Talakad

Call: 7411363509

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ

Mob: 9535175624

ತಕ್ಷಣ ಬೇಕಾಗಿದ್ದಾರೆ

ಕುವೆಂಪುನಗರ ಸರಸ್ವತಿಪುರಂ ಏರಿಯಾದಲ್ಲಿ ಕೆಲಸ ಮಾಡಲು ಸೆಕ್ಯೂರಿಟಿ ಗಾರ್ಡುಗಳು ಬೇಕಾಗಿದ್ದಾರೆ.
ವಿದ್ಯಾರ್ಹತೆ : SSLC
ಸಂಬಳ : 21,000/-
ಊಟ, ತಿಂಡಿ ಸೌಲಭ್ಯವಿರುತ್ತದೆ.

9620777819
9620667819

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ

Mob: 9535361279

ಸೈಟು ಮಾರಾಟಕ್ಕಿದೆ

30 X 50 E/ F
ಯಶ್ ಮೆಗಾಸಿಟಿ
ಮೈಸೂರು–ಹುಣಸೂರು ರಸ್ತೆ

7338445482

ಸಂಪು ಮತ್ತು ಟ್ಯಾಂಕ್ ಕ್ಲೀನಿಂಗ್‌ಗಾಗಿ ಸಂಪರ್ಕಿಸಿ

Mob: 9108048064

SITE BUY & SALE

MUDA Approved
Ananda Sagara
Pragathi Nagar
Nityanand Sagara
Paramanand Sagara
Kuberananda Sagara
30x40, 50x80 & 40x60

JK 8951144240

WANTED

MYSORE DIAGNOSTIC CENTRE PVT LTD.
Sayyaji Roa Road, Opp. Sathyanaraya Temple, Mysore.
Reception Staff Girls & Boys, Qualification : SSLC/PUC Passed
Contact No

9243781908
9243781906

ಮಹಿಳೆಯರಿಗೆ

ಆಫೀಸ್ ಕೆಲಸ, ಟೆಲಿಕಾಲಿಂಗ್ ಮತ್ತು ಮ್ಯಾನೇಜ್ಮೆಂಟ್ ಕೆಲಸಕ್ಕೆ ಮಹಿಳೆಯರು ಮತ್ತು ಹುಡುಗಿಯರು ಬೇಕಾಗಿದ್ದಾರೆ.

ಸಂಪರ್ಕಿಸಿ: 6364548607

SITE FOR SALE

30 X 40 E/ F
YASH MEGA CITY
MYSORE - HUNSUR ROAD

7338445413

ಅಡುಗೆಯವರು ಬೇಕಾಗಿದ್ದಾರೆ

ಮಾಂಸಾಹಾರಿ ಹೋಟೆಲ್‌ಗೆ ನಾಟಿ ಸ್ಟೈಲ್ ಅಡುಗೆ ಮಾಡುವ ಪುರುಷರು ಮತ್ತು ಮಹಿಳೆಯರು ಬೇಕಾಗಿದ್ದಾರೆ.

ಮೊ: 6364548607

FOR LEASE

2 BHK flat G/F, Vijayanagar 1st Stage, Near Yoga Narasimhaswamy Temple.
(BROKERS EXCUSE)

Mob: 9448322895

SITE FOR SALE

Dattagalli (ದಟ್ಟಗಳ್ಳಿ)
30x40 East face
40 Ft. Road.

Mob: 6361610427

BROKERS EXCUSE

ಉದ್ಯೋಗಾವಕಾಶ

ಪಾರ್ಟ್ ಟೈಮ್– 45+Age ನಿವೃತ್ತರು/ ಗೃಹಿಣಿಯರು/ ಹೆಚ್ಚಿನ ಆದಾಯಕ್ಕಾಗಿ ದಿನಾಂಕ 9–03–2026 ಸಮಯ ಬೆ. 10.30,
Place : Hotel Mourya Residency, Shree Harsha Road, ದಾಖಲಾತಿಗಳು : SSLC/ ಆಧಾರ್/ಪಾನ್ ಕಾರ್ಡ್

8762556332
9901628595

50X80
site sale, Roopa nagar, Call

9880273834

WANTED

Lady Graphics Designer - 01
5-6 years experience in Coreldraw and Photoshop.
Resume: swastikprintsigns@gmail.com
Whatsapp or call

9945425666, 9900260009

PREMIUM SITES FOR SALE NEAR MYSORE

Dattagalli attached KNS, MUDA approved, Kadakola DTCP approved opposite TVS. Martikyathanahalli MUDA approved attached village, Banglore Electronic City Phase 2, BDA approved layout.
CALL— LISHA PROPERTIES

Mob: 8151035074
90350 12579, 9731426321

ROYALS CLINIC

Wanted Receptionist and Telecallers - 5 mem. Salary 10000. Wanted tele callers For loans sector. Minimum experience 1 year - 2 mem.
Basic take home 12000

Call on 7348911669

ADRESS BOGADI MYSORE

ನಿವೇಶನಗಳು ಮಾರಾಟಕ್ಕಿವೆ

30x40 ಸೈಟ್, ಹುಣಸೂರು
40x60 ಸೈಟ್, ದಟ್ಟಗಳ್ಳಿ, ಮೈಸೂರು
50x90 ಕಡಕೊಳ ಟೋಲ್ ಬಳಿ
30x50 ಸೈಟ್ ಇಲವಾಲ ಬಳಿ
30x40 2 ಸೈಟ್ ಮನುಗನಹಳ್ಳಿ
30x40 ಗುರೂರು, ಮೈಸೂರು
30x40 ಮಂಡ್ಯ

Mob: 7349767393

50x80 Commercial Space for Rent

in Dattagalli 3rd Stage near Triveni Super Market and Mysuru Mylari Hotel Road.
Rs. 40 per sq.ft.

Mob: 8050273382

ಸ್ಟಾಕ್ ಮಾರ್ಕೆಟ್ ಇನ್ ಕನ್ನಡ

"INDIAN STOCK MARKET" ಬಗ್ಗೆ ಕನ್ನಡದಲ್ಲಿ ಅತಿ ಸರಳವಾಗಿ ಸುಲಭವಾಗಿ ಸಂಪೂರ್ಣ ಮಾಹಿತಿಯನ್ನು ತಿಳಿಸಿಕೊಡಲಾಗುತ್ತದೆ. ಟ್ರೈನಿಂಗ್ ಕ್ಲಾಸ್‌ನಲ್ಲಿ ಕೋಚಿಂಗ್ ಕೊಡಲಾಗುತ್ತದೆ. Basic Stock Market Fundamental, Technical and Candlestick Patterns ಅನ್ನು ಸುಲಭವಾಗಿ ಹೇಳಿಕೊಡಲಾಗುತ್ತದೆ ಹಾಗೂ ಪ್ರತಿನಿತ್ಯ ಹೇಗೆ ಸಂಪಾದನೆ ಮಾಡುವುದನ್ನು ಹೇಳಿಕೊಡಲಾಗುತ್ತದೆ. ಸಂಪರ್ಕಿಸಿ: ಈಶ್ವರ್

9902628421

ಬೇಕಾಗಿದ್ದಾರೆ

ದಿನಸಿ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗರು/ ಮಹಿಳೆಯರು ಬೇಕಾಗಿದ್ದಾರೆ. ಇಚ್ಛೆಯುಳ್ಳವರು ಸಂಪರ್ಕಿಸಿ:
ಬಾಲಕೃಷ್ಣ ಪ್ರಾವಿಷನ್ ಸ್ಟೋರ್ಸ್
ಕರ್ನಾಟಕ ಬ್ಯಾಂಕ್ ಹತ್ತಿರ, ನಜರ್‌ಬಾದ್, ಮೈಸೂರು–10

9739816440

ಖರೀದಿಗೆ ಜಮೀನು ಬೇಕಾಗಿದೆ

ಮೈಸೂರಿನಿಂದ 15 ಕಿ.ಮೀ ಅಂತರದಲ್ಲಿ 1–3 ಎಕರೆ ಜಮೀನು ಬೇಕಾಗಿದೆ. ಮಧ್ಯವರ್ತಿಗಳು ಕ್ಷಮಿಸಿ. ಸಂಪರ್ಕಿಸಿ:

Mob: 6364795551

FOR SALE
40x45 Duplex House@ Vijaya Nagar
40x60 Commercial Property @ Srirampura 80ft Road
20X30, 40X60 NEW HOUSE NEAR HARIVIDYALAYA, BOGADI
30x40 New House @ JP Ngr Siddlingeshwara Lyt,
G+3 House @ Aravind Nagar
PRAKRUTHI PROPERTIES

95386 90359, 90359 90359

ಸೈಟು ಮಾರಾಟಕ್ಕಿದೆ

20x30 ಸೈಟು, ಕ್ರೈಸ್ಟ್ ಪಬ್ಲಿಕ್ ಸ್ಕೂಲ್ ಹತ್ತಿರ.
30x40 ಯೂನಿವರ್ಸಿಟಿ ಲೇಔಟ್
40x60 ಸೈಟು ದಟ್ಟಗಳ್ಳಿ
20x30 ಮನೆ, ಗ್ರೌಂಡ್ + ಫಸ್ಟ್ ಫ್ಲೋರ್.
ಮಾರುವವರು, ಕೊಳ್ಳುವವರು ಸಂಪರ್ಕಿಸಿ:

Mob: 9945042875

FOR SALE

30x50 Sites Near RT Nagar Brahmins Lyt, 50ft & 60ft Road
20x30, 30x40 2,3 & 4 BHK New Construction as Per Your Plan Near Rainbow School, Bogadi
30x40 Site @ Dwaraka Ngr
2 & 3 BHK Apartments @ Ramakrishna Nagar.
Limited Offer for Bogadi Properties Only *T&C Apply
BOOK NOW & GET FREE REGISTRATION
PRAKRUTHI PROPERTIES

95386 90359, 90359 90359

FOR SALE

1) Vijayanagar 1st Stage 40x60 East facing.
2) Vijayanagar 2nd Stage, North facing site for sale.
3) Vijayanagar 1st Stage, 55x60 corner, op. Park location site for sale.

Mob: 9620607232

SITE FOR SALE

30x40, Site in ದಟ್ಟಗಳ್ಳಿಯಲ್ಲಿ Near KEB Circle, 70 Lakhs. with Loan ಸಹಿತ Plan: Elivation ಸಹಿತ ಮನೆ ಕೂಡ Construction ಮಾಡಿ ಕೊಡುತ್ತೇವೆ.

9620528490

ಹೋಟೆಲ್ ಕೆಲಸಕ್ಕೆ ಬೇಕಾಗಿದ್ದಾರೆ

ಹುಡುಗರು/ಹೆಂಗಸರು ಬೇಕಾಗಿದ್ದಾರೆ. ಪಾರ್ಸಲ್ ಕೌಂಟರ್, ದೋಸೆ ಭಟ್ಟರು ಚೈನೀಸ್ ಮಾಸ್ಟರ್. ದೋಸೆ ಹಿಟ್ಟು ರುಬ್ಬುವವರು ತರಕಾರಿಗಳ ಕತ್ತರಿಸುವವರು ಬೇಕಾಗಿದ್ದಾರೆ.

9513027677

ಸೈಟು ಮಾರಾಟಕ್ಕಿದೆ

30x40 ಪಶ್ಚಿಮ ದಿಕ್ಕು ಕೆ.ಎಸ್.ಆರ್.ಟಿ.ಸಿ. ಲೇಔಟ್, ಕೋಟೆಹುಂಡಿ ಹತ್ತಿರ, ಶ್ರೀರಾಂಪುರ. ಸೈಟ್ ನಂ. 51.

Mob: 8660314760

ಸಂಪು ಮತ್ತು ಟ್ಯಾಂಕ್ ಸೋಲಾರ್ ಸರ್ವೀಸ್

8197383645, 9008711654



SUNZONE SOLAR SYSTEM
VM Double Road, Kuvempunagar, Mysuru

9845175443

ಸಂಪು ಹಾಗೂ ಟ್ಯಾಂಕ್ ಕ್ಲೀನಿಂಗ್ ಮತ್ತು ಸೋಲಾರ್ ಸರ್ವೀಸ್‌ಗಾಗಿ ಸಂಪರ್ಕಿಸಿ

Mob: 9964733988

ಮೊಬೈಲ್‌ನಲ್ಲಿ ಕೆಲಸ ವಾರದ ಸಂಬಳ

NO TARGET, TYPING WORK
ತಿಂಗಳಿಗೆ ರೂ.10,000 ರಿಂದ ರೂ.25,000 ಗಳಿಸಬಹುದು.

8884439666

ತಕ್ಷಣ ಬೇಕಾಗಿದ್ದಾರೆ

1) ಹೌಸ್‌ಕೀಪಿಂಗ್– ಹುಡುಗರು ರಾತ್ರಿ ಪಾಳಯಕ್ಕೆ ಸ್ಥಳ : ಎಲೆ ತೋಟ, ವಿದ್ಯಾರಣ್ಯಪುರಂ, ಹಿನಕಲ್, ವಿಜಯನಗರ. 2) ಹೆಲ್ಪರ್ಸ್– ಹುಡುಗರು (ನಂಜನಗೂಡು). ESI, PF ಮತ್ತು ಊಟದ ವ್ಯವಸ್ಥೆ ಇರುತ್ತದೆ.

7795162227

ಬೇಕಾಗಿದ್ದಾರೆ

ದಿನಸಿ ಅಂಗಡಿಯಲ್ಲಿ ಕೆಲಸ ಮಾಡಲು ಅನುಭವವುಳ್ಳ ಹುಡುಗರು/ ಮಹಿಳೆಯರು ಬೇಕಾಗಿದ್ದಾರೆ. ಇಚ್ಛೆಯುಳ್ಳವರು ಸಂಪರ್ಕಿಸಿ:
ಬಾಲಕೃಷ್ಣ ಪ್ರಾವಿಷನ್ ಸ್ಟೋರ್ಸ್
ಶಿಶ್ಕರಣಿ ಸ್ಕೂಲ್ ಪಕ್ಕ, ಹೆಬ್ಬಾಳ್

9916520111

ಬೇಕಾಗಿದ್ದಾರೆ

ಪೆಟ್ರೋಲ್‌ಬಂಕ್‌ನಲ್ಲಿ ಹೆಲ್ಪರ್ ಮತ್ತು ಕ್ಯಾಷಿಯರ್ ಕೆಲಸ ಮಾಡಲು ಹುಡುಗರು ಮತ್ತು ಹುಡುಗಿಯರು ಬೇಕಾಗಿದ್ದಾರೆ. ಸ್ಥಳ: ವಿಜಯನಗರ ವಾಟರ್ ಟ್ಯಾಂಕ್ ಹತ್ತಿರ, ಮೈಸೂರು ನಗರ

6364748485

RS CONSTRUCTION ENGINEERS & CONTRACTORS

ನಿಮ್ಮ ಕನಸಿನ ಮನೆಯನ್ನು ಉತ್ಕೃಷ್ಟ ಗುಣಮಟ್ಟದಲ್ಲಿ ಅತ್ಯಂತ ಕಡಿಮೆ ಬೆಲೆಯಲ್ಲಿ ನಾವು ನಿರ್ಮಿಸಿ ಕೊಡುತ್ತೇವೆ. ದರ 1.85.000/– ಪ್ರತಿ ಚದರ ಉಚಿತ ಪ್ಲಾನ್ ಕೂಡ ಮಾಡಿಕೊಡಲಾಗುತ್ತದೆ. ಇಂದೇ ಸಂಪರ್ಕಿಸಿ

9538575009
7019151884

ವಧು–ವರಾನ್ವೇಷಣೆ

ಒಕ್ಕಲಿಗ/ಕುರುಬ/ಲಿಂಗಾಯತ, ನಾಯಕ/ SC & ಎಲ್ಲಾ ಜಾತಿಯ ವಧು–ವರರಿಗಾಗಿ ಕೂಡಲೇ ಸಂಪರ್ಕಿಸಿ
(II Marriages Also)

9343175000

ಬೇಕಾಗಿದ್ದಾರೆ

Wanted Driver for mineral water supply
ಗೂಡ್ಸ್ ವಾಹನಕ್ಕೆ ಡ್ರೈವರ್ ಬೇಕಾಗಿದ್ದಾರೆ. (ಟಾಟಾ ಏಸ್). ಸ್ಥಳ, ಶ್ರೀರಾಂಪುರ.

9845587877

MIT REQUIRED

Car Parking Reception Only 3 female New or experience Travel manager 5 years experience required, pls contact

9945203003
08214247111

ಅಡುಗೆಯವರು ಬೇಕಾಗಿದ್ದಾರೆ

ಮೈಸೂರು ಶೈಲಿಯ ಸೌತ್ ಇಂಡಿಯನ್ ಅಡುಗೆ ಭಟ್ಟರು ಬೇಕಾಗಿದ್ದಾರೆ. ಆಸಕ್ತರು ಸಂಪರ್ಕಿಸಿ

9945206442

ಬೇಕಾಗಿದ್ದಾರೆ

ಮಡಿಕೇರಿ– ಮಂಗಳೂರು ಹಾಗೂ ಮಡಿಕೇರಿ – ಮೈಸೂರು ಮಾರ್ಗಗಳಲ್ಲಿ ಪ್ರತಿನಿತ್ಯ ಸಂಚರಿಸುವ ಲಾರಿಗಳಲ್ಲಿ ಪಾರ್ಸೆಲ್ ವಿತರಣೆ ಮಾಡಲು ಓದು ಬರಹ ತಿಳಿದಿರುವ ಯುವಕರು ಬೇಕಾಗಿದ್ದಾರೆ. ಡೆಲಿವರಿ ಬಾಯ್ ಆರಂಭಿಕ ವೇತನ 16000 + ಲೋಡಿಂಗ್ ಚಾರ್ಜ್. ಪ್ರತೀ ಭಾನುವಾರ ರಜೆ.

ಸಂಪರ್ಕಿಸಿ : 9740408488

SITE FOR SALE

30x40 Judicial Layout

9886207959

ಬೇಕಾಗಿದ್ದಾರೆ

ಮೈಸೂರಿನ ಹೆಬ್ಬಾಳ್ ಇಂಡಸ್ಟ್ರಿಯಲ್ ಏರಿಯಾ ಇಲ್ಲಿನ ಕಾರ್ಖಾನೆಗೆ ಹೆಲ್ಪರ್ ಕೆಲಸ, ಜನರಲ್ ಶಿಫ್ಟ್ (8.30 ರಿಂದ 5 ಗಂಟೆ) ಹುಡುಗರು ಬೇಕಾಗಿದ್ದಾರೆ.
Age : 18ರಿಂದ 40 ವರ್ಷ ತಿಂಗಳಿಗೆ ವೇತನ Take Home : 14600 ರೂ. ESI, PF ಕ್ಯಾಂಟೀನ್ ವಾರದ ರಜೆ ಇರುತ್ತದೆ. ಸಂಪರ್ಕಿಸಿ

9731976148

ಬೇಕಾಗಿದ್ದಾರೆ

ಮೈಸೂರಿನ ದಟ್ಟಗಳ್ಳಿ ಸುತ್ತಾಮುತ್ತಾ ಕಾರ್ಯ ನಿರ್ವಹಿಸಲು ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ವಯಸ್ಸು 18–45, ESI & PF ಸೌಲಭ್ಯ ಇರುತ್ತದೆ.
ನಿಮಿಷಾಂಬ ಸೆಕ್ಯೂರಿಟಿ ಬ್ಯೂರೋ ಮತ್ತು ಯುಟಿಲಿಟಿ ಸರ್ವೀಸಸ್, # 380/ಎ, 2ನೇ ಮಹಡಿ, ಕೃಷ್ಣ ವಿಲಾಸ ರಸ್ತೆ, ಮೈಸೂರು,

9606023463

DTCP SITES FOR SALE

THALUR CIRCLE, OFF SRIRAMPURA RING ROAD, HD KOTE RDAD, MYSURU.
₹1800/- per Sft.

9606966006

ತಕ್ಷಣ ಬೇಕಾಗಿದ್ದಾರೆ

ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಹುಡುಗಿಯರು ಮಹಿಳೆಯರು ಬೇಕಾಗಿದ್ದಾರೆ, ಸಮಯ ಬೆಳಗ್ಗೆ 10 ರಿಂದ ರಾತ್ರಿ 8:30. ಸ್ಥಳ : ನಜರ್‌ಬಾದ್ ಹಾಗೂ ಹೆಬ್ಬಾಳ್, ಮೈಸೂರು. ಸಂಪರ್ಕಿಸಿ:

9986322444
9986311444

ಮಾರಾಟಕ್ಕಿದೆ

ಹೂಟಗಳ್ಳಿ ಸೈಟ್ ಮಾರಾಟಕ್ಕಿದೆ 70x50
30x40 ಸೈಟ್ ಮಾರಾಟಕ್ಕಿದೆ
20x30 ಮನೆ ಮಾರಾಟಕ್ಕಿದೆ

9008711654

ನಿವೃತ್ತ ನೌಕರರಿಗೆ ಉದ್ಯೋಗಾವಕಾಶ ಸೆಮಿನಾರ್

ಭಾರತದ ಅತ್ಯಂತ ವಿಶ್ವಾಸಾರ್ಹ ಬ್ಯಾಂಕ್ ಸಮೂಹ ಸಂಸ್ಥೆಯಲ್ಲಿ ಉದ್ಯೋಗ ಮತ್ತು Business ಅವಕಾಶದ ಸೆಮಿನಾರ್ ಏರ್ಪಡಿಸಲಾಗಿದೆ. Benefits: Fixed Salary + PF+ESI + ಇತರೆ ಭತ್ಯೆಗಳು ಲಭ್ಯವಿರುತ್ತದೆ. ಬೇಕಾಗುವ ದಾಖಲಾತಿಗಳು : ಎಸ್.ಎಸ್.ಎಲ್.ಸಿ, ಮಾರ್ಕ್ಸ್ ಕಾರ್ಡ್, ಫೋಟೋ, ಪಾನ್‌ಕಾರ್ಡ್, ಆಧಾರ್‌ಕಾರ್ಡ್, ಬ್ಯಾಂಕ್ ಪಾಸ್ ಪುಸ್ತಕ ಸ್ಥಳ : ಮೌರ್ಯ ರೆಸಿಡೆನ್ಸಿ
Time 11.00am, Date : 9-3-2026
Fallowed by Lunch

9448376423/ 9886883858

ತಕ್ಷಣ ಬೇಕಾಗಿದ್ದಾರೆ

ನಂಜನಗೂಡಿನ ಬಳಿ ಇರುವ ಚಿಕ್ಕಯ್ಯನ ಛತ್ರ ಇಂಡಸ್ಟ್ರಿಯಲ್ ಏರಿಯಾದಲ್ಲಿ ಹೆಲ್ಪರ್ಸ್ ಕೆಲಸ ಮಾಡಲು ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ. 08 ಗಂಟೆಗಳ ಕೆಲಸದ ಅವಧಿ, ವಾರದ ರಜೆ, ESI+PF +ಆಕರ್ಷಕ ವೇತನ, ವಾರ್ಷಿಕ ಬೋನಸ್, ಸೌಲಭ್ಯ ಇರುತ್ತದೆ. (ಆಸಕ್ತಿಯುಳ್ಳವರು) OT ಮಾಡಲು ಅವಕಾಶ ಇರುತ್ತದೆ. ಸಂಪರ್ಕಿಸಿ

7019378337
8884204612

ಮಾರಾಟಕ್ಕೆ ಮನೆ

ಮೈಸೂರು ನಗರದ ವಿಜಯನಗರ 4ನೇ ಹಂತ, 3ನೇ ಫೇಸ್ ಸಮೀಪದ ಪರ್ಲ್ ಹ್ಯಾಬಿಟಾಟ್ ಲೇಔಟ್ ನಲ್ಲಿ ಮನೆ ಮಾರಾಟಕ್ಕೆ ಲಭ್ಯ.
• 30x50 ಅಡಿ ಸೈಟ್ • G+2 ಮಹಡಿ ನಿವಾಸಿ ಮನೆ • ಪಶ್ಚಿಮಮುಖಿ ಸೈಟ್ • ಉತ್ತರಮುಖಿ ಮುಖ್ಯ ಬಾಗಿಲು • ಉತ್ತಮ ವಾಸಸ್ಥಳ ಹಾಗೂ ಸುಗಮ ರಸ್ತೆ ಸೌಲಭ್ಯ. ಆಸಕ್ತರು ಸಂಪರ್ಕಿಸಿ:

99866 21579

ಸೈಟು/ಮನೆ/ಮಾರಾಟ/ಬಾಡಿಗೆಗೆ

30x50 Karle Habitate ಲಿಂಗಾಂಬುಧಿ ಪಾಳ್ಯ
30x40 ಸೈಟ್ ಸಾತಗಳ್ಳಿ 2ನೇ ಹಂತ, ಹಂಚ್ಯಾ ರೋಡ್
30x50 ಪರಶುರಾಮನಗರ ಬನ್ನೂರು ರೋಡ್
20x30 3 BHK Duplex House Saleಗೆ ಲಲಿತಾದ್ರಿನಗರ, Muda Site ನಲ್ಲಿ ಕಟ್ಟಿರುವ ಮನೆ
40x60 2 BHK ಕಾರ್ Parking ಸ್ವತಂತ್ರವಾದ H ಬ್ಲಾಕ್, ರಾಮಕೃಷ್ಣನಗರದಲ್ಲಿ ಬಾಡಿಗೆಗೆ ಇದೆ.

9448938989
7892035789

ಮೈಸೂರು ಮಿತ್ರ ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಸೋಮವಾರ ಗುರುವಾರ ಶನಿವಾರ
ಪ್ರತಿ ಜಾಹೀರಾತಿಗೆ ರೂ. 630 ಮಾತ್ರ

ಸಾವಿರಾರು ಭಕ್ತರಿಗೆ ಶ್ರೀಉಕ್ಕಿನಕಂತೆ ಮಠ ದಾರಿದೀಪ

ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಬಣ್ಣನೆ



ಕಾರ್ಯಕ್ರಮವನ್ನು ಸುತ್ತೂರು ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಉದ್ಘಾಟಿಸಿದರು.

ಹುಣಸೂರು, ಮಾ.6– ನೂರಾರು ವರ್ಷಗಳಿಂದ ಬಸ್ಮವನ್ನೇ ಪ್ರಸಾದವಾಗಿ ನೀಡಿ ಸಾವಿರಾರು ಭಕ್ತರಿಗೆ ಮಾದಹಳ್ಳಿ ಶ್ರೀಉಕ್ಕಿನಕಂತೆ ಮಠ ದಾರಿದೀಪವಾಗಿದೆ ಎಂದು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ತಿಳಿಸಿದರು.

ತಾಲೂಕಿನ ಮಾದಹಳ್ಳಿ ಶ್ರೀಉಕ್ಕಿನ ಕಂತೆ ಮಠದಲ್ಲಿ ನಡೆದ ಶ್ರೀಗುರು ಬೂದಿ ಸ್ವಾಮಿಗಳ 397ನೇ ಆರಾಧನೆ, 63 ಪ್ರಮಥರ ಪೂಜೆ, ಶ್ರೀಮಠದ ನೂತನ ಕಟ್ಟಡ, ನವೀಕೃತ 16 ಗದ್ದುಗೆಗಳು, ಶತಾಯುಷಿ ಶ್ರೀಸಿದ್ದಲಿಂಗಸ್ವಾಮಿಗಳ ಸಭಾಂಗಣ ಹಾಗೂ ಬಸವದ್ವಾರ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 2003ರಲ್ಲಿ ಅಧಿಕಾರ ವಹಿಸಿಕೊಂಡ ಮಠದ ಪೀಠಾಧ್ಯಕ್ಷ ಶ್ರೀಸಾಂಬಸದಾಶಿವ ಸ್ವಾಮೀಜಿ ಅವರು ಮಠವನ್ನು ಎಲ್ಲಾ ರೀತಿಯಲ್ಲೂ ಅಭಿವೃದ್ಧಿಪಡಿಸುತ್ತಿದ್ದಾರೆ. ಸಮಾಜದ ಏಳಿಗೆಗೆ ಶ್ರಮಿಸುವುದರ ಜೊತೆಗೆ ಮಕ್ಕಳಿಗೆ ಸಂಸ್ಕಾರಯುತ ಶಿಕ್ಷಣ ನೀಡುತ್ತಿದ್ದಾರೆ. ಬಸವಣ್ಣನವರು ಹೇಳಿರುವಂತೆ ದೇವರು ನಂಬಿರುವವರನ್ನು ಹೇಗೆ ಕೈಬಿಡುವುದಿಲ್ಲವೋ ಹಾಗೆ ನಾವು ಮಾಡುವ ಕಾಯಕ ಹಾಗೂ ದಾಸೋಹ ನಮ್ಮನ್ನು ಕಷ್ಟ ಕಾಲದಲ್ಲಿ ಕೈ ಹಿಡಿಯುತ್ತದೆ. ಮಠವು ಅನ್ನದ ಜೊತೆಗೆ ಮಕ್ಕಳಿಗೆ ಜ್ಞಾನ, ಸುತ್ತಮುತ್ತಲಿನ ಜನರಿಗೆ ದೇವಾಲಯವಾಗಿದೆ. ಸಮಾಜಮುಖಿ ಕಾರ್ಯಕ್ರಮಗಳನ್ನು ನಡೆಸುತ್ತಿರುವ ಇಲ್ಲಿನ ಮಠ ಸಮಾಜಕ್ಕೆ ಮಾದರಿಯಾಗಿದೆ ಎಂದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಮಾಜಿ ಶಾಸಕ ಹೆಚ್.ಪಿ.ಮಂಜುನಾಥ್, ಶ್ರೀಮಠ ಸಾವಿರಾರು ಭಕ್ತಾದಿಗಳಿಗೆ ನೆಮ್ಮದಿಯ ಆಶ್ರಯ ತಾಣವಾಗಿದೆ. ಮಠದೊಂದಿಗೆ ನನ್ನ ಕುಟುಂಬಕ್ಕೆ 45 ವರ್ಷಗಳ ನಿಕಟ ಸಂಪರ್ಕವಿದೆ. ನಾನು ಶಾಸಕನಾಗಿದ್ದ 10 ವರ್ಷಗಳ ಅವಧಿಯಲ್ಲಿ ಮಠ ತುಂಬಾ ಅಭಿವೃದ್ಧಿಯಾಗಿದೆ. 600 ವರ್ಷಗಳ ಇತಿಹಾಸವಿರುವ ಮಠ ಅಭಿವೃದ್ಧಿ ಪಡಿಸಲು ಸಿಕ್ಕಿರುವ ಅವಕಾಶ ನನ್ನ ಪೂರ್ವ ಜನ್ಮದ ಪುಣ್ಯ ಎಂದರು.

ಮಠವು ಸಾರ್ವಜನಿಕರಿಗೆ ಹತ್ತಿರವಾಗುವುದರ ಜೊತೆಗೆ ಮತ್ತಷ್ಟು ಬೆಳೆಯಲಿ. ನಾನು ಭಕ್ತನಾಗಿ ಮುಂದೆಯೂ ಕೂಡ ಮಠಕ್ಕೆ ಬೆನ್ನೆಲುಬಾಗಿ ನಿಲ್ಲುತ್ತೇನೆ. ಶ್ರೀಮಠಕ್ಕೆ ನಮ್ಮ ಅಳಿಲು ಸೇವೆ ನಿತ್ಯ ನಿರಂತರ ಎಂದರು.

ಇದೇ ವೇಳೆ ಸುತ್ತೂರು ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ಶ್ರೀಗುರು ಬೂದಿ ಸ್ವಾಮಿಗಳ ಗದ್ದಿಗೆ ಉದ್ಘಾಟಿಸಿದರು. ಶ್ರೀಗುರುಬೂದಿ ಸ್ವಾಮಿಗಳ ಭಾವಚಿತ್ರದ ಮೆರವಣಿಗೆಗೆ ಬೇಬಿ ಮಠದ ತ್ರಿನೇತ್ರ ಮಹಾಂತ ಶಿವಯೋಗಿ ಸ್ವಾಮೀಜಿ ಚಾಲನೆ ನೀಡಿದರು.

ಕಾರ್ಯಕ್ರಮದಲ್ಲಿ ಗುರುಲಿಂಗ ಜಂಗಮ ದೇವರ ಮಠದ ನಟರಾಜ ಸ್ವಾಮೀಜಿ, ಮೈಸೂರು ಹೊಸಮಠದ ಚಿದಾನಂದ ಸ್ವಾಮೀಜಿ ಮಾತನಾಡಿದರು. ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ತಾಲೂಕು ಅಧ್ಯಕ್ಷ ಸೋಮಶೇಖರ್, ಮಹಾಸಭಾ ಕೇಂದ್ರ ಸಮಿತಿ ಸದಸ್ಯ ಯು.ಎಸ್.ಬಸವರಾಜು, ದಾನಿಗಳಾದ ಯು.ಎಸ್.ಶೇಖರ್, ರುದ್ರೇಶ್, ಮುಖಂಡರಾದ ಆರ್.ವಿ.ಶ್ರೀಧರ್, ಟಿ.ಕೃಷ್ಣ, ಗಣೇಶ ಕುಮಾರಸ್ವಾಮಿ, ಮಹದೇವಸ್ವಾಮಿ, ಆನಂದ್, ಅಶೋಕ್, ರಮೇಶ್ ಹೆಚ್.ಎಸ್, ಡಾ.ವೃಷಭೇಂದ್ರಸ್ವಾಮಿ, ರಮೇಶ್, ಶಾಂತಕುಮಾರಿ ಸೇರಿದಂತೆ ಸಾವಿರಾರು ಭಕ್ತರಿದ್ದರು.

ಬಜೆಟ್ ಪ್ರತಿಕ್ರಿಯೆ

ಉತ್ತಮ ಬಜೆಟ್



ಸಿಎಂ ಸಿದ್ದರಾಮಯ್ಯ ಶುಕ್ರವಾರ ಮಂಡಿಸಿರುವ ಬಜೆಟ್ ಎಲ್ಲಾ ವರ್ಗದವರನ್ನು ಗಮನದಲ್ಲಿಟ್ಟುಕೊಂಡು ರೂಪಿಸಿರುವ ಉತ್ತಮ ಬಜೆಟ್. ಆಡು ಮುಟ್ಟದ ಸೊಪ್ಪಿಲ್ಲ ಎನ್ನುವಂತೆ ರೈತ, ವೈದ್ಯಕೀಯ, ಶಿಕ್ಷಣ ಸೇರಿದಂತೆ ಎಲ್ಲಾ ಕ್ಷೇತ್ರಕ್ಕೂ ಬಜೆಟ್‌ನಲ್ಲಿ ಪ್ರಾಮುಖ್ಯತೆ ಕೊಟ್ಟಿದ್ದಾರೆ. **–ಸುನೀಲ್ ಬೋಸ್, ಸಂಸದ.**

ಬಡವರ ಅಭಿವೃದ್ಧಿಗೆ ಪೂರಕವಾದ ಸುಸ್ಥಿರ ಬಜೆಟ್



ನಂಜನಗೂಡು, ಮಾ.6– ಮುಖ್ಯಮಂತ್ರಿ ಸಿದ್ದರಾಮಯ್ಯ ನವರು ಶುಕ್ರವಾರ ಮಂಡಿಸಿದ ರಾಜ್ಯ ಬಜೆಟ್ ಬಡವರ ಅಭಿ ವೃದ್ಧಿಗೆ ಪೂರಕವಾದ ದೂರ ದೃಷ್ಟಿಯ ಸುಸ್ಥಿರ ಬಜೆಟ್ ಆಗಿದೆ ಎಂದು ಶಾಸಕ ದರ್ಶನ್ ಧ್ರುವನಾರಾಯಣ್ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬಡವರ ಅಭಿವೃದ್ಧಿಗೆ ಪೂರಕವಾದ ಬಜೆಟ್ ರೂಪಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಅಭಿನಂದನೆ ಸಲ್ಲಿಸುತ್ತೇನೆ. ಈ ಬಾರಿಯ ಬಜೆಟ್‌ನಲ್ಲಿ ಜಯದೇವ ಆಸ್ಪತ್ರೆಯನ್ನು ಹೆಚ್ಚುವರಿ 200 ಹಾಸಿಗೆಗೆ ಮೇಲ್ದರ್ಜೆಗೇರಿಸುವುದಾಗಿ ಘೋಷಿಸಿದ್ದಾರೆ. ಇದರಿಂದ ಬಡವರಿಗೆ ಉತ್ತಮ ಗುಣಮಟ್ಟದ ಆರೋಗ್ಯ ಸೇವೆ ದೊರಕಲಿದೆ ಎಂದರು.

ಮೈಸೂರನ್ನು 2ನೇ ಐಟಿ ನಗರವಾಗಿ ಅಭಿವೃದ್ಧಿ: ಮೈಸೂರು ವಿಮಾನ ನಿಲ್ದಾಣದ ಬಳಿ ಐಟಿ ಟೆಕ್ ಪಾರ್ಕ್ ನಿರ್ಮಿಸುವುದಾಗಿ ಬಜೆಟ್‌ನಲ್ಲಿ ಘೋಷಿಸಿದ್ದಾರೆ. ಆ ಮೂಲಕ ಹೇಗೆ ಬೆಂಗಳೂರು ಐಟಿ–ಬಿಟಿ ನಗರವಾಗಿದೆ. ಅದೇ ಮಾದರಿ ಮೈಸೂರನ್ನು ಎರಡನೇ ಐಟಿ+ ಬಿಟಿ ನಗರವನ್ನಾಗಿ ಪರಿವರ್ತಿಸುವುದಾಗಿ ಘೋಷಿಸಿರುವುದು ಸಂತಸ ತಂದಿದೆ ಎಂದರು.

ನಂಜನಗೂಡಲ್ಲಿ ಶ್ರಮಿಕ್ ವಸತಿ ಶಾಲೆ ನಿರ್ಮಾಣ: ನಗರದಲ್ಲಿ ಹೊಸದಾಗಿ ಕಾರ್ಮಿಕ ಕಲ್ಯಾಣ ಇಲಾಖೆಯಿಂದ ನೂತನ ವಾಗಿ ಶ್ರಮಿಕ್ ವಸತಿ ಶಾಲೆ ನಿರ್ಮಿಸುವುದಾಗಿ ಬಜೆಟ್‌ನಲ್ಲಿ ಘೋಷಿಸಿದ್ದಾರೆ. ಅಂದಾಜು 33 ಕೋಟಿ ವೆಚ್ಚದಲ್ಲಿ ಈ ಶಾಲೆ ನಿರ್ಮಾಣವಾಗಲಿದೆ. ಜೊತೆಗೆ ಬಡವರ ಮಕ್ಕಳ ವಿದ್ಯಾಭ್ಯಾಸಕ್ಕೆ ಹೆಚ್ಚು ಒತ್ತು ನೀಡಿರುವ ಸಿಎಂ ಸಿದ್ದರಾಮಯ್ಯ ಶಾಲೆಗಳ ದುರಸ್ತಿ, ನೂತನ ಶಾಲಾ ಕೊಠಡಿ ನಿರ್ಮಾಣ ಕಾಮಗಾರಿಗಳಿಗೆ ಬಜೆಟ್‌ನ ಶೇ.10 ರಷ್ಟು ಅನುದಾನ ಮೀಸಲಿಟ್ಟಿದ್ದಾರೆ ಎಂದರು.

ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿಗಾಗಿ ಕಳೆದ ಬಜೆಟ್‌ನಲ್ಲಿ 4 ಸಾವಿರ ಕೋಟಿ ಮೀಸಲಿಡಲಾಗಿತ್ತು. ಈ ಬಾರಿ 5 ಸಾವಿರ ಕೋಟಿಗೆ ಏರಿಕೆ ಮಾಡಿ ಅನುದಾನ ಮೀಸಲಿಟ್ಟಿದ್ದಾರೆ. ಈ ಯೋಜನೆಯಡಿ ಕಳೆದ ಬಾರಿ 25 ಕೋಟಿ ನಂಜನಗೂಡು ಕ್ಷೇತ್ರಕ್ಕೆ ಅನುದಾನ ಬಂದಿತ್ತು. ಈ ಬಾರಿ ಮತ್ತೆ 30 ಕೋಟಿ ಅನುದಾನ ಬರುವ ನಿರೀಕ್ಷೆ ಇದೆ. ಇನ್ನು ಕೆ–ಸೆಟ್ ಯೋಜನೆಯಡಿ ರಾಜ್ಯ ಹೆದ್ದಾರಿಗಳ ಅಭಿವೃದ್ಧಿಗೆ ಮುಂದಾಗುವುದಾಗಿ ಬಜೆಟ್‌ನಲ್ಲಿ ಘೋಷಿಸಿದ್ದಾರೆ. ಈ ಯೋಜನೆಯಡಿ ತಾಲೂಕಿನ ಹೊಮ್ಮರಗಳ್ಳಿಯಿಂದ ಹುಲ್ಲಹಳ್ಳಿ, ಹುಲ್ಲಹಳ್ಳಿಯಿಂದ ನಂಜನಗೂಡು, ನಂಜನಗೂಡಿನಿಂದ ತಗಡೂರು, ತಗಡೂರಿನಿಂದ ಸಂತೆಮರಳ್ಳಿ ವರೆಗೆ ರಾಜ್ಯ ಹೆದ್ದಾರಿ ಅಭಿವೃದ್ಧಿಪಡಿಸಲು ಡಿಪಿಆರ್ ತಯಾರಿಕೆಗೆ ಬಜೆಟ್‌ನಲ್ಲಿ ಘೋಷಿಸಿದ್ದಾರೆ. ಇದರಿಂದ ನಂಜನಗೂಡು ಕ್ಷೇತ್ರದಿಂದ ವರುಣ ಮತ್ತು ಚಾಮರಾಜನಗರ ಕ್ಷೇತ್ರಕ್ಕೆ ಸಂಪರ್ಕ ಕಲ್ಪಿಸುವ ಹೆದ್ದಾರಿ ಅಭಿವೃದ್ಧಿಯಾಗಲಿದೆ. ಇನ್ನು ಶಾಲಾ ಕಾಲೇಜು ಮತ್ತು ವಿವಿಗಳಲ್ಲಿ ಜಾತಿ ನಿಂದನೆ ತಡೆಗಟ್ಟಲು ರೋಹಿತ್ ವೇಮುಲ ಪ್ರತಿಬಂಧಕ ಕಾಯ್ದೆ ಘೋಷಿಸಿರುವುದು ಅಭಿನಂದನಾರ್ಹ. 16 ವರ್ಷ ದೊಳಗಿನ ಮಕ್ಕಳಿಗೆ ಸಾಮಾಜಿಕ ಜಾಲತಾಣ ನಿರ್ಬಂಧಕ ಕಾಯ್ದೆ ಘೋಷಿಸಿರುವುದು ಶ್ಲಾಘನೀಯ ಎಂದರು.

ಇಂದು ಸಿಎಂ ಸಿದ್ದರಾಮಯ್ಯ ದೇವಾಲಯ ಉದ್ಘಾಟನೆ



ಹೆಚ್.ಡಿ.ಕೋಟೆ, ಮಾ.6– ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮಾ.7ರಂದು ಶನಿವಾರ ಹೆಚ್.ಡಿ.ಕೋಟೆಗೆ ಭೇಟಿ ನೀಡಲಿದ್ದು, ತಾಲೂಕಿನ ಶಿರಮಳ್ಳಿ ಗ್ರಾಮದಲ್ಲಿ ನೂತನವಾಗಿ ನಿರ್ಮಿಸಿರುವ ಶ್ರೀಲಕ್ಷ್ಮಿದೇವಿ (ಹುಚ್ಚಮ್ಮ) ದೇವಾಲಯವನ್ನು ಉದ್ಘಾಟಿಸಲಿದ್ದಾರೆ.

ನಂತರ ನಡೆಯುವ ವೇದಿಕೆ ಕಾರ್ಯಕ್ರಮದ ಸಾನಿಧ್ಯವನ್ನು ಶ್ರೀಕಾಗಿನೆಲೆ ಮಹಾಸಂಸ್ಥಾನ ಕನಕಗುರು ಪೀಠದ ನಿರಂಜನ ನಂದಪುರಿ ಸ್ವಾಮೀಜಿ, ಕೆ.ಆರ್.ನಗರ ಕಾಗಿನೆಲೆ ಶಾಖಾ ಮಠದ ಶಿವಾನಂದ ಪುರಿ ಸ್ವಾಮೀಜಿ ವಹಿಸಲಿದ್ದಾರೆ. ಶಾಸಕ ಅನಿಲ್ ಚಿಕ್ಕಮಾದು ಅಧ್ಯಕ್ಷತೆ ವಹಿಸಲಿದ್ದು, ಜಿಲ್ಲಾ ಉಸ್ತುವಾರಿ ಸಚಿವ ಹೆಚ್.ಸಿ.ಮಹದೇವಪ್ಪ, ಲೋಕೋಪಯೋಗಿ ಇಲಾಖೆ ಸಚಿವ ಸತೀಶ್ ಜಾರಕಿಹೊಳಿ, ಪಶು ಸಂಗೋಪನಾ ಸಚಿವ ಕೆ.ವೆಂಕಟೇಶ್, ನಗರಾಭಿವೃದ್ಧಿ ಸಚಿವ ಭೈರತಿ ಸುರೇಶ್, ಸಂಸದ ಸುನೀಲ್ ಬೋಸ್, ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ, ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ದೊಡ್ಡ ಸ್ವಾಮೇಗೌಡ, ಶಾಸಕರಾದ ಪುಟ್ಟರಂಗಶೆಟ್ಟಿ, ತನ್ವೀರ್ ಸೇಠ್, ಡಿ.ರವಿಶಂಕರ್, ಎ.ಆರ್.ಕೃಷ್ಣಮೂರ್ತಿ, ಗಣೇಶ್ ಪ್ರಸಾದ್, ದರ್ಶನ್ ಧ್ರುವನಾರಾಯಣ್, ಕೆ.ಹರೀಶ್‌ಗೌಡ, ಮಂಜುನಾಥ್, ಡಾ.ತಿಮ್ಮಯ್ಯ, ಅರಗು ಮತ್ತು ಬಣ್ಣ ನಿಗಮದ ಅಧ್ಯಕ್ಷ ಟಿ.ಡಿ.ಗಣೇಶ್, ಗ್ಯಾರೆಂಟಿ ಯೋಜನೆ ಉಪಾಧ್ಯಕ್ಷೆ ಪುಷ್ಪ ಅಮರನಾಥ್, ಮಾಜಿ ಸಚಿವ ಎಂ.ಶಿವಣ್ಣ, ಮಾಜಿ ಶಾಸಕ ಚಿಕ್ಕಣ್ಣ, ಮೈಮುಲ್ ಅಧ್ಯಕ್ಷ ಕೆ.ಈರೇಗೌಡ, ಕುರುಬ ಸಮಾಜದ ಜಿಲ್ಲಾಧ್ಯಕ್ಷ ಶಿವಪ್ಪ ಕೋಟೆ, ತಾಲೂಕು ಅಧ್ಯಕ್ಷ ಎಂ.ಬಿ.ಆನಂದ್, ಇತರ ಗಣ್ಯರು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

ಬೋರೇಗೌಡ ನಿಧನ



ಹುಣಸೂರು, ಮಾ.6– ತಾಲೂಕಿನ ಹಿಂಡಗೂಡ್ಲು ಗ್ರಾಮದ ನಿವಾಸಿ ಬೋರೇಗೌಡ(85) ಗುರುವಾರ ರಾತ್ರಿ ನಿಧನರಾದರು. ಮೃತರು ಜೆಡಿಎಸ್ ಮುಖಂಡ ರಾಜೇಗೌಡ ಸೇರಿದಂತೆ ಇಬ್ಬರು ಪುತ್ರರು, ಓರ್ವ ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಸ್ವಗ್ರಾಮದ ಮೃತರ ತೋಟದಲ್ಲಿ ನಡೆಯಿತು.

ರಂಜಾನ್ ಶಾಂತಿ–ಸೌಹಾರ್ದತೆಯ ಸಂಕೇತ


ಸಂಸದ ಸುನೀಲ್ ಬೋಸ್ ಆಹಾರದ ಕಿಟ್ ವಿತರಿಸಿದರು.

ತಿ.ನರಸೀಪುರ, ಮಾ.6– ರಂಜಾನ್ ಮುಸ್ಲಿಂ ಬಾಂಧವರ ಪವಿತ್ರ ಹಬ್ಬವಾಗಿದ್ದು, ಶಾಂತಿ–ಸೌಹಾರ್ದತೆಯ ಸಂಕೇತವಾಗಿದೆ ಎಂದು ಸಂಸದ ಸುನೀಲ್ ಬೋಸ್ ತಿಳಿಸಿದರು.

ರಂಜಾನ್ ಹಿನ್ನೆಲೆಯಲ್ಲಿ ಪಟ್ಟಣದ ಕಾಂಗ್ರೆಸ್ ಕಚೇರಿಯಲ್ಲಿ ಬಡ ಮುಸ್ಲಿಂ ಕುಟುಂಬಗಳಿಗೆ ಆಹಾರದ ಕಿಟ್‌ಗಳನ್ನು ವಿತರಿಸಿ ಮಾತನಾಡಿದ ಅವರು, ಮುಸ್ಲಿಂ ಬಾಂಧವರು ಒಂದು ತಿಂಗಳ ಕಾಲ ಉಪವಾಸ ಆಚರಿಸುವ ಮೂಲಕ ಕುರಾನ್ ಪಠಿಸುತ್ತಾರೆ. ದಾನ, ಧರ್ಮಗಳನ್ನು ಮಾಡಿ ಅಲ್ಲಾನನ್ನು ಪ್ರಾರ್ಥಿಸಿ ಹಬ್ಬದಂದು ಸೂರ್ಯೋದಯಕ್ಕೂ ಮುನ್ನ ಇಫ್ತಾರ್ ಮೂಲಕ ಉಪವಾಸ ಅಂತ್ಯಗೊಳಿಸಿ ಹಬ್ಬ ಆಚರಿಸಲಿದ್ದಾರೆ ಎಂದರು.

ಈ ಹಿನ್ನೆಲೆಯಲ್ಲಿ ಬಡ ಮುಸ್ಲಿಂ ಕುಟುಂಬದವರಿಗೆ ಆಹಾರದ ಕಿಟ್ ವಿತರಿಸುವ ಮೂಲಕ ಕಿರು ಸಹಾಯ ಮಾಡಲಾಗುತ್ತಿದೆ. ಮುಸ್ಲಿಂ ಬಾಂಧವರು ಸಂತಸದಿಂದ ಹಬ್ಬ ಆಚರಿಸುವಂತೆ ತಿಳಿಸಿದ ಅವರು ಸರ್ಕಾರ ಕೂಡ ಮುಸ್ಲಿಂ ಬಾಂಧವರಿಗೆ ಹೆಚ್ಚಿನ ಅಗತ್ಯ ನೆರವು ನೀಡಲು ಮುಂದಾಗಿದೆ ಎಂದರು.

ಈ ವೇಳೆ ಪುರಸಭೆ ಮಾಜಿ ಸದಸ್ಯ ಸಬೀಲ್ ಖಾನ್, ಪಾರುಪತ್ತೇದಾರ್ ಎಂ.ಬಿ.ಸಾಗರ್, ಪುರಸಭೆ ಮಾಜಿ ಅಧ್ಯಕ್ಷ ರಘು, ಆಪ್ತ ಸಹಾಯಕ ಬಸವರಾಜು, ನಾಗರಾಜು, ಸುಂದರ ನಾಯಕ, ಅಮ್ಜದ್ ಪಾಷ, ಸಂತೋಷ್ ಜೋಷಿ, ಸಾಮಾಜಿಕ ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷರಾದ ಗಣೇಶ್, ರಾಮಲಿಂಗಯ್ಯ, ಗ್ರಾಪಂ ಮಾಜಿ ಅಧ್ಯಕ್ಷ ಲಕ್ಷ್ಮಣ, ಮಾಜಿ ಉಪಾಧ್ಯಕ್ಷ ಶಿವಕುಮಾರ್, ಆಲಿ, ನದೀಮ್ ಪಾಷ, ಸಂತೋಷ್, ಕಿರಣ್, ಇಮ್ರಾನ್, ಆಸೀಫ್ ಸೇರಿದಂತೆ ಮತ್ತಿತರರಿದ್ದರು.

ಕಗ್ಗಲೀಪುರದಲ್ಲಿ ಸಿದ್ದಪ್ಪಾಜಿ ದೇವಾಲಯ ಲೋಕಾರ್ಪಣೆ



ತಿ.ನರಸೀಪುರ, ಮಾ.6– ತಾಲೂಕಿನ ಕಗ್ಗಲೀಪುರದಲ್ಲಿ ಜೀರ್ಣೋದ್ಧಾರಗೊಂಡಿರುವ ಸಿದ್ದಪ್ಪಾಜಿ ದೇವಾಲಯ ಹಾಗೂ ಮಠದ ಮಹಾದ್ವಾರವನ್ನು ರಾಜಾ ಬೊಪ್ಪೇಗೌಡನಪುರದ ಪೀಠಾಧಿಪತಿ ಬಿ.ಎನ್.ಚನ್ನರಾಜೇ ಅರಸ್ ಲೋಕಾರ್ಪಣೆಗೊಳಿಸಿದರು.

ಗ್ರಾಮದ ಮುಖ್ಯ ರಸ್ತೆಗಳಲ್ಲಿ ಶ್ರೀಸಿದ್ದಪ್ಪಾಜಿ ಕಂಡಾಯವನ್ನು ಮೆರವಣಿಗೆ ಮಾಡಲಾಯಿತು. ಮೆರವಣಿಗೆ ಶ್ರೀಸಿದ್ದಪ್ಪಾಜಿ ಮಠ ತಲುಪುತ್ತಿದ್ದಂತೆ ಬಿ.ಎನ್.ಚನ್ನರಾಜೇ ಅರಸ್ ಅವರು ಆಶೀರ್ವಚನ ನೀಡಿದರು. ಸಾವಿರಾರು ಭಕ್ತರು ಮಠಕ್ಕೆ ಭೇಟಿ ನೀಡಿ ಗದ್ದುಗೆಗೆ ಪೂಜೆ ಸಲ್ಲಿಸಿ ಶ್ರೀಗಳ ಆಶೀರ್ವಾದ ಪಡೆದರು.

ಕಾರ್ಯಕ್ರಮದಲ್ಲಿ 5 ಸಾವಿರ ಮಂದಿಗೆ ಊಟದ ವ್ಯವಸ್ಥೆ ಮಾಡಲಾಗಿತ್ತು. ಈ ವೇಳೆ ಪಿಕಾರ್ಡ್ ಬ್ಯಾಂಕ್ ಮಾಜಿ ಅಧ್ಯಕ್ಷ ವಜ್ರೇಗೌಡ, ಎಪಿಎಂಸಿ ಮಾಜಿ ಅಧ್ಯಕ್ಷ ಕಗ್ಗಲೀಪುರ ಎಂ.ರಾಜಣ್ಣ, ಗುತ್ತಿಗೆದಾರ ಸಿದ್ದರಾಮು, ಗ್ರಾಪಂ ಮಾಜಿ ಅಧ್ಯಕ್ಷ ನಾಗರಾಜು, ಪೆಟ್ರೋಲ್ ಬಂಕ್ ಮಾಲೀಕ ಇಂದ್ರೇಶ್, ಕಪಾಲಿ ಮಂಜು ಸೇರಿದಂತೆ ಯಜಮಾನರು, ಮುಖಂಡರು ಹಾಜರಿದ್ದರು.

ಜಿಲ್ಲಾಧ್ಯಕ್ಷರಾಗಿ ನೇಮಕ



ತಿ.ನರಸೀಪುರ: ಮೈಸೂರು ಜಿಲ್ಲಾ ಗ್ರಾಮಂತರ ಬಿಜೆಪಿ ಎಸ್‌ಸಿ ಮೋರ್ಚಾ ಜಿಲ್ಲಾಧ್ಯಕ್ಷರಾಗಿ ಹಿರಿಯ ಮುಖಂಡ ತೊಟ್ಟವಾಡಿ ಎಂ.ಅನಿಲ್ ಕುಮಾರ್‌ರನ್ನು ನೇಮಕ ಮಾಡಲಾಗಿದೆ ಎಂದು ಜಿಲ್ಲಾಧ್ಯಕ್ಷ ಕುಂಬರಳ್ಳಿ ಸುಬ್ಬಣ್ಣ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಡೇರಿಗೆ ನೇಮಕ



ತಿ.ನರಸೀಪುರ: ತಾಲೂಕಿನ ಮಾದಾಪುರ ಡೇರಿಗೆ ವಿ.ರವಿ ಅವರನ್ನು ಅಧಿಕಾರೇತರ ಸದಸ್ಯರನ್ನಾಗಿ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮದಡಿ ನಾಮ ನಿರ್ದೇಶನ ಮಾಡಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಮೂರನೇ ಪುಟದಿಂದ

ಮಕ್ಕಳಿಗೆ ಸಾಮಾಜಿಕ ಜಾಲತಾಣ ನಿಷಿದ್ಧ

ಜಾರಿ ಮಾಡಿದ್ದೇವೆ ಎಂದರು.

ವಿದ್ಯಾರ್ಥಿಗಳಲ್ಲಿ ಇತ್ತೀಚೆಗೆ ವಿಪರೀತವಾಗುತ್ತಿರುವ ಮೊಬೈಲ್ ಗೀಳು ಹಾಗೂ ಸಾಮಾಜಿಕ ಜಾಲತಾಣಗಳ ದಾಸ್ಯದಿಂದ ಎಳೆಯ ಮನಸ್ಸುಗಳನ್ನು ಪಾರುಮಾಡುವ ಉದ್ದೇಶದಿಂದ 16 ವರ್ಷದೊಳಗಿನ ಮಕ್ಕಳಿಗೆ ಶಾಲಾ ಕಾಲೇಜುಗಳಲ್ಲಿ ಮೊಬೈಲ್ ಬಳಕೆ ನಿಷೇಧ ಘೋಷಿಸಿದರು.

ಶಾಲಾ ಮಕ್ಕಳಲ್ಲಿ ಸ್ಮಾರ್ಟ್‌ಫೋನ್ ಬಳಕೆ ಮಿತಿಮೀರುತ್ತಿದ್ದು, ಅವರ ದೈಹಿಕ ಹಾಗೂ ಮಾನಸಿಕ ಬೆಳವಣಿಗೆ ಮೇಲೆ ತೀವ್ರ ಸ್ವರೂಪದ ನಕಾರಾತ್ಮಕ ಪರಿಣಾಮ ಬೀರುತ್ತಿದೆ. ಈ ಹಿನ್ನೆಲೆಯಲ್ಲಿ 16 ವರ್ಷದೊಳಗಿನ ಮಕ್ಕಳು ಸಾಮಾಜಿಕ ಜಾಲತಾಣಗಳನ್ನು ಬಳಸುವುದನ್ನು ಸಂಪೂರ್ಣ ನಿಷೇಧಿಸಲಾಗುವುದು ಎಂದರು.

ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆ ಹೆಸರನ್ನು ಶಾಂತವೇರಿ ಗೋಪಾಲಗೌಡ ಸಾರ್ವಜನಿಕ ಆಸ್ಪತ್ರೆ ಎಂಬುದಾಗಿ ಮರುನಾಮಕರಣ, ಹೈನುಗಾರಿಕೆಗೆ ಉತ್ತೇಜನ ನೀಡುವ ಉದ್ದೇಶದಿಂದ ಗ್ರಾಮೀಣ ಪ್ರದೇಶದ ಜನರಿಗೆ ಹಸು, ಎಮ್ಮೆ ಖರೀದಿಸಲು 40 ಸಾವಿರ ರೂ. ಪ್ರೋತ್ಸಾಹಧನ ನೀಡುವುದಾಗಿ ತಿಳಿಸಿದರು.

ಪಿಯುಗೂ ಉಚಿತ ಪಠ್ಯ ಪುಸ್ತಕ: ಸರ್ಕಾರಿ ಶಾಲೆಗಳಲ್ಲಿ ವ್ಯಾಸಂಗ ಮಾಡುವ 1ರಿಂದ 10ನೇ ತರಗತಿ ವಿದ್ಯಾರ್ಥಿಗಳಿಗೆ ಉಚಿತ ಪಠ್ಯಪುಸ್ತಕ ನೀಡಲಾಗುತ್ತಿದ್ದು, ಇನ್ನು ಮುಂದೆ ಪದವಿ ಪೂರ್ವ ವಿದ್ಯಾರ್ಥಿಗಳಿಗೂ ಪಠ್ಯಪುಸ್ತಕಗಳನ್ನು ಉಚಿತವಾಗಿ ನೀಡುವುದಾಗಿ ಘೋಷಿಸಿದ್ದಾರೆ.

ಮಡಿವಾಳ, ಸವಿತಾ ಸಮಾಜಕ್ಕೆ ಸಹಾಯ: ಮಡಿವಾಳ ಸಮಾಜದ ಯುವಜನರ ಸ್ವಯಂ ಉದ್ಯೋಗಕ್ಕಾಗಿ 5 ಲಕ್ಷ ರೂ. ಸಾಲ ಸೌಲಭ್ಯವನ್ನು ಶೇ.4ರ ಬಡ್ಡಿ ದರದಲ್ಲಿ ಕಲ್ಪಿಸುವುದಾಗಿ ತಿಳಿಸಿರುವ ಮುಖ್ಯಮಂತ್ರಿ, ಸವಿತಾ ಸಮಾಜದವರು ಸಲೂನ್‌ಗಳನ್ನು ತೆರೆಯಲು ಶೇ.4ರ ಬಡ್ಡಿ ದರದಲ್ಲಿ 10 ಲಕ್ಷ ರೂ. ಸಾಲ ಮತ್ತು ಸಹಾಯಧನ ಮಂಜೂರು ಮಾಡಲಾಗುವುದು. ಕುಂಬಾರ, ತಿಗಳ, ಗಾಣಿಗ, ಕೊಡವ, ಉಪ್ಪಾರ, ಈಡಿಗ ಮತ್ತು ಕಾಡುಗೊಲ್ಲ ಸಮುದಾಯದ ಜನರ ಆರ್ಥಿಕ ಏಳಿಗೆಗಾಗಿ ನೆರವು ನೀಡಲು ಪ್ರತ್ಯೇಕ ನಿಗಮಗಳನ್ನು ಸ್ಥಾಪಿಸಲಾಗಿದ್ದು, ಇದರ ಮೂಲಕ ವಿವಿಧ ಯೋಜನೆಗಳನ್ನು ಕೈಗೆತ್ತಿಕೊಳ್ಳುವುದಾಗಿ ತಿಳಿಸಿದ್ದಾರೆ.

56432 ಹುದ್ದೆ ಭರ್ತಿ: ನಿರುದ್ಯೋಗ ಸಮಸ್ಯೆ ಬಗೆಹರಿಸುವ ಉದ್ದೇಶದಿಂದ 56,432 ಹುದ್ದೆಗಳನ್ನು ಭರ್ತಿ ಮಾಡುವುದಾಗಿ ಆಯವ್ಯಯದಲ್ಲಿ ಪ್ರಕಟಿಸಿದ್ದಾರೆ.

ಗ್ಯಾರಂಟಿಗೆ 1.21 ಲಕ್ಷ ಕೋಟಿ ವೆಚ್ಚ: ಗ್ಯಾರಂಟಿ ಯೋಜನೆಗಳನ್ನು ನಿಲ್ಲಿಸುವುದಿಲ್ಲ ಎಂದು ಘೋಷಿಸಿರುವ ಅವರು, ಗ್ಯಾರಂಟಿ ಯೋಜನೆ ಜಾರಿಯಾದಾಗಿನಿಂದ ಫೆಬ್ರವರಿ 2026 ರವರೆಗೆ 1,21,598 ಕೋಟಿ ರೂ. ವೆಚ್ಚ ಮಾಡಿರುವುದಾಗಿ ತಿಳಿಸಿದರು.

ಮುಂಬರುವ ಆರ್ಥಿಕ ವರ್ಷದಲ್ಲಿ ಗೃಹಲಕ್ಷ್ಮಿ ಯೋಜನೆಗೆ 28,608 ಕೋಟಿ ರೂ., ಗೃಹ ಜ್ಯೋತಿಗೆ 10578 ಕೋಟಿ ರೂ., ಶಕ್ತಿ ಯೋಜನೆಗೆ 5300 ಕೋಟಿ ರೂ., ಅನ್ನಭಾಗ್ಯ ಯೋಜನೆಗೆ 6200 ಕೋಟಿ ರೂ., ಇಂದಿರಾ ಕಿಟ್‌ಗೆ 68200 ಕೋಟಿ ರೂ. ನೀಡುವ ಘೋಷಣೆ ಮಾಡಿದ್ದಾರೆ.

ಯಾತ್ರಿಕರಿಗೆ 5 ಸಾವಿರ: ವೈಷ್ಣೋದೇವಿ ಯಾತ್ರಿಕರಿಗೆ ಸರ್ಕಾರದಿಂದ 5 ಸಾವಿರ ರೂ. ಸಹಾಯಧನ ಘೋಷಿಸಿದ್ದಾರೆ, ಅಲ್ಪಸಂಖ್ಯಾತ ಸಮುದಾಯದ ಮಹಿಳೆಯರಿಗಾಗಿ 100 ಸಂಖ್ಯಾ ಬಲದ ಎರಡು ಮಹಿಳಾ ವೃದ್ಧಾಶ್ರಮ ಪ್ರಾರಂಭ, ಅಲ್ಪ ಸಂಖ್ಯಾತ 5000 ವಿದ್ಯಾರ್ಥಿಗಳಿಗೆ ಲ್ಯಾಪ್ ಟಾಪ್ ಖರೀದಿಗೆ ತಲಾ 50 ಸಾವಿರ ರೂ. ನೀಡುವುದಾಗಿ ಹೇಳಿದರು.

204 ಬಿಆರ್‌ಸಿ: 16 ವರ್ಷದೊಳಗಿನ ಮಕ್ಕಳಿಗೆ ಸಾಮಾಜಿಕ ಜಾಲತಾಣ ನಿಷೇಧ ಘೋಷಣೆ, ವಿದ್ಯಾರ್ಥಿಗಳಲ್ಲಿ ಒತ್ತಡ ನಿವಾರಿಸಲು ಮಾನಸಿಕ ಆರೋಗ್ಯ ಸುಧಾರಣೆಗೆ 204 ಬಿಆರ್‌ಸಿ ಕೇಂದ್ರಗಳಲ್ಲಿ ಆರೋಗ್ಯ ಸಲಹೆಗಾರರ ನೇಮಕ, ಮಣ್ಣಿನ ಗುಣಮಟ್ಟ ಹೆಚ್ಚಿಸಲು ವಸುಧಾಮೃತ ಯೋಜನೆ ಜಾರಿ ಘೋಷಣೆ ಮಾಡಿದ್ದಾರೆ. ಕಾಲೇಜು–ವಿವಿಗಳಲ್ಲಿ ವಿದ್ಯಾರ್ಥಿ ಸಂಘಗಳ ಚುನಾವಣೆಗೆ ಮರುಚಾಲನೆ ಎಸ್‌ಸಿ, ಎಸ್‌ಟಿ, ಒಬಿಸಿ ವಿದ್ಯಾರ್ಥಿಗಳಿಗೆ 40 ಹೊಸ ಹಾಸ್ಟೆಲ್ ನಿರ್ಮಾಣ, ಪಿಯು ವಿದ್ಯಾರ್ಥಿಗಳಿಗೆ ಉಚಿತ ಪಠ್ಯಪುಸ್ತಕ ವಿತರಣೆ, ಶಾಲಾ–ಕಾಲೇಜುಗಳಿಗೆ 15 ಸಾವಿರ ಶಿಕ್ಷಕರ ಭರ್ತಿ.

ವಿದ್ಯಾರ್ಥಿಗಳಿಗಾಗಿ ಇಂದಿರಾ ಕ್ಯಾಂಟೀನ್ ಘೋಷಣೆ ಮಾಡಿದ್ದು ಬೆಂಗಳೂರಿನಲ್ಲಿ 2, ಧಾರವಾಡದಲ್ಲಿ 4 ವಿದ್ಯಾರ್ಥಿ ಇಂದಿರಾ ಕ್ಯಾಂಟೀನ್ ಸ್ಥಾಪನೆ ಘೋಷಣೆ ಮಾಡಿದ್ದಾರೆ.

ನೇಕಾರರಿಗೆ ಪ್ರತಿ ಯೂನಿಟ್ ವಿದ್ಯುತ್‌ಗೆ 3 ರೂ. ಸಹಾಯಧನ, ಉದ್ಯೋಗಸ್ಥ ಎಸ್‌ಸಿ, ಎಸ್ಟಿ ಮಹಿಳೆಯರಿಗೆ ಮೈಸೂರು, ಬೆಂಗಳೂರು, ಮಂಗಳೂರು ಬೆಳಗಾವಿಯಲ್ಲಿ ಹಾಸ್ಟೆಲ್.

ಬಿಸಿಯೂಟ: ಗರ್ಭಿಣಿ ಮತ್ತು ಬಾಣಂತಿಯರಿಗೆ ಮನೆಗಳಿಗೆ ನೀಡಲಾಗುತ್ತಿದ್ದ ಪಡಿತರ ರದ್ದು ಮಾಡಿ, ಬಿಸಿಯೂಟ ಯೋಜನೆಯಡಿ ಅಂಗನವಾಡಿಯಲ್ಲಿ ಬಿಸಿಯೂಟ ನೀಡಲಾಗುವುದು ಎಂದು ತಿಳಿಸಿದ್ದಾರೆ.

ಕಲಾಪ ಮುಂದೂಡಿಕೆ

ಓದುವಾಗ ಹಿರಿಯ ಪತ್ರಕರ್ತ ಬಿಎಂ ಬಶೀರ್ ಅವರ ಕವಿತೆಯ ಸಾಲುಗಳಾದ 'ಗುಲಾಬಿಯೆಂದರೆ ಅಮ್ಮನಿಗೆ ಇಷ್ಟ, ಗೊತ್ತು ಅವಳಿಗೆ ಮುಳ್ಳಲ್ಲಿ ಅರಳುವ ಕಷ್ಟ' ಸಿಎಂ ಸಿದ್ದರಾಮಯ್ಯ ಉಲ್ಲೇಖಿಸಿದರು. ಸಮಾಜ ಕಲ್ಯಾಣ ಇಲಾಖೆಗೆ ಸಂಬಂಧಿಸಿದಂತೆ ದಲಿತ ಬಂಡಾಯ ಕವಿ ಸಿದ್ದಲಿಂಗಯ್ಯ ಅವರ 'ಕುರಿಗಳ ಕಾಯುವ ಕುರುಬನ ಕೂಗು, ಜನರ ಮಾತು ಕವನ. ಸೋತ ರಟ್ಟೆಗಳ ಹೂತ ಕಾಲುಗಳ ಬೆವರ ಹಸಿರು ಕವನ' ಸಾಲುಗಳನ್ನು ಉಲ್ಲೇಖ ಮಾಡಿದರು.

ಅದೇ ರೀತಿಯಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಗೆ ಸಂಬಂಧಿಸಿದಂತೆ, 'ಮಾನವತೆಯ ಕಟ್ಟಡಕ್ಕೆ ಪ್ರೀತಿಯೊಂದೇ ಇಟ್ಟಿಗೆ, ಇಟ್ಟಿಗೆಗಳ ಬೆಸೆಯಬೇಕು ಕರುಣೆ ಸ್ನೇಹದೊಟ್ಟಿಗೆ' ಎಂದು ಕವಿ ಬಿ.ಆರ್.ಲಕ್ಷ್ಮಣ ರಾವ್ ಅವರ ಕವಿತೆಯ ಸಾಲುಗಳನ್ನು ಉಲ್ಲೇಖ ಮಾಡಿದರು. ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಗೆ ಸಂಬಂಧಿಸಿದಂತೆ 'ಹಳೆತನದ ಕೊಳೆಯೆಲ್ಲ ಹೊಸಮತಿಯ ಹೊಳೆಯಲ್ಲಿ ಕೊಚ್ಚಿ ಹೋಗಲಿ; ಬರಲಿ ವಿಜ್ಞಾನ ಬುದ್ಧಿ' ಎಂಬ ರಾಷ್ಟ್ರಕವಿ ಕುವೆಂಪು ಸಾಲುಗಳನ್ನು ಉಲ್ಲೇಖ ಮಾಡಿದರು.

ವರದಿ ಶೀಘ್ರ ಕೇಂದ್ರಕ್ಕೆ ಸಲ್ಲಿಕೆ

ಸದ್ಬಳಕೆ ಮಾಡಿಕೊಳ್ಳಲು ಕೊರಟಗೆರೆ ತಾಲೂಕಿನ ವಡೇರಹಳ್ಳಿ ಸಮೀಪ 1.2 ಟಿ.ಎಂ.ಸಿ ಸಾಮರ್ಥ್ಯದ ಸಮತೋಲನಾ ಜಲಾಶಯ ನಿರ್ಮಿಸಲಾಗುವುದು.

ಚಾಮರಾಜನಗರದ ಹನೂರು ತಾಲ್ಲೂಕಿನಲ್ಲಿ ಅಂತರ್ಜಲ ಹೆಚ್ಚಿಸಿ ಕುಡಿಯುವ ನೀರು ಹಾಗೂ 12 ಸಾವಿರ ಎಕರೆ ಬಾಧಿತ ಅಚ್ಚುಕಟ್ಟು ಪ್ರದೇಶಕ್ಕೆ ನೀರಾವರಿ ಒದಗಿಸಲು ಉಡುತೊರೆಹಳ್ಳ ಯೋಜನೆಯನ್ನು 490 ಕೋಟಿ ರೂ. ಮೊತ್ತದಲ್ಲಿ ಕೈಗೆತ್ತಿಕೊಳ್ಳಲಾಗುವುದು. ರಾಜ್ಯಾದ್ಯಂತ ಸಣ್ಣ ನೀರಾವರಿ ಇಲಾಖೆಯ ಅಧೀನದಲ್ಲಿರುವ ಕೆರೆಗಳನ್ನು ಅಭಿವೃದ್ಧಿಪಡಿಸಿ ಸಂರಕ್ಷಿಸಲು ಕೆರೆ ಬಳಕೆದಾರರ ಸಂಘಗಳನ್ನು ಬಲವರ್ಧನೆಗೊಳಿಸಲಾಗುವುದು ಎಂದರು.

ಯುವನಿಧಿಗೆ ಅನುದಾನವಿಲ್ಲ!

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈ ಬಾರಿಯೂ ಗ್ಯಾರಂಟಿ ಯೋಜನೆಗಳಿಗೆ ಅನುದಾನವನ್ನು ಮೀಸಲಿಟ್ಟಿದ್ದಾರೆ. ಗೃಹಲಕ್ಷ್ಮಿ ಯೋಜನೆಗೆ 28,608 ಕೋಟಿ ರೂ., ಅನ್ನ ಭಾಗ್ಯ ಯೋಜನೆಗೆ 6,200 ಕೋಟಿ ರೂ. ಗೃಹ ಜ್ಯೋತಿ ಯೋಜನೆಗೆ ಈ ವರ್ಷ 10,578 ಕೋಟಿ ರೂ. ಹಾಗೂ ಶಕ್ತಿ ಯೋಜನೆಗೆ 5,300 ಕೋಟಿ ಹಣ ಮೀಸಲಿಟ್ಟಿರುವುದಾಗಿ ತಿಳಿಸಿದರು. ಆದರೆ, ಯುವ ನಿಧಿಗೆ ಯಾವುದೇ ಅನುದಾನವನ್ನು ಘೋಷಣೆ ಮಾಡಿಲ್ಲ.

ಮೈಸೂರು 2ನೇ ಐಟಿ ಸಿಟಿ

ಉದಯಗಿರಿ ದಕ್ಷಿಣ ಪೊಲೀಸ್ ಠಾಣೆಯನ್ನು ಹೊಸದಾಗಿ ನಿರ್ಮಾಣ.

* ಮೈಸೂರಿನ ರಂಗನಿರಂತರ ಸಂಸ್ಥೆಗೆ ಅನುದಾನ ನೀಡುವ ಮೂಲಕ ವಿವಿಧ ಸಾಂಸ್ಕೃತಿಕ ಚಟುವಟಿಕೆಗಳಿಗೆ ಪ್ರೋತ್ಸಾಹ * ಸೈಕ್ಲಿಂಗ್ ಕ್ರೀಡೆಗೆ ಉತ್ತೇಜನ ನೀಡಲು ಮೈಸೂರಿನ ದಟ್ಟಗಳ್ಳಿಯಲ್ಲಿ ಗುರುತಿಸಲಾದ ಜಾಗದಲ್ಲಿ ಆಧುನಿಕ ಸೈಕ್ಲಿಂಗ್ ವೆಲೋಡ್ರೋಮ್ ನಿರ್ಮಾಣ * ಮೈಸೂರಿನಲ್ಲಿರುವ ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಸಮಗ್ರ ಮೂಲಸೌಕರ್ಯ ಅಭಿವೃದ್ಧಿಗೆ 10 ಕೋಟಿ. * ಮೈಸೂರಿನ ಚಾಮರಾಜೇಂದ್ರ ಮೃಗಾಲಯದಲ್ಲಿ ಪ್ರವಾಸಿಗರನ್ನು ಆಕರ್ಷಿಸಲು ಹಾಗೂ ಪ್ರವಾಸಿಗರ ಅನುಕೂಲತೆಗಾಗಿ ಪಿಪಿಪಿ ಮಾದರಿಯಲ್ಲಿ ಪ್ರಕೃತಿ ನಿರೂಪಣಾ ಕೇಂದ್ರ ಸ್ಥಾಪನೆ * ಮೈಸೂರು ಫಿಲ್ಮ್ ಸಿಟಿ(ಚಿತ್ರ ನಗರಿ) ಸಿಟಿ ಸೌಲಭ್ಯಗಳನ್ನು ಒಳಗೊಂಡಂತೆ ಪ್ರವಾಸಿಗರಿಗೆ ಅನುಕೂಲ ಆಗುವಂತೆ ಥೀಮ್ ಪಾರ್ಕ್, ಸ್ಟಾರ್ ಹೋಟೇಲ್ ಮತ್ತು ರೆಸ್ಟೋರೆಂಟ್‌ಗಳನ್ನು ಒಳಗೊಂಡು ಪಿಪಿಪಿ ಮಾದರಿಯಲ್ಲಿ ನಿರ್ಮಿಸಲು ಆಡಳಿತಾತ್ಮಕ ಅನುಮೋದನೆ * ಖ್ಯಾತ ಚಲನಚಿತ್ರ ನಟ ದಿವಂಗತ ಪುಟ್ಟಣ್ಣ ಕಣಗಾಲ್‌ರವರ ನಿವಾಸವನ್ನು ವಸ್ತುಸಂಗ್ರಹಾಲಯವನ್ನಾಗಿ ರೂಪಿಸುವುದು * ಮಹಾತ್ಮ ಗಾಂಧೀಜಿಯವರು ಭೇಟಿ ಕೊಟ್ಟ ರಾಜ್ಯದ ವಿವಿಧ ಸ್ಥಳಗಳಲ್ಲಿ ಅವರ ಸ್ಮರಣಾರ್ಥ ಗಾಂಧಿ ಸ್ಮಾರಕ ಸ್ತಂಭಗಳನ್ನು ನಿರ್ಮಿಸುವುದು * ಮೈಸೂರು ನಗರದಲ್ಲಿ ಪ್ರಾಯೋಗಿಕವಾಗಿ ಇ–ಕೋರ್ಟ್ ಸ್ಥಾಪನೆ

* ಮೈಸೂರು ತಾಲೂಕಿನ ಬಿದ್ರಹಳ್ಳಿಹುಂಡಿ ಬಳಿ, ತಿ.ನರಸೀಪುರ ತಾಲ್ಲೂಕಿನ ಹಾರೋಹಳ್ಳಿ ಬಳಿ ಕಾಲುವೆ ಆಧುನೀಕರಣ. * ಕಬಿನಿ ಬಲದಂಡೆ ನಾಲೆಯ ವಿತರಣಾ ನಾಲೆ ಸಂ.35ರ ಆಧುನೀಕರಣ * ತಿ.ನರಸೀಪುರ ತಾಲೂಕಿನ ರಾಜರಾಜೇಶ್ವರಿ ಕಾಲುವೆ ಹಾಗೂ ಹಾರೋಹಳ್ಳಿ ಹೈಲೆವೆಲ್ ಕಾಲುವೆಗಳ ಸುಧಾರಣೆ. * ತಿ.ನರಸೀಪುರ ತಾಲೂಕಿನ ಹಾರೋಹಳ್ಳಿ ಹೈಲೆವೆಲ್ ಹಾಗೂ ಲೋಲೆವೆಲ್ ಕಾಲುವೆಗಳ ಆಯಕಟ್ಟನ್ನು ಹೆಚ್ಚಿಸಲು ನೀರೆತ್ತುವ ಯೋಜನೆ. * ಮೈಸೂರು ತಾಲೂಕಿನ ಚಿಕ್ಕಂಕನಹಳ್ಳಿ ಕೆರೆ ಅಡಿಯಲ್ಲಿ ಇರುವ ಕಿಗ್ಗಾಲುವೆ ಮತ್ತು ಮೆಗ್ಗಾಲುವೆಗಳ ಆಧುನೀಕರಣ. * ಕಬಿನಿ ಅಣೆಕಟ್ಟೆಯ ಮೇಲ್ಭಾಗದಲ್ಲಿ ಪುನರುಜ್ಜೀವನ ಕಾಮಗಾರಿ. ಮೈಸೂರು ಜಿಲ್ಲೆಯ ತಿ.ನರಸೀಪುರ ತಾಲ್ಲೂಕಿನ ನಂಜಾಪುರ ಏತ ನೀರಾವರಿ ಯೋಜನೆ. * ಕಟ್ಟೆಮಳವಾಡಿ ಕಾಲುವೆ ಹಾಗೂ ವಡಕೆಕಟ್ಟೆ ಹೈ ಲೆವೆಲ್ ಕಾಲುವೆಗಳ ಸುಧಾರಣೆ. * ವರುಣ ಕೆರೆಯ ಪುನರುಜ್ಜೀವನ ಮತ್ತು ಸಂರಕ್ಷಣೆ, ವರುಣ ಕ್ಷೇತ್ರದಲ್ಲಿ ಸರಣಿ ಚೆಕ್ ಡ್ಯಾಂ ನಿರ್ಮಾಣ * ಗ್ರಾಮಗಳ ಕೆರೆಗಳಿಗೆ ಏತ ನೀರಾವರಿ ಕಾಮಗಾರಿ. * ಮೈಸೂರು ಜಿಲ್ಲೆಯ ಹೆಮ್ಮಿಗೆ–ಮುದುಗನೂರು ಫೀಡರ್ ನಾಲೆ ಅಭಿವೃದ್ಧಿ. * ನಂಜನಗೂಡು ತಾಲೂಕು ಕಾರ್ಯ ಗ್ರಾಮದಲ್ಲಿರುವ ಇಂಗು ಕೆರೆ ಅಭಿವೃದ್ಧಿ ಕಾಮಗಾರಿ.

ಆಡಳಿತಕ್ಕೆ ಕೃತಕ ಬುದ್ಧಿಮತ್ತೆಗೆ ಒತ್ತು

ಜೊತೆಗೆ ದೈನಂದಿನ ಹಾಜರಾತಿ ವಿವರಗಳನ್ನು ಸಾರ್ವಜನಿಕವಾಗಿ ಲಭ್ಯವಾಗುವಂತೆ ಮಾಡುತ್ತದೆ, ಇದರಿಂದಾಗಿ ಹೊಣೆಗಾರಿಕೆ ಮತ್ತು ಪಾರದರ್ಶಕತೆ ಬಲಗೊಳ್ಳುತ್ತದೆ.

ಎಐ ಲ್ಯಾಬ್‌ಗಳ ಸ್ಥಾಪನೆ: ಪ್ರಮುಖ ನಗರಗಳನ್ನು ಮೀರಿ ಸುಧಾರಿತ ತಂತ್ರಜ್ಞಾನ ಶಿಕ್ಷಣಕ್ಕೆ ಪ್ರವೇಶವನ್ನು ವಿಸ್ತರಿಸಲು, ಟೈರ್–2 ಮತ್ತು ಟೈರ್–3 ನಗರಗಳಲ್ಲಿರುವ 50 ಸರ್ಕಾರಿ ಕಾಲೇಜುಗಳಲ್ಲಿ ಆಧುನಿಕ ಎಐ ಡೇಟಾ ಲ್ಯಾಬ್‌ಗಳನ್ನು ಸ್ಥಾಪಿಸಲಾಗುವುದು. ಇದಕ್ಕಾಗಿ 10 ಕೋಟಿ ರೂ. ಅನುದಾನ ನೀಡಲಾಗುವುದು ಮತ್ತು ಇದು ಭಾರತ ಸರ್ಕಾರದ ಎಐ ಮಿಷನ್ ಸಹಯೋಗದೊಂದಿಗೆ ಜಾರಿಗೆ ಬರಲಿದೆ. ಈ ಪ್ರಯೋಗಾಲಯಗಳು ಗ್ರಾಮೀಣ ಯುವಕರಿಗೆ ಅತ್ಯಾಧುನಿಕ ಎಐ ಕೌಶಲ್ಯಗಳನ್ನು ಒದಗಿಸುತ್ತವೆ ಮತ್ತು ಉದಯೋನ್ಮುಖ ತಂತ್ರಜ್ಞಾನ ಕ್ಷೇತ್ರಗಳಲ್ಲಿ ಅವರ ಉದ್ಯೋಗಾವಕಾಶಗಳನ್ನು ಗಣನೀಯವಾಗಿ ಹೆಚ್ಚಿಸುತ್ತವೆ.

ರೊಬೊಟಿಕ್ಸ್, ಎಐ ಕ್ಯಾಂಪಸ್: ರಾಜ್ಯದ ಎಐ ಪರಿಸರ ವ್ಯವಸ್ಥೆಯನ್ನು ಮತ್ತಷ್ಟು ಬಲಪಡಿಸಲು, ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್ (ಐಐಎಸ್ಸಿ) ಅಡಿಯಲ್ಲಿರುವ ಎಐ ಮತ್ತು ರೊಬೊಟಿಕ್ಸ್ ಟೆಕ್ನಾಲಜಿ ಪಾರ್ಕ್ (ಎಆರ್ಟಿ–ಪಾರ್ಕ್) ಇಸ್ರೋ ಮತ್ತು ಕಿಯೋನಿಕ್ಸ್ ಸಹಯೋಗದೊಂದಿಗೆ 'ಬೆಂಗಳೂರು ರೊಬೊಟಿಕ್ಸ್ ಅಂಡ್ ಎಐ ಇನ್ನೋವೇಶನ್ ಝೋನ್ (ಬ್ರೇನ್ಜ್)' ಎಂಬ ಪ್ರಮುಖ ರೊಬೊಟಿಕ್ಸ್ ಮತ್ತು ಎಐ ಕ್ಯಾಂಪಸ್ ಅನ್ನು ಸ್ಥಾಪಿಸಲಿದೆ. ಈ ಉಪಕ್ರಮವು ಉದಯೋನ್ಮುಖ ತಂತ್ರಜ್ಞಾನಗಳಲ್ಲಿ ಸಂಶೋಧನೆ, ನಾವೀನ್ಯತೆ ಮತ್ತು ಉದ್ಯಮಶೀಲತೆಯನ್ನು ಗಣನೀಯವಾಗಿ ಹೆಚ್ಚಿಸುವ ನಿರೀಕ್ಷೆಯಿದೆ. ಬೆಂಗಳೂರಿನ ಜಾಗತಿಕ ಎಐ ಕೇಂದ್ರವಾಗಿ ಸ್ಥಾನವನ್ನು ಮತ್ತಷ್ಟು ಬಲಪಡಿಸಲು, ಇನ್ಸ್ಟಿಟ್ಯೂಟ್ ಆಫ್ ಬಯೋಇನ್ಫರ್ಮ್ಯಾಟಿಕ್ಸ್ ಅಂಡ್ ಅಪ್ಲೈಡ್ ಬಯೋಟೆಕ್ನಾಲಜಿ, ಸೆಂಟರ್ ಫಾರ್ ಸೆಲ್ಯುಲಾರ್ ಅಂಡ್ ಮಾಲಿಕ್ಯುಲರ್ ಪ್ಲಾಟ್‌ಫಾರ್ಮ್ಸ್ ಮತ್ತು ನ್ಯಾಸ್ಕಾಮ್ ಸಹಯೋಗದೊಂದಿಗೆ ಒಟ್ಟು 16 ಕೋಟಿ ರೂ. ವೆಚ್ಚದಲ್ಲಿ ಎರಡು ಹೆಚ್ಚುವರಿ ಎಐ ಉತ್ಕೃಷ್ಟತಾ ಕೇಂದ್ರಗಳನ್ನು ಸ್ಥಾಪಿಸಲಾಗುವುದು. ಈ ಕೇಂದ್ರಗಳು ಸುಧಾರಿತ ಸಂಶೋಧನೆ, ಉದ್ಯಮ ಸಹಯೋಗ ಮತ್ತು ಮುಂದಿನ ಪೀಳಿಗೆಯ ಎಐ ಅಪ್ಲಿಕೇಶನ್‌ಗಳ ಅಭಿವೃದ್ಧಿಯ ಮೇಲೆ ಕೇಂದ್ರೀಕರಿಸುತ್ತವೆ.

ಶಿಕ್ಷಣಕ್ಕೆ 10 ಜಿಟಿಟಿಸಿ ಕೇಂದ್ರ ಸ್ಥಾಪನೆ

ಪ್ರಸಕ್ತ ವರ್ಷದಲ್ಲಿ ಈ ಎಲ್ಲಾ 104 ಶಾಲೆಗಳನ್ನು ಬಾಡಿಗೆ ಕಟ್ಟಡಗಳಲ್ಲಿ ಪ್ರಾರಂಭಿಸಲಾಗುವುದು ಎಂದು ಹೇಳಿದರು. ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ನೋಂದಾಯಿತ ಕಾರ್ಮಿಕರು ಹಾಗೂ ಅವರ ಮಕ್ಕಳಿಗೆ ವೃತ್ತಿ ಬುನಾದಿ ಹಾಗೂ ಉನ್ನತಿ ಕೌಶಲ್ಯ ತರಬೇತಿಯನ್ನು ನೀಡಲು ಹುಬ್ಬಳ್ಳಿ–ಧಾರವಾಡ ಮಹಾನಗರದಲ್ಲಿ ಅತ್ಯಾಧುನಿಕ ಮೂಲಸೌಕರ್ಯವನ್ನು ಅಕಾಡೆಮಿಯನ್ನು ಸ್ಥಾಪಿಸಲಾಗುವುದು ಎಂದರು. ವಿವಿಧ ವರ್ಗಗಳ ಅಸಂಘಟಿತ ಕಾರ್ಮಿಕರಿಗೆ ಕೌಶಲ್ಯಾಧಾರಿತ ಉದ್ಯೋಗ ದೊರಕಿಸಿಕೊಡುವ ಉದ್ದೇಶದಿಂದ ಆನ್‌ಲೈನ್ ಉದ್ಯೋಗ ವಿನಿಮಯ ಕೇಂದ್ರವನ್ನು ಸ್ಥಾಪಿಸುವ 'ಕಾಯಕ ಭಾಗ್ಯ' ಎಂಬ ಯೋಜನೆಯನ್ನು ಐದು ಕೋಟಿ ರೂ. ವೆಚ್ಚದಲ್ಲಿ ಜಾರಿಗೆ ತರಲಾಗುವುದು ಎಂದು ಮುಖ್ಯಮಂತ್ರಿ ತಿಳಿಸಿದರು.

ಕಾರ್ಮಿಕ ರಾಜ್ಯ ವಿಮಾ ಸೊಸೈಟಿಯ ರಚನೆಯಿಂದಾಗಿ ಪ್ರಸ್ತುತ ನೀಡಲಾಗುತ್ತಿರುವ ವೈದ್ಯಕೀಯ ಸೇವೆಗಳನ್ನು 50 ಲಕ್ಷ ವಿಮಾದಾರರಿಗೆ ಹಾಗೂ 150 ಲಕ್ಷ ಅವಲಂಬಿತರಿಗೆ ಇನ್ನಷ್ಟು ಪರಿಣಾಮಕಾರಿಯಾಗಿ ಒದಗಿಸಲಾಗುವುದು. ಹುಬ್ಬಳ್ಳಿ, ಇಂದಿರಾನಗರ, ಮೈಸೂರು ಮತ್ತು ದೊಡ್ಡಬಳ್ಳಾಪುರದಲ್ಲಿ ಪ್ಯಾರಾ ಮೆಡಿಕಲ್ ಕೋರ್ಸ್ ಹಾಗೂ ಇಂದಿರಾನಗರದಲ್ಲಿ ಮೂರು ವರ್ಷದ ಪಿಜಿ(ಡಿಎನ್‌ಬಿ) ಕೋರ್ಸ್‌ಗಳನ್ನು ಪ್ರಾರಂಭಿಸಲಾಗುವುದು ಎಂದು ಮುಖ್ಯಮಂತ್ರಿ ತಿಳಿಸಿದರು.

ನಿರ್ಣಯ; ಮದ್ಯಪ್ರಿಯರಿಗೆ ಶಾಕ್

ಆಧರಿಸಿದ ತೆರಿಗೆ ಪದ್ಧತಿಯು ಗೋಲ್ಡ್ ಸ್ಟ್ಯಾಂಡರ್ಡ್ ಆಗಿದೆ. ಏಪ್ರಿಲ್ 2026ರಿಂದ ಪಾನೀಯಗಳಲ್ಲಿ ಇರುವ ಮದ್ಯದ ಅಂಶವನ್ನು ಆಧಾರವಾಗಿಟ್ಟುಕೊಂಡು ಅಬಕಾರಿ ಸುಂಕ ವ್ಯವಸ್ಥೆಯನ್ನು ಜಾರಿಗೆ ತರಲು ತೀರ್ಮಾನಿಸಲಾಗಿದೆ. ಅಬಕಾರಿ ಸುಂಕ ಏಕರೂಪವಾಗಿರಲಿದೆ. ಮುಂದಿನ ಮೂರರಿಂದ ನಾಲ್ಕು ವರ್ಷಗಳಲ್ಲಿ, ಎಲ್ಲಾ ಪಾನೀಯಗಳ ಮೇಲೆ ಏಕರೂಪವಾಗಿ ಅನ್ವಯಿಸುವಂತೆ ಪ್ರತಿ ಲೀಟರ್‌ನಲ್ಲಿ ಮದ್ಯದ ಅಂಶವನ್ನು ಆಧರಿಸಿ ಅಬಕಾರಿ ಸುಂಕ ವಿಧಿಸುವ ಪ್ರಕ್ರಿಯೆಗೆ ಹಂತ–ಹಂತವಾಗಿ ಪರಿವರ್ತನೆಗೊಳ್ಳಲಿದೆ ಎಂದು ಬಜೆಟ್‌ನಲ್ಲಿ ಘೋಷಿಸಲಾಗಿದೆ.

ಮಾರುಕಟ್ಟೆ ಪರಿಗಣನೆ ಆಧಾರದ ಮೇಲೆ ಮದ್ಯ ಉತ್ಪನ್ನಗಳನ್ನು ಸ್ಲ್ಯಾಬ್‌ಗಳಲ್ಲಿ ಇರಿಸುವ ಅಧಿಕಾರವನ್ನು ಸಂಪೂರ್ಣವಾಗಿ ಉತ್ಪಾದಕರಿಗೆ ನೀಡಲಾಗುವುದು. ಮದ್ಯ ದರ ನಿಗದಿ ಸ್ಲ್ಯಾಬ್‌ಗಳನ್ನು ತರ್ಕಬದ್ಧಗೊಳಿಸುವ ಸಲುವಾಗಿ ಪ್ರಸ್ತುತ ಇರುವ 16 ಸ್ಲ್ಯಾಬ್‌ಗಳನ್ನು 8 ಸ್ಲ್ಯಾಬ್‌ಗಳಿಗೆ ಇಳಿಸಲು ತೀರ್ಮಾನಿಸಲಾಗಿದೆ.

2025–26ನೇ ಸಾಲಿನಲ್ಲಿ ಫೆಬ್ರವರಿ ತಿಂಗಳ ಅಂತ್ಯದವರೆಗೆ ಮದ್ಯದಿಂದ ಒಟ್ಟು 36,492 ಕೋಟಿ ರೂ. ಸಂಗ್ರಹಿಸಿದೆ. ಕಳೆದ ಸಾಲಿಗೆ ಹೋಲಿಸಿದರೆ ಶೇ.12.7ರಷ್ಟು ಬೆಳವಣಿಗೆಯಾಗಿದೆ. 2026–27 ಸಾಲಿಗೆ 45,000 ಕೋಟಿ ರೂ. ಸಂಗ್ರಹದ ಗುರಿ ಇಡಲಾಗಿದೆ. ತೆರಿಗೆ ಸೋರಿಕೆಯನ್ನು ತಡೆಯಲು ತಂತ್ರಜ್ಞಾನ ಆಧಾರಿತ ಬ್ಲಾಕ್‌ಚೈನ್ ಡಿಜಿಟಲ್ ಟ್ರ್ಯಾಕಿಂಗ್ ವ್ಯವಸ್ಥೆಗಳನ್ನು ಜಾರಿಗೆ ತರಲಾಗುತ್ತದೆ. ಮದ್ಯ ರವಾನೆಗೆ ಬೆಂಗಾವಲು ವ್ಯವಸ್ಥೆಯ ಬದಲಿಗೆ ಜಿಯೋ–ಫೆನ್ಸ್ ಇ–ಲಾಕ್ ವ್ಯವಸ್ಥೆಯನ್ನು ಅಳವಡಿಸಲಾಗುತ್ತದೆ. ಈ ಕ್ರಮಗಳು ಮೇಲ್ವಿಚಾರಣೆಗೆ ಅವಕಾಶ ಕಲ್ಪಿಸುವ ಮೂಲಕ ಪಾರದರ್ಶಕತೆಯನ್ನು ಹೆಚ್ಚಿಸಲಿದೆ.

ಡಿಪ್ಲೋಮಾ ಕೋರ್ಸ್

ಅಭಿವೃದ್ಧಿ. ಚಿಕ್ಕಮಗಳೂರು ಜಿಲ್ಲೆಯಲ್ಲಿ ಪ್ರವಾಸೋದ್ಯಮ ಅಭಿವೃದ್ಧಿಪಡಿಸಲು ಮುಳ್ಳಯ್ಯನಗಿರಿ–ಸೀತಾಳಯ್ಯನಗಿರಿಯಿಂದ ಕೈಮರದವರೆಗೆ ಪಿಪಿಪಿ ಮಾದರಿಯಲ್ಲಿ ರೋಪ್–ವೇ ನಿರ್ಮಾಣ. ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಸಮಗ್ರ ಮೂಲಸೌಕರ್ಯಗಳ ಅಭಿವೃದ್ಧಿಗಾಗಿ 10 ಕೋಟಿ ಒದಗಿಸಲಾಗುವುದು.

ಅಂಜನಾದ್ರಿ ಬೆಟ್ಟವನ್ನು ವಿಶ್ವ ಪ್ರಸಿದ್ಧ ಪ್ರವಾಸಿ ತಾಣವನ್ನಾಗಿ ಅಭಿವೃದ್ಧಿಪಡಿಸಲು 100 ಕೋಟಿ ವೆಚ್ಚದಲ್ಲಿ ಸಮಗ್ರ ಯೋಜನೆ ರೂಪಿಸಿದೆ. ಕೇಂದ್ರ ಸರ್ಕಾರದಿಂದ ಅರಣ್ಯ ಮತ್ತು ಪರಿಸರ ತೀರುವಳಿ ಹಾಗೂ ಯುನೆಸ್ಕೋ ಸಹಮತಿ ಪಡೆದು ಆದ್ಯತೆ ಮೇರೆಗೆ ಕಾಮಗಾರಿ ಪೂರ್ಣಗೊಳಿಸಲಾಗುವುದು.

15 ಸಾವಿರ ಬೋಧಕರ ನೇಮಕ

ಕಾಲೇಜುಗಳು ಮತ್ತು ವಿಶ್ವವಿದ್ಯಾಲಯಗಳು ಪ್ರಮುಖ ಪಾತ್ರ ವಹಿಸುತ್ತವೆ. ಈ ಕ್ಯಾಂಪಸ್‌ಗಳಲ್ಲಿ ಮಾದಕ ದ್ರವ್ಯ ಸೇವನೆಯ ಅಪಾಯವನ್ನು ನಿಗ್ರಹಿಸಲು ಸರ್ಕಾರವು ಜಾಗೃತಿ ಮತ್ತು ಶೈಕ್ಷಣಿಕ ಅಭಿಯಾನಗಳು, ಕಟ್ಟುನಿಟ್ಟಾದ ಶಿಸ್ತು ಮತ್ತು ಸಮರ್ಪಿತ ಬೆಂಬಲ ಮತ್ತು ಸಮಾಲೋಚನಾ ಕೇಂದ್ರಗಳನ್ನು ಸ್ಥಾಪಿಸುವುದು ಸೇರಿದಂತೆ ದೃಢವಾದ ಕ್ರಮಗಳನ್ನು ತೆಗೆದುಕೊಳ್ಳುತ್ತದೆ ಎಂದರು.

800 ಶಾಲೆ ಮೇಲ್ದರ್ಜೆಗೆ: ಉತ್ತಮ ಕಲಿಕಾ, ಉಜ್ವಲ ಭವಿಷ್ಯ ಎಂಬ ಘೋಷಣೆಯೊಂದಿಗೆ 800 ಶಾಲೆಗಳನ್ನು ಕರ್ನಾಟಕ ಸಾರ್ವಜನಿಕ ಶಾಲೆಗಳಾಗಿ(ಕೆಪಿಎಸ್) ಮೇಲ್ದರ್ಜೆಗೇರಿಸಲಾಗುವುದು.

ಗುಣಮಟ್ಟದ ಶಿಕ್ಷಣದಿಂದ ವಿದೇಶಿ ವಿವಿಗಳ ಹಾವಳಿ ತಡೆಯಬಹುದು

ಕಾರ್ಯಾಗಾರದಲ್ಲಿ ಡಾ.ಭಾಗ್ಯವಾನ್.ಎಸ್ ಮುದಿಗೌಡ ಪ್ರತಿಪಾದನೆ

ಮೈಸೂರು,ಮಾ.6(ಎಂಟಿವೈ)– ಸಾರ್ವಜನಿಕ ವಿಶ್ವವಿದ್ಯಾನಿಲಯ ಹಾಗೂ ಖಾಸಗಿ ವಿಶ್ವವಿದ್ಯಾನಿಲಯದ ನಡುವಿನ ಸ್ಪರ್ಧೆಯಲ್ಲಿ ವಿದೇಶಿ ವಿಶ್ವವಿದ್ಯಾನಿಲಯಗಳು ಕಾಣಿಸಿಕೊಳ್ಳುತ್ತಿದ್ದು, ಇನ್ನಾದರೂ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡಲು ಮುಂದಾಗಬೇಕು ಎಂದು ಉನ್ನತ ಶಿಕ್ಷಣ ಇಲಾಖೆಯ ಯೋಜನಾ ನಿರ್ದೇಶಕ ಡಾ.ಭಾಗ್ಯವಾನ ಎಸ್ ಮುದಿಗೌಡ ತಿಳಿಸಿದ್ದಾರೆ.

ಮೈಸೂರು ವಿಶ್ವವಿದ್ಯಾನಿಲಯದ ವಿಜ್ಞಾನ ಭವನದಲ್ಲಿ ಶುಕ್ರವಾರ ಕಾಲೇಜು ಪ್ರಾಂಶುಪಾಲರಿಗಾಗಿ ಆಯೋಜಿಸಿದ್ದ 'ಉನ್ನತ ಶಿಕ್ಷಣದಲ್ಲಿ ಗುಣಮಟ್ಟ ವರ್ಧನೆಗಾಗಿ ಪರಿಣಾಮಕಾರಿ ಆಡಳಿತ' ಕುರಿತ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡಿದ ಅವರು, ನಮ್ಮ ಸರ್ಕಾರಿ ಕಾಲೇಜುಗಳಲ್ಲಿ ಸ್ಮಾರ್ಟ್ ಕ್ಲಾಸ್ ರೂಮ್ ಸೇರಿದಂತೆ ಇತರ ಮೂಲಸೌಕರ್ಯಗಳು ಯಾವ ಖಾಸಗಿ ಕಾಲೇಜುಗಳಿಗೂ ಕಡಿಮೆ ಇಲ್ಲದಂತಿವೆ ಎಂದರು.

ಸರ್ಕಾರಿ ಶಾಲೆಗಳಿದ್ದ ಸ್ಥಳದಲ್ಲೇ ಖಾಸಗಿ ಶಾಲೆಗಳು ತಲೆ ಎತ್ತುತ್ತಿವೆ. ಸಾರ್ವಜನಿಕ ವಿಶ್ವ ವಿದ್ಯಾನಿಲಯ ಹಾಗೂ ಖಾಸಗಿ ವಿಶ್ವವಿದ್ಯಾನಿಲಯದ ನಡುವೆ ಇದ್ದ ಸ್ಪರ್ಧೆಯಲ್ಲಿ ವಿದೇಶಿ ವಿಶ್ವವಿದ್ಯಾನಿಲಯಗಳು ಕಾಣಿಸಿಕೊಳ್ಳುತ್ತಿದೆ. ರಾಜ್ಯದಲ್ಲಿ ಈ ವರ್ಷ ಮೂರು ಅಂತಾರಾಷ್ಟ್ರೀಯ ವಿದೇಶಿ ವಿಶ್ವವಿದ್ಯಾನಿಲಯಗಳು ಪ್ರಾರಂಭವಾಗುತ್ತಿವೆ. ಹೀಗಾಗಿ ಗುಣಮಟ್ಟದ ವಿಚಾರದಲ್ಲಿ ನಮ್ಮನ್ನು ನಾವು ಅವಲೋಕನ ಮಾಡಿಕೊಳ್ಳುವ ಸಂದರ್ಭ ಬಂದಿದೆ. ಅವಲೋಕನ ಮಾಡುವುದರ ಜತೆಗೆ ಕರಾರುವಕ್ಕಾದಂತಹ ದಿಕ್ಸೂಚಿ ಇಟ್ಟುಕೊಂಡು ಅದನ್ನು ನಾವು ಅನುಷ್ಠಾನ ಮಾಡುವ ಅವಶ್ಯಕತೆ ಹಾಗೂ ಅನಿವಾರ್ಯತೆ ಇದೆ ಎಂದು ತಿಳಿಸಿದರು.

ಪ್ರತಿಯೊಂದು ಕ್ಷೇತ್ರದಲ್ಲಿ ತಂತ್ರಜ್ಞಾನ ಮುಂದುವರೆದಿದೆ. ಎಐ ಎನ್ನುವುದು ಪ್ರತಿಯೊಂದು ವಲಯದಲ್ಲಿ ಹಾಸುಹೊಕ್ಕಾಗಿದೆ. ಎಐಗೆ ನಮಗೆ ಏನು ಬೇಕು ಎಂಬುದನ್ನು ಒಂದೆರಡು ಬಾರಿ ತಿಳಿಸಿದರೆ ಸಾಕು ಅದು ನಮ್ಮ ಮೈಂಡ್‌ಸೆಟ್ ಅರ್ಥ ಮಾಡಿಕೊಂಡು ನಮಗೆ ಬೇಕಾದನ್ನು ಕೊಡುತ್ತಿರುತ್ತದೆ. ಅಲ್ಲದೆ, ಅದು ನಮ್ಮ ಪ್ರತಿನಿತ್ಯದ ಚಟುವಟಿಕೆಗಳನ್ನು ನೋಡಿಕೊಂಡು ಅದರ ಇಂಟಲಿಜೆನ್ಸ್ ಅನ್ನು ಹೆಚ್ಚು ಅಭಿವೃದ್ಧಿ ಮಾಡಿಕೊಳ್ಳುತ್ತದೆ. ಎಐ ತಂತ್ರಜ್ಞಾನ ಇಂದು ಅವಶ್ಯಕತೆ ಇದೆ. ಇಂದಿನ ಮಕ್ಕಳು ನಮಗಿಂತ ಹೆಚ್ಚು ಮುಂದೆ ಇದ್ದಾರೆ. ಹೀಗಾಗಿ ಶಿಕ್ಷಕರು ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುವ ಅನಿವಾರ್ಯತೆ ಇದೆ. ಮುಖ್ಯವಾದ ಅಂಶಗಳನ್ನು ಅಳವಡಿಸಿಕೊಂಡು ಉನ್ನತ ಶಿಕ್ಷಣವನ್ನು ಇನ್ನೂ ಉತ್ತುಂಗಕ್ಕೆ ಕೊಂಡೊಯ್ಯಬೇಕು. ಮೈಸೂರು ಎಂದರೆ ಮಾದರಿ. ಈಗಲೂ ಸಹ ಮೈಸೂರು ಹಿಂದೆ ಬೀಳಬಾರದು ಎಂದು ಸಲಹೆ ನೀಡಿದರು.

ಕಾಲೇಜು ಶಿಕ್ಷಣ ಇಲಾಖೆಯ ಜಂಟಿ ನಿರ್ದೇಶಕರಾದ ಡಾ.ಡಿ.ಎಸ್.ಪ್ರತಿಮಾ ಮಾತನಾಡಿ, ಇಂದು ಗುಣಮಟ್ಟದ ಶಿಕ್ಷಣ ಅವಶ್ಯಕತೆ ಇದೆ. ನಾವು ಪದವಿಯಲ್ಲಿ ಗುಣಮಟ್ಟದ ಶಿಕ್ಷಣವನ್ನು ಅಳವಡಿಸಿಕೊಳ್ಳಲಿಲ್ಲ ವೆಂದರೆ ಇನ್ನಷ್ಟು ಕುಸಿತಗಳನ್ನು ಕಾಣುತ್ತೇವೆ. ಎಷ್ಟೋ ಕಾಲೇಜುಗಳಲ್ಲಿ ಸರಿಯಾಗಿ ತರಗತಿಗಳು ನಡೆಯುತ್ತಿಲ್ಲ ಎಂದರು.

ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್ ಮಾತನಾಡಿ, ಪ್ರಾಂಶುಪಾಲರಿಗೆ ಹೆಚ್ಚಿನ ಜವಬ್ದಾರಿ ಇರುತ್ತದೆ. ಒಂದು ವಿಶ್ವವಿದ್ಯಾನಿಲಯದಲ್ಲಿ ಯಾವುದಾದರೂ ಶಿಕ್ಷಣವನ್ನು ಉನ್ನತ ಮಟ್ಟಕ್ಕೆ ತೆಗೆದುಕೊಂಡು ಹೋಗಬೇಕೆಂದರೆ ಕಾಲೇಜು ಮುಖ್ಯವಾದ ಪಾತ್ರ ವಹಿಸುತ್ತದೆ. ಕಾಲೇಜಿನ ಹಂತದಲ್ಲಿಯೇ ಓದು ಸರಿಯಿದ್ದರೆ ವಿಶ್ವವಿದ್ಯಾನಿಲಯಗಳ ಶಿಕ್ಷಣದ ಗುಣಮಟ್ಟ ಹೆಚ್ಚಾಗಿಯೇ ಇರುತ್ತದೆ. ಹೀಗಾಗಿ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡಬೇಕು ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಕಾಲೇಜು ಅಭಿವೃದ್ಧಿ ಮಂಡಳಿಯ ನಿರ್ದೇಶಕ ಪ್ರೊ.ಕೆ.ಮಂಟೇಲಿಂಗು, ಮಾಳವೀಯ ಮಿಷನ್ ಶಿಕ್ಷಕರ ತರಬೇತಿ ಕೇಂದ್ರದ ನಿರ್ದೇಶಕರಾದ ಡಾ.ಹೆಚ್.ಪಿ.ಜ್ಯೋತಿ ಸೇರಿದಂತೆ ಇತರರು ಉಪಸ್ಥಿತರಿದ್ದರು.



ಮೈಸೂರು ವಿಶ್ವವಿದ್ಯಾನಿಲಯದ ವಿಜ್ಞಾನ ಭವನದಲ್ಲಿ ಶುಕ್ರವಾರ ಕಾಲೇಜು ಪ್ರಾಂಶುಪಾಲರಿಗಾಗಿ ಆಯೋಜಿಸಿದ್ದ 'ಉನ್ನತ ಶಿಕ್ಷಣದಲ್ಲಿ ಗುಣಮಟ್ಟ ವರ್ಧನೆಗಾಗಿ ಪರಿಣಾಮಕಾರಿ ಆಡಳಿತ' ಕುರಿತ ಕಾರ್ಯಾಗಾರವನ್ನು ಉನ್ನತ ಶಿಕ್ಷಣ ಇಲಾಖೆಯ ಯೋಜನಾ ನಿರ್ದೇಶಕ ಡಾ.ಭಾಗ್ಯವಾನ ಎಸ್ ಮುದಿಗೌಡ ಉದ್ಘಾಟಿಸಿದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ವಾದಂ (ತ) + ಮುಸ್ತಫಾ ಮುಸ್ತಫಾ (ತ)	2+2 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ರೈಸ್ ಆಫ್ ಅಶೋಕ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಓ ರೋಮಿಯೋ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ರಕ್ಕಸ ಪುರದೊಳ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಲ್ಯಾಂಡ್ ಲಾರ್ಡ್ (ಕ)	4 ಪ್ರದರ್ಶನಗಳು
ರಾಜಕಮಲ್	
ತಾಯಿ ಕಿಳವಿ (ತ)	4 ಪ್ರದರ್ಶನಗಳು
ಸಂಗಂ	
ಹಯಗ್ರೀವ (ಕ)	4 ಪ್ರದರ್ಶನಗಳು
ಲಿಡೋ	
ಮೆಜೆಸ್ಟಿಕ್–2 (ಕ)	2 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಓರಿಯೋ (ಕ) + ಜಯಕೃಷ್ಣ (ಕ)	2+2 ಪ್ರದರ್ಶನಗಳು

ರಾಜ್ಯ ಮಟ್ಟದ ಕ್ರೀಡಾಕೂಟದಲ್ಲಿ ಮೈಸೂರು ಸಮಾಜ ಕಲ್ಯಾಣ ಇಲಾಖೆಗೆ ಸಮಗ್ರ ಪ್ರಶಸ್ತಿ



ಮೈಸೂರು, ಮಾ.6(ಎಂಕೆ)– ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ನಡೆದ ರಾಜ್ಯಮಟ್ಟದ ಕ್ರೀಡಾಕೂಟ ಮತ್ತು ಸಾಂಸ್ಕೃತಿಕ ಸ್ಪರ್ಧೆಯಲ್ಲಿ ಮೈಸೂರು ಸಮಾಜ ಕಲ್ಯಾಣ ಇಲಾಖೆ ನೌಕರರ ತಂಡ ಸಮಗ್ರ ಪ್ರಶಸ್ತಿ ಪಡೆದಿದೆ.

ಮೈಸೂರು ವಿವಿ ಪೆವಿಲಿಯನ್ ಮೈದಾನದಲ್ಲಿ ನಡೆದ ಕ್ರೀಡಾಕೂಟದ ಪುರುಷ ಮತ್ತು ಮಹಿಳೆಯರ ವಿಭಾಗದ ಅತ್ಯುನ್ನತ ಪ್ರದರ್ಶನ ತೋರಿದ ಮೈಸೂರಿನ ಸಮಾಜ ಕಲ್ಯಾಣ ಇಲಾಖೆ ನೌಕರರು ಸಮಗ್ರ ಪ್ರಶಸ್ತಿ ಹಾಗೂ ಆಕರ್ಷಕ ಟ್ರೋಫಿಯನ್ನು ತಮ್ಮದಾಗಿಸಿಕೊಂಡಿದ್ದಾರೆ.

ಅನುದಾನ ಘೋಷಣೆ: ಕ್ರೀಡಾಕೂಟದಲ್ಲಿ ವಿಜೇತ ತಂಡಗಳಿಗೆ ಅಭಿನಂದನೆ ಸಲ್ಲಿಸಿರುವ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಜಿಲ್ಲಾ ಮಟ್ಟದ ಕ್ರೀಡಾಕೂಟ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳ ಆಯೋಜನೆಗೆ ತಲಾ 1 ಲಕ್ಷ ರೂ., ವಿಭಾಗ ಮಟ್ಟ (ನಾಲ್ಕು ವಿಭಾಗ)ದ ಕ್ರೀಡಾಕೂಟ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳ ಆಯೋಜನೆ 5 ಲಕ್ಷ ರೂ.ಹಾಗೂ ರಾಜ್ಯ ಮಟ್ಟದ ಕ್ರೀಡಾಕೂಟ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳ ಆಯೋಜನೆಗೆ 50 ಲಕ್ಷ ರೂ. ಅನುದಾನ ಘೋಷಣೆ ಮಾಡಿದ್ದಾರೆ.

ಎಲ್‌ಪಿಜಿ ಉತ್ಪಾದನೆ ಹೆಚ್ಚಿಸಲು ಸಂಸ್ಕರಣಾ ಘಟಕಗಳಿಗೆ ಕೇಂದ್ರದ ಆದೇಶ

ನವದೆಹಲಿ, ಮಾ.6– ಮಧ್ಯಪ್ರಾಚ್ಯದಲ್ಲಿನ ಬಿಕ್ಕಟ್ಟಿನಿಂದ ಎಲ್‌ಪಿಜಿ ಪೂರೈಕೆಯಲ್ಲಿ ವ್ಯತ್ಯಯವುಂಟಾಗಿರುವ ಹಿನ್ನೆಲೆಯಲ್ಲಿ ಅಡುಗೆ ಇಂಧನದ ಕೊರತೆಯನ್ನು ತಡೆಗಟ್ಟಲು ಎಲ್‌ಪಿಜಿ ಉತ್ಪಾದನೆಯನ್ನು ಗರಿಷ್ಠಗೊಳಿಸುವಂತೆ ಸಂಸ್ಕರಣಾ ಘಟಕಗಳಿಗೆ ತುರ್ತು ಅಧಿಕಾರ ಬಳಸಿ ಕೇಂದ್ರ ಸರ್ಕಾರ ಆದೇಶಿಸಿದೆ.

ಮನೆಗಳಿಗೆ ವಿತರಿಸುವ ಎಲ್‌ಪಿಜಿಗಾಗಿ ಸರ್ಕಾರಿ ಸ್ವಾಮ್ಯದ ಇಂಡಿಯನ್ ಆಯಿಲ್ ಕಾರ್ಪೋರೇಷನ್, ಹಿಂದುಸ್ಥಾನ್ ಪೆಟ್ರೋಲಿಯಂ ಕಾರ್ಪೋರೇಷನ್ ಮತ್ತು ಭಾರತ್ ಪೆಟ್ರೋಲಿಯಂ ಕಾರ್ಪೋರೇಷನ್ ಗಳಿಗೆ ಪ್ರೋಪೇನ್ ಮತ್ತು ಬ್ಯುಟೇನ್ ಲಭ್ಯವಾಗುವಂತೆ ನೋಡಿಕೊಳ್ಳಲು ಉತ್ಪಾದಕರಿಗೆ ಸೂಚಿಸಿದೆ.

ವಿಶ್ವದ 2ನೇ ಅತಿ ದೊಡ್ಡ ಎಲ್‌ಪಿಜಿ ಆಮದು ದೇಶವಾಗಿರುವ ಭಾರತವು (India) ಕಳೆದ ವರ್ಷ 33.15 ಮಿಲಿಯನ್ ಮೆಟ್ರಿಕ್ ಟನ್ ಅಡುಗೆ ಅನಿಲವನ್ನು ಬಳಸಿದೆ. ದೇಶದಲ್ಲಿ ಬಳಕೆಯಾಗುತ್ತಿರುವ ಎಲ್‌ಪಿಜಿಯಲ್ಲಿ ಆಮದುಗಳು ಸುಮಾರು ಮೂರನೇ ಎರಡರಷ್ಟು ಪಾಲು ಹೊಂದಿದೆ. ಈ ಪೈಕಿ ಸುಮಾರು ಶೇ.85–90ರಷ್ಟನ್ನು ಮಧ್ಯಪ್ರಾಚ್ಯವು ಪೂರೈಸುತ್ತದೆ.

ಸರ್ಕಾರಿ ಅಂಕಿಅಂಶಗಳ ಪ್ರಕಾರ ದೇಶದಲ್ಲಿ ಸುಮಾರು 33.20 ಕೋಟಿ ಸಕ್ರಿಯ ಎಲ್‌ಪಿಜಿ ಗ್ರಾಹಕರಿದ್ದಾರೆ. ಎಲ್‌ಪಿಜಿ ಉತ್ಪಾದನೆಗಾಗಿ ಕಡ್ಡಾಯವಾಗಿ ಪ್ರೋಪೇನ್ ಮತ್ತು ಬ್ಯುಟೇನ್ ಬಳಕೆಯಿಂದಾಗಿ ರಿಲಯನ್ಸ್ ಇಂಡಸ್ಟ್ರೀಸ್‌ನಿಂದ ಗ್ಯಾಸೋಲಿನ್ ಮಿಶ್ರಣ ಘಟಕದಲ್ಲಿ ಉತ್ಪಾದನೆಯನ್ನು ಮೊಟಕುಗೊಳಿಸಿತ್ತು. ಈ ರೀತಿ ಕೊರತೆ ಉಂಟಾಗುವುದನ್ನು ತಡೆಯಲು ಪೆಟ್ರೋಕೆಮಿಕಲ್‌ಗಳ ಉತ್ಪಾದನೆಗೆ ಪ್ರೋಪೇನ್ ಮತ್ತು ಬ್ಯುಟೇನ್ ಪೂರೈಸದಂತೆಯೂ ಸರ್ಕಾರ ಸಂಸ್ಕರಣಾಗಾರಗಳಿಗೆ ಆದೇಶಿಸಿದೆ.

ಜೆಎಸ್‌ಎಸ್ ಅರ್ಬನ್ ಹಾತ್‌ನಲ್ಲಿ 10 ದಿನಗಳ ಕರಕುಶಲ, ಕೈಮಗ್ಗ ಉತ್ಪನ್ನಗಳ ಪ್ರದರ್ಶನ, ಮಾರಾಟಕ್ಕೆ ಚಾಲನೆ

ಮೈಸೂರು, ಮಾ.6(ವಿವಿಹೆಚ್)– ಮೈಸೂರಿನ ಹೊರವಲಯದ ಹೆಬ್ಬಾಳಿನಲ್ಲಿರುವ ಜೆಎಸ್‌ಎಸ್ ಮೈಸೂರು ಅರ್ಬನ್ ಹಾತ್ ಗಾಂಧಿ ಶಿಲ್ಪ ಬಜಾರ್‌ನಲ್ಲಿ ಕೇಂದ್ರ ಸರ್ಕಾರ ಅಭಿವೃದ್ಧಿ ಆಯುಕ್ತರು (ಕರಕುಶಲ) ಜವಳಿ ಸಚಿವಾಲಯದ ಪ್ರಾಯೋಜಕತ್ವದಲ್ಲಿ ಆಯೋಜಿಸಿರುವ 10 ದಿನಗಳ 152ನೇ ಕರಕುಶಲ ಮತ್ತು ಕೈಮಗ್ಗ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ ಮೇಳಕ್ಕೆ ಕೇಂದ್ರ ರೇಷ್ಮೆ ಮಂಡಳಿ ಕೇಂದ್ರ ರೇಷ್ಮೆ ಸಂಶೋಧನೆ ಮತ್ತು ತರಬೇತಿ ಸಂಸ್ಥೆ ಮೈಸೂರು ನಿರ್ದೇಶಕಿ ಡಾ.ಪಿ.ದೀಪಾ ಶುಕ್ರವಾರ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಅವರು, 10 ದಿನಗಳು ಈ ಮೇಳ ನಡೆಯಲಿದ್ದು, ಸಾರ್ವಜನಿಕರು ಹೆಚ್ಚು ಭೇಟಿ ನೀಡಿ ಮೇಳವನ್ನು ಯಶಸ್ವಿಗೊಳಿಸಬೇಕು. ಕರಕುಶಲ ಮತ್ತು ಕೈಮಗ್ಗ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟಕ್ಕೆ ಪ್ರೋತ್ಸಾಹ ನೀಡಿ ದೇಶಿಯ ವಸ್ತುಗಳ ಬಳಕೆಗೆ ಒತ್ತು ನೀಡಬೇಕಿದೆ ಎಂದರು.

ಕೇಂದ್ರ ಸರ್ಕಾರ ಕರಕುಶಲ ಮತ್ತು ಕೈಮಗ್ಗ ಉತ್ಪನ್ನದ ಉದ್ದಿಮೆಯನ್ನು ಪ್ರಚಾರಗೊಳಿಸುವ ಕಾರ್ಯವನ್ನು ಮಾಡುತ್ತಿದೆ. ದೇಸಿ ವಸ್ತುಗಳ ಬಳಕೆಯಿಂದ ಸ್ಥಳೀಯ ಕಲೆಗಳಿಗೆ ಪ್ರೋತ್ಸಾಹಿಸಿದಂತಾಗುತ್ತದೆ ಎಂದು ತಿಳಿಸಿದರು.

ಗಾಂಧಿ ಶಿಲ್ಪ ಬಜಾರ್‌ನಲ್ಲಿ ಏನೇನಿದೆ?: ದೇಶದ ವಿವಿಧ ರಾಜ್ಯಗಳಿಂದ ಕರಕುಶಲ ಕರ್ಮಿಗಳು ಹಾಗೂ ಕೈಮಗ್ಗ ನೇಕಾರರು ಕರಕುಶಲ ಮತ್ತು ಕೈಮಗ್ಗ ಉತ್ಪನ್ನಗಳ ಪ್ರದರ್ಶನ ಮತ್ತು ಮಾರಾಟ ಮಾಡ ಲಿದ್ದು, ಕುಶಲಕರ್ಮಿಗಳಿಗೆ ಉಚಿತವಾಗಿ ಮಳಿಗೆಗಳನ್ನು ನೀಡಲಾಗುವುದು. ಜತೆಗೆ, ಪ್ರಯಾಣ ಭತ್ಯೆ, ದಿನಭತ್ಯೆಯನ್ನೂ ಕರಕುಶಲ ಅಭಿವೃದ್ಧಿ ಆಯುಕ್ತರ ಕಚೇರಿಯಿಂದ ನೀಡಲಾಗಿದ್ದು, 70 ಮಳಿಗೆಗಳನ್ನು ಅಳವಡಿಸಲಾಗಿದೆ.

ಮೇಳದಲ್ಲಿ ಮರದ ಕೆತ್ತನೆ, ಶಿಲಾ ಶಿಲ್ಪ, ಕಂಚಿನ ವಿಗ್ರಹಗಳು, ಮರದ ಕುಂದಣ ಕಲೆ, ಮಣ್ಣಿನ ಮಡಿಕೆಗಳು, ಪೇಪರ್, ರತ್ನಗಂಬಳಿ, ಹತ್ತಿ ಜಮಕಾನ, ಇಮಿಟೇಶನ್ ಆಭರಣಗಳು, ಮರದ ಅರಗಿನ ಕಲಾವಸ್ತುಗಳು, ಬೋಟಿಕ್, ಕಲಾಂಕಾರಿ ಚಿತ್ರಕಲೆ, ಚರ್ಮದ ಆಕರ್ಷಕ ವಸ್ತುಗಳು, ಕಲಾತ್ಮಕ ಚರ್ಮದ ಚಪ್ಪಲಿಗಳು, ಚನ್ನಪಟ್ಟಣದ ಗೊಂಬೆಗಳು, ಕಸೂತಿ ಕಲೆ, ತಮಿಳುನಾಡು ರಾಜ್ಯದ ಮರದ ಕೆತ್ತನೆಗಳು ನಾಜೂಕಿನ ಕಲಾಕೃತಿಗಳು ಕಣ್ಮನ ಸೆಳೆಯಲಿವೆ.

ಉದ್ಘಾಟನಾ ಸಮಾರಂಭದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್, ಕೇಂದ್ರ ಸರ್ಕಾರ ಜವಳಿ ಮಂತ್ರಾಲಯ ಕರಕುಶಲ ಸೇವಾ ಕೇಂದ್ರ ಮೈಸೂರು ಸಹಾಯಕ ನಿರ್ದೇಶಕ ಎಸ್.ವಿನೋದ್ ಕುಮಾರ್, ಜೆಎಸ್‌ಎಸ್ ಅರ್ಬನ್ ಹಾತ್‌ನ ರಾಕೇಶ್ ಉಪಸ್ಥಿತರಿದ್ದರು.



ಡಾ.ಪಿ.ದೀಪಾ ಬಂಗಾಳದ ಕಾಂತಾ ಸೀರೆಯ ಬಗ್ಗೆ ಮಾಹಿತಿ ಪಡೆಯುತ್ತಿರುವುದು.

ಅಭಿನಂದನೆ...



ಮೈಸೂರು ನಗರ ಬಿಜೆಪಿ ಯುವಮೋರ್ಚಾ ಅಧ್ಯಕ್ಷ ರಾಕೇಶ್‌ಗೌಡ ಅವರ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಅವರನ್ನು ಕೆ.ಜಿ.ಕೊಪ್ಪಲು ಮಾರಮ್ಮ ದೇವಸ್ಥಾನ ಸಮಿತಿ ವತಿಯಿಂದ ಅಭಿನಂದಿಸಿ, ಶುಭಾಶಯ ಕೋರಲಾಯಿತು.

'ಮೈಸೂರು ಮಿತ್ರ' ವರದಿ ಫಲಶ್ರುತಿ ; ಮೈಸೂರು ಬನ್ನಿಮಂಟಪ ಹೈವೇ ವೃತ್ತದ ಬಳಿಯ

ನೀರಿನ ಪೈಪ್‌ಲೈನ್ ಕಾಮಗಾರಿಗೆ ಮಂಗಳ ಹಾಡಿದ ವಾಣಿ ವಿಲಾಸ ನೀರು ಸರಬರಾಜು ಕಾರ್ಯಾಗಾರ!



ಮೈಸೂರಿನ ಬನ್ನಿಮಂಟಪ ಹೈವೇ ವೃತ್ತ ಸಮೀಪದ ಜಾವಾ ರಸ್ತೆಯಲ್ಲಿ ನೀರಿನ ಪೈಪ್‌ಲೈನ್ ದುರಸ್ತಿ ಕಾಮಗಾರಿ ಪೂರ್ಣಗೊಳಿಸಿ ಗುಂಡಿ ಮುಚ್ಚಿರುವುದು.

ಮೈಸೂರು,ಮಾ.6(ಪಿಎಂ)– ನೀರಿನ ಪೈಪ್‌ಲೈನ್ ದುರಸ್ತಿ ಕಾಮಗಾರಿ ಸಲುವಾಗಿ ಮೈಸೂರಿನ ಬನ್ನಿಮಂಟಪ ಹೈವೇ ವೃತ್ತದ ಬಳಿ ಜಾವಾ ರಸ್ತೆಯಲ್ಲಿ ಹಲವು ದಿನಗಳ ಹಿಂದೆ ತೆಗೆದಿದ್ದ ಭಾರೀ ಗುಂಡಿಯನ್ನು ಮುಚ್ಚಲಾಗಿದೆ.

'ಆಮೆಗತಿಯಲ್ಲಿ ಸಾಗುತ್ತಿರುವ ನೀರಿನ ಪೈಪ್‌ಲೈನ್ ದುರಸ್ತಿ ಕಾಮಗಾರಿ; ವಾಹನ ಸವಾರರು, ಪಾದಚಾರಿಗಳ ಸಂಚಾರಕ್ಕೆ ಸಂಚಕಾರ' ಶೀರ್ಷಿಕೆಯಡಿ 'ಮೈಸೂರು ಮಿತ್ರ'ನ ಶುಕ್ರವಾರದ ಸಂಚಿಕೆಯಲ್ಲಿ ವರದಿ ಪ್ರಕಟಿಸಿ ಕಾಮಗಾರಿ ವಿಳಂಬವಾಗುತ್ತಿದೆ ಎಂಬ ಸಾರ್ವಜನಿಕರ ದೂರು ಸಂಬಂಧ ಅಧಿಕಾರಿಗಳ ಗಮನ ಸೆಳೆಯಲಾಗಿತ್ತು.

ವರದಿ ಪ್ರಕಟವಾದ ದಿನವೇ (ಶುಕ್ರವಾರ) ದುರಸ್ತಿ ಕಾಮಗಾರಿ ಪೂರ್ಣಗೊಳಿಸಿ ಗುಂಡಿಯನ್ನು ಮುಚ್ಚಿ ಸಮತಟ್ಟು ಮಾಡಲಾಗಿದೆ. ಗುಂಡಿ ತೆಗೆದ ಪರಿಣಾಮ ರಸ್ತೆಯಲ್ಲಿ ರಾಶಿ ರಾಶಿ ಮಣ್ಣು ಬಿದ್ದು ವಾಹನ ಸವಾರರು, ಪಾದಚಾರಿಗಳು ಇಲ್ಲಿ ಸುಗಮವಾಗಿ ಸಂಚರಿಸಲಾಗದೇ ಪರದಾಡುವ ಸನ್ನಿವೇಶ ನಿರ್ಮಾಣವಾಗಿದ್ದನ್ನು ಶುಕ್ರವಾರದ ವರದಿಯಲ್ಲಿ ಉಲ್ಲೇಖಿಸಲಾಗಿತ್ತು. ಕಾಮಗಾರಿ ನಡೆಸುತ್ತಿದ್ದ ವಾಣಿವಿಲಾಸ ನೀರು ಸರಬರಾಜು ಕಾರ್ಯಾಲಯದ ಅಧಿಕಾರಿಗಳು ವರದಿ ಬೆನ್ನಲ್ಲೇ ಎಚ್ಚೆತ್ತುಕೊಂಡು ಕ್ರಮ ವಹಿಸಿದ್ದು, ಗುಂಡಿಯನ್ನು ಮುಚ್ಚಲಾಗಿದೆ. ಈ ಜಾಗದಲ್ಲಿ ನೀರಿನ ಪೈಪ್‌ಲೈನ್ ಒಡೆದು ಸೋರಿಕೆಯಾಗುತ್ತಿದ್ದ ಹಿನ್ನೆಲೆಯಲ್ಲಿ ದುರಸ್ತಿ ಕಾಮಗಾರಿ ಕೈಗೆತ್ತಿಕೊಳ್ಳಲಾಗಿತ್ತು. ಇದೀಗ ಈ ಜಾಗದಲ್ಲಿ ಡಾಂಬರು ಹಾಕಿ ಸುಗಮ ಸಂಚಾರಕ್ಕೆ ವ್ಯವಸ್ಥೆ ಮಾಡುವ ಕೆಲಸ ಬಾಕಿ ಉಳಿದಿದೆ.

ರಷ್ಯಾ ತೈಲ ಖರೀದಿಸಲು ಭಾರತಕ್ಕೆ 30 ದಿನಗಳ ವಿನಾಯಿತಿ ಘೋಷಿಸಿದ ಅಮೆರಿಕ



ನವದೆಹಲಿ: ಇರಾನ್‌ನೊಂದಿಗೆ ಹೆಚ್ಚುತ್ತಿರುವ ಸಂಘರ್ಷದ ನಡುವೆ, ಅಮೆರಿಕಾ ಭಾರತಕ್ಕೆ ತಾತ್ಕಾಲಿಕವಾಗಿ 30 ದಿನಗಳ ವಿನಾಯಿತಿ ನೀಡುವುದಾಗಿ ಘೋಷಿಸಿದೆ. ಈ ವಿನಾಯಿತಿಯ ಮೂಲಕ ಭಾರತೀಯ ಶುದ್ಧೀಕರಣ ಸಂಸ್ಥೆಗಳು ರಷ್ಯಾದ ತೈಲವನ್ನು ಖರೀದಿಸಲು ಅವಕಾಶ ಪಡೆಯಲಿವೆ.

ಅಮೆರಿಕಾ ಸರ್ಕಾರ, ರಷ್ಯಾ ಮೇಲಿನ ಆರ್ಥಿಕ ನಿರ್ಬಂಧಗಳನ್ನು ತಾತ್ಕಾಲಿಕವಾಗಿ ಸಡಿಲಿಸಿ, ಸಮುದ್ರ ಮಧ್ಯೆ ಸಿಕ್ಕಿಹಾಕಿಕೊಂಡಿರುವ ರಷ್ಯಾದ ತೈಲವನ್ನು ಭಾರತಕ್ಕೆ ಮಾರಾಟ ಮಾಡಲು ಅನುಮತಿ ನೀಡಿತು.

ಅಮೆರಿಕದ ಖಜಾನೆ ಕಾರ್ಯದರ್ಶಿ ಸ್ಕಾಟ್ ಬೆಸ್ಸೆಂಟ್ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಇಂಧನ ನೀತಿಯ ಪರಿಣಾಮವಾಗಿ ತೈಲ ಮತ್ತು ಅನಿಲ ಉತ್ಪಾದನೆ ಇತಿಹಾಸದಲ್ಲೇ ಅತೀ ಗರಿಷ್ಠ ಮಟ್ಟ ತಲುಪಿದೆ. ಜಾಗತಿಕ ಮಾರುಕಟ್ಟೆಗೆ ತೈಲ ಸರಬರಾಜು ನಿರಂತರವಾಗಿ ಸಾಗಲು ಅವಕಾಶ ನೀಡಲು, ಖಜಾನೆ ಇಲಾಖೆ ಭಾರತೀಯ ರಿಫೈನರಿಗಳಿಗೆ ರಷ್ಯಾದ ತೈಲವನ್ನು ಖರೀದಿಸಲು 30 ದಿನಗಳ ತಾತ್ಕಾಲಿಕ ವಿನಾಯಿತಿಯನ್ನು ನೀಡುತ್ತಿದೆ ಎಂದರು.

ಇದು ಉದ್ದೇಶಪೂರ್ವಕವಾಗಿ ಕೇವಲ ಸ್ವಲ್ಪಕಾಲದ ಕ್ರಮವಾಗಿದ್ದು, ರಷ್ಯಾ ಸರ್ಕಾರಕ್ಕೆ ದೊಡ್ಡ ಆರ್ಥಿಕ ಲಾಭವಾಗುವುದಿಲ್ಲ. ಏಕೆಂದರೆ ಈ ವಿನಾಯಿತಿ ಈಗಾಗಲೇ ಸಮುದ್ರದಲ್ಲಿ ಸಿಲುಕಿರುವ ತೈಲಕ್ಕೆ ಸಂಬಂಧಿಸಿದ ವ್ಯವಹಾರಗಳಿಗೆ ಮಾತ್ರ ಅನುಮತಿ ನೀಡುತ್ತದೆ ಎಂದು ಸ್ಪಷ್ಟಪಡಿಸಿದರು.

ಭಾರತ ಅಮೆರಿಕದ ಪ್ರಮುಖ ಪಾಲುದಾರ ದೇಶವಾಗಿದೆ. ಭಾರತ ಮುಂದಿನ ದಿನಗಳಲ್ಲಿ ಅಮೆರಿಕದ ತೈಲ ಖರೀದಿಯನ್ನು ಹೆಚ್ಚಿಸುತ್ತದೆ ಎಂಬ ನಿರೀಕ್ಷೆ ನಮಗಿದೆ. ಇರಾನ್ ಜಾಗತಿಕ ಇಂಧನ ಸರಬರಾಜನ್ನು ಒತ್ತೆಯಿಡಲು ಮಾಡುವ ಪ್ರಯತ್ನಗಳಿಂದ ಉಂಟಾಗಿರುವ ಒತ್ತಡವನ್ನು ಕಡಿಮೆ ಮಾಡಲು ಈ ತಾತ್ಕಾಲಿಕ ಕ್ರಮ ಸಹಾಯಕವಾಗುತ್ತದೆ ಎಂದು ಬೆಸೆಂಟ್ ಅವರು ಎಕ್ಸ್ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.

ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಭಾರತ ರಷ್ಯಾದಿಂದ ತೈಲವನ್ನು ಖರೀದಿಸುತ್ತಿರುವ ಹಿನ್ನೆಲೆಯಲ್ಲಿ 25 ಶೇಕಡಾ ದಂಡಾತ್ಮಕ ಸುಂಕವನ್ನು ವಿಧಿಸಿದ್ದರು. ಅಮೆರಿಕಾ ಆಡಳಿತದ ಪ್ರಕಾರ, ಭಾರತದ ಈ ಖರೀದಿಗಳು ರಷ್ಯಾ–ಉಕ್ರೇನ್ ಯುದ್ಧಕ್ಕೆ ಹಣಕಾಸು ಸಹಾಯವಾಗುತ್ತಿದೆ ಎಂಬ ಆರೋಪ ಮಾಡಲಾಗಿತ್ತು.

ಕಳೆದ ತಿಂಗಳು ಅಮೆರಿಕಾ ಮತ್ತು ಭಾರತ ಮಧ್ಯಂತರ ವ್ಯಾಪಾರ ಒಪ್ಪಂದದ ಚೌಕಟ್ಟಿಗೆ ಒಪ್ಪಿಕೊಂಡಿರುವುದಾಗಿ ಘೋಷಿಸಲಾಯಿತು. ಅದರ ನಂತರ ಡೊನಾಲ್ಡ್ ಟ್ರಂಪ್ 25 ಶೇಕಡಾ ದಂಡಾತ್ಮಕ ಸುಂಕವನ್ನು ರದ್ದುಗೊಳಿಸುವ ಕಾರ್ಯನಿರ್ವಹಣಾ ಆದೇಶ ಹೊರಡಿಸಿದರು. ಭಾರತ ರಷ್ಯಾದಿಂದ ಇಂಧನ ಆಮದುಗಳನ್ನು ನಿಲ್ಲಿಸಿ ಅಮೆರಿಕಾದ ಇಂಧನ ಉತ್ಪನ್ನಗಳನ್ನು ಹೆಚ್ಚು ಖರೀದಿಸುವುದಾಗಿ ಬದ್ಧತೆ ವ್ಯಕ್ತಪಡಿಸಿದ್ದರಿಂದ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಅವರು ತಿಳಿಸಿದ್ದಾರೆ.

ಇರಾನ್ ಸಂಧಾನಕ್ಕೆ ಮುಂದಾಗಿದೆ: ಟ್ರಂಪ್

ನೀವು ಸ್ವಲ್ಪ ತಡವಾಗಿ ಬಂದಿದ್ದೀರಿ ಎಂದು ಹೇಳಿದೆ!

ವಾಷಿಂಗ್‌ಟನ್: ಅಮೆರಿಕಾ ಮತ್ತು ಇಸ್ರೇಲ್ ಇರಾನ್ ಮೇಲೆ ನಡೆಸುತ್ತಿರುವ ದಾಳಿಗಳ ಮಧ್ಯೆ ಟೆಹ್ರಾನ್ ಅಮೆರಿಕ ಜೊತೆ ಒಪ್ಪಂದ ಮಾಡಲು ಸಂಪರ್ಕ ಸಾಧಿಸುತ್ತಿದೆ. ಆದರೆ ಈ ವಿನಂತಿ ಸ್ವಲ್ಪ ತಡವಾಗಿ ಬಂದಿದೆ ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದ್ದು, ಈಗ ಅಮೆರಿಕಾ ಅವರಿಗಿಂತ ಹೆಚ್ಚು ಹೋರಾಡಲು ಬಯಸುತ್ತಿದೆ ಎಂದರು.

ಟ್ರಂಪ್ ಅವರ ಮಾತಿನಂತೆ, ಅಮೆರಿಕದ ಸೈನ್ಯ ಇಸ್ರೇಲಿ ಪಡೆಗಳೊಂದಿಗೆ ಸಮನ್ವಯವಾಗಿ ಕಾರ್ಯನಿರ್ವಹಿಸುತ್ತಿದ್ದು, ಇರಾನ್‌ನ ಕ್ಷಿಪಣಿ ಮತ್ತು ಡ್ರೋನ್ ಸಾಮರ್ಥ್ಯವನ್ನು ಪ್ರತಿ ಗಂಟೆಯೂ ನಾಶ ಮಾಡುತ್ತಿದೆ. ಇರಾನ್ ಕಡೆಯಿಂದ ಕರೆ ಬರುತ್ತಿದೆ. ಒಪ್ಪಂದವನ್ನು ಹೇಗೆ ಮಾಡಬಹುದು ಎಂದು ಕೇಳುತ್ತಿದ್ದಾರೆ. ನಾನು ಅವರಿಗೆ ನೀವು ಸ್ವಲ್ಪ ತಡವಾಗಿ ಬಂದಿದ್ದೀರಿ ಎಂದು ಹೇಳಿದೆ. ಈಗ ನಾವು ಅವರಿಗಿಂತ ಹೆಚ್ಚು ಹೋರಾಡಲು ಬಯಸುತ್ತೇವೆ ಎಂದು ಟ್ರಂಪ್ Inter Miami ಅಂತಃ ಫುಟ್‌ಬಾಲ್ ತಂಡದೊಂದಿಗೆ ನಡೆದ ಕಾರ್ಯಕ್ರಮದಲ್ಲಿ ಮಾತನಾಡುವ ವೇಳೆ ಹೇಳಿದರು.

ಇದೇ ವೇಳೆ, ನಡೆಯುತ್ತಿರುವ Operation Epic Fury ಕಾರ್ಯಾಚರಣೆಯಲ್ಲಿ ಇರಾನ್‌ನ ಕ್ಷಿಪಣಿ ಮತ್ತು ಡ್ರೋನ್ ಮೂಲಸೌಕರ್ಯವನ್ನು ಗುರಿಯಾಗಿಸಲಾಗಿದೆ ಎಂದು ಟ್ರಂಪ್ ಹೇಳಿದರು.

ಅಮೆರಿಕದ ಸೈನ್ಯ, ನಮ್ಮ ಇಸ್ರೇಲಿ ಸಹಭಾಗಿಗಳೊಂದಿಗೆ ಸೇರಿ, ನಿರೀಕ್ಷಿತ ವೇಳೆಗೆ ಮುಂಚೆಯೇ ಮತ್ತು ಜನರು ಎಂದಿಗೂ ನೋಡದ ಮಟ್ಟದಲ್ಲಿ ಶತ್ರುವನ್ನು ಧ್ವಂಸಗೊಳಿಸುತ್ತಿದೆ. ನಾವು ಪ್ರತಿ ಗಂಟೆಯೂ ಇರಾನ್‌ನ ಹೆಚ್ಚಿನ ಕ್ಷಿಪಣಿ ಮತ್ತು ಡ್ರೋನ್ ಸಾಮರ್ಥ್ಯವನ್ನು ನಾಶಪಡಿಸುತ್ತಿದ್ದೇವೆ ಎಂದು ಹೇಳಿದರು.

ಅವರಿಗೆ ಏನು ನಡೆಯುತ್ತಿದೆ ಎಂಬುದು ಗೊತ್ತಾಗುತ್ತಿಲ್ಲ. ಅವರ ನೌಕಾಪಡೆ ಬಹುತೇಕ ನಾಶವಾಗಿದೆ ಮೂರು ದಿನ ಗಳಲ್ಲಿ 24 ಹಡಗುಗಳು ಕಳೆದುಹೋಗಿವೆ. ಅವರ ವಾಯು ರಕ್ಷಣಾ ವ್ಯವಸ್ಥೆ ನಾಶವಾಗಿದೆ, ಆದ್ದರಿಂದ ಅವರಿಗೆ ವಾಯು ಪಡೆ ಇಲ್ಲ. ಅವರ ಎಲ್ಲಾ ವಿಮಾನಗಳು ಹೋಗಿವೆ. ಅವರ ಸಂಪರ್ಕ ವ್ಯವಸ್ಥೆ, ಕ್ಷಿಪಣಿಗಳು ಮತ್ತು ಲಾಂಚರ್‌ಗಳು ಸಹ ನಾಶವಾಗಿವೆ ಎಂದರು.

ಟ್ರಂಪ್ ಇರಾನ್ ಸೈನ್ಯಕ್ಕೆ ಶಸ್ತ್ರಾಸ್ತ್ರಗಳನ್ನು ತ್ಯಜಿಸಿ, ಇಲ್ಲವಾದರೆ ಅವರು ಕೊಲ್ಲಲ್ಪಡುವ ಸಾಧ್ಯತೆ ಇದೆ ಎಂದು ಹೇಳಿದರು. ನಾನು ಮತ್ತೊಮ್ಮೆ ಇಸ್ಲಾಮಿಕ್ ರೆವೆಲ್ಯೂಷನರಿ ಗಾರ್ಡ್ ಕಾರ್ಪ್ಸ್ ಸೈನ್ಯ ಮತ್ತು ಪೊಲೀಸರ ಎಲ್ಲಾ ಸದಸ್ಯರನ್ನು ಶಸ್ತ್ರಾಸ್ತ್ರಗಳನ್ನು ತ್ಯಜಿಸುವಂತೆ ಹೇಳಿದ್ದೇನೆ. ಇಲ್ಲವಾದರೆ ಅವರು ಕೊಲ್ಲಲ್ಪಡುವರು ಎಂದು ಹೇಳಿದರು. ಜೊತೆಗೆ ಈಗ ಇರಾನ್ ಜನರ ಪರ ನಿಲ್ಲುವ ಸಮಯವಾಗಿದೆ, ನಿಮ್ಮ ದೇಶವನ್ನು ಮರಳಿ ಪಡೆಯಲು ಸಹಾಯ ಮಾಡುವ ಸಮಯ ಬಂದಿದೆ ಎಂದರು.

ಶರಣಾಗಲು ಮತ್ತು ಸಹಕರಿಸಲು ಸಿದ್ಧರಾಗಿರುವವರಿಗೆ ಕ್ಷಮಾದಾನ ನೀಡುವುದಾಗಿ ಅಮೆರಿಕದ ಅಧ್ಯಕ್ಷರು ಹೇಳಿದರು. ಕ್ಷಮಾದಾನವನ್ನು ಸ್ವೀಕರಿಸಿ; ನಾವು ನಿಮಗೆ ಕ್ಷಮಾದಾನ ನೀಡುತ್ತೇವೆ. ಇಲ್ಲವಾದರೆ ಖಂಡಿತಾ ಮರಣ ಎದುರಿಸಬೇಕಾಗುತ್ತದೆ ಎಂದು ಅವರು ಎಚ್ಚರಿಸಿದರು.

ಮೈಸೂರು ಪಾಲಿಕೆ ವ್ಯಾಪ್ತಿಯ ಆಸ್ತಿಗಳ 3ಡಿ ಏರಿಯಲ್ ಲಿಡಾರ್, ಜಿಪಿಆರ್ ಸರ್ವೆಗೆ ಸಿದ್ಧತೆ

ಡ್ರೋನ್ ಮೂಲಕ ಪ್ರಾಯೋಗಿಕ ಪರಿಶೀಲನೆ



ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಆಸ್ತಿಗಳ 3ಡಿ–ಏರಿಯಲ್ ಲಿಡಾರ್, ಜಿಪಿಆರ್ ಸರ್ವೆಗಾಗಿ ಶುಕ್ರವಾರ ಪ್ರಾಯೋಗಿಕವಾಗಿ ಡ್ರೋನ್ ಮೂಲಕ ಪರಿಶೀಲಿಸಲಾಯಿತು.

ಮೈಸೂರು, ಮಾ.6(ಎಂಟಿವೈ)– ಸಾಂಸ್ಕೃತಿಕ ನಗರಿ ಮೈಸೂರಲ್ಲಿರುವ ಆಸ್ತಿಗಳನ್ನು ಕರಾರುವಕ್ಕಾಗಿ ಸರ್ವೇ ಮಾಡಿ ದಾಖಲೀಕರಿಸಲು ಮೈಸೂರು ಮಹಾನಗರ ಪಾಲಿಕೆ ಕೈಗೆತ್ತಿಕೊಳ್ಳಲು ಉದ್ದೇಶಿಸಿರುವ 3ಡಿ–ಏರಿಯಲ್ ಲಿಡಾರ್, ಜಿಪಿಆರ್ ಸರ್ವೇಗಾಗಿ ಶುಕ್ರವಾರ ಪ್ರಾಯೋಗಿಕವಾಗಿ ಡ್ರೋನ್ ಮೂಲಕ ಪರಿಶೀಲಿಸಲಾಯಿತು.

ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ 2.31 ಲಕ್ಷ ಆಸ್ತಿಯಿದ್ದು, ಅವುಗಳನ್ನು ವೈಜ್ಞಾನಿಕವಾಗಿ ಕರಾರುವಕ್ ಸರ್ವೆ ನಡೆಸಿ ಮೈಸೂರು ಮಹಾನಗರ ಪಾಲಿಕೆ ಸ್ಮಾರ್ಟ್ ನಗರ ನಿರ್ಮಾಣಕ್ಕಾಗಿ ಪೈಲಟ್ ಪ್ರಾಜೆಕ್ಟ್‌ವೊಂದನ್ನು ಕೈಗೆತ್ತಿಕೊಂಡಿದ್ದು, ಆ ಮೂಲಕ ಆಸ್ತಿಯನ್ನು 3ಡಿ ಏರಿಯಲ್ ಬೇಸ್ಡ್ ಲಿಡಾರ್, ಜಿಪಿಆರ್ ಆಸ್ತಿ ಸರ್ವೆ ಮಾಡಲು ಮುಂದಾಗಿದೆ. ಮಾಸಾಂತ್ಯಕ್ಕೆ ಟೆಂಡರ್ ಕರೆದು ಅಧಿಕೃತವಾಗಿ ಲಿಡಾರ್ ಸರ್ವೆ ನಡೆಸಲು ಪಾಲಿಕೆ ನಿರ್ಧರಿಸಿದ್ದು, ಇಂದು ಸಂತೆಪೇಟೆಯಲ್ಲಿ ಡ್ರೋನ್ ಮೂಲಕ ಪ್ರಾಯೋಗಿಕವಾಗಿ ಪರಿಶೀಲಿಸಲಾಯಿತು.

ಲಿಡಾರ್ ಸರ್ವೆಯ ಮಹತ್ವ ಮತ್ತು ಪರಿಣಾಮಕಾರಿ ವಿಧಾನ ಪರಿಶೀಲಿಸಲು ಇಂದಿನಿಂದ ಮೂರು ದಿನಗಳ ಕಾಲ ಮೈಸೂರಿನ ವಿವಿಧ ಬಡಾವಣೆಗಳಲ್ಲಿ ಡ್ರೋನ್ ಮೂಲಕ ಆಸ್ತಿಗಳ 3ಡಿ ಚಿತ್ರ ಸಹಿತ ಮ್ಯಾಪಿಂಗ್ ಮಾಡಿ, ಆಯಾ ಕಟ್ಟಡದ ಅಗಲ, ಎತ್ತರ, ಮಹಡಿ, ವಸತಿ ಅಥವಾ ವಾಣಿಜ್ಯ ಉದ್ದೇಶದ ಬಳಕೆ ಮಾಹಿತಿ ಸೇರಿದಂತೆ ಆಯಾ ಆಸ್ತಿ ಸಂಬಂಧಪಟ್ಟ ಮಾಹಿತಿ ಹೊಂದಿರುವ ಮ್ಯಾಪಿಂಗ್ ತಯಾರಿಸಲಾಗುತ್ತದೆ. ಮೂರು ದಿನ ನಡೆಯುವ ಪ್ರಾಯೋಗಿಕ ಪರೀಕ್ಷಾರ್ಥ ಸರ್ವೆಯಲ್ಲಿ ಸುಮಾರು 500 ಆಸ್ತಿಗಳ ಮ್ಯಾಪಿಂಗ್ ಮಾಡಿ ವರದಿ ಸಲ್ಲಿಸುವಂತೆ ಸೂಚನೆ ನೀಡಲಾಗಿದೆ.

ಅದಕ್ಕಾಗಿ ಡ್ರೋನ್ ತಂಡ ಪಾಲಿಕೆ ಅಧಿಕಾರಿಗಳ ಸಹಕಾರದಿಂದ ಮೂರು ದಿನ ಆಸ್ತಿಗಳ ಏರಿಯಲ್ 3ಡಿ ಲಿಡಾರ್ ಸರ್ವೆಗೆ ಪ್ರಾಯೋಗಿಕ ಪರಿಶೀಲನೆ ಆರಂಭಿಸಿದೆ. ಅತ್ಯಾಧುನಿಕ ಭೌಗೋಳಿಕ ಮಾಹಿತಿ ವ್ಯವಸ್ಥೆ (ಜಿಐಎಸ್) ಮತ್ತು ರಿಮೋಟ್ ಸೆನ್ಸಿಂಗ್ ತಂತ್ರಜ್ಞಾನ ಬಳಸಿಕೊಂಡು 3ಡಿ ಮಾದರಿಯ ಚಿತ್ರದೊಂದಿಗೆ ಮೈಸೂರಿನ ಹೈ–ಪ್ರೆಸಿಷನ್ ಡಿಜಿಟಲ್ ನಕ್ಷೆ ರಚಿಸುತ್ತದೆ. ಅದು ಮೇಲ್ಭಾಗ, ಅಂಡರ್‌ಗ್ರೌಂಡ್ ಮತ್ತು ಆಸ್ತಿ ಮಟ್ಟದ ವಿವರಗಳನ್ನು ಒಳಗೊಂಡಿದ್ದು, ಡೇಟಾ ಆಧಾರಿತ ಆಡಳಿತಕ್ಕೆ ಈ ಸರ್ವೆ ಸಹಾಯವಾಗುತ್ತದೆ.

ಲಿಡಾರ್ ಸರ್ವೆ ಉಪಯೋಗ: ಲಿಡಾರ್ ಸರ್ವೆ ಮಾಡುವುದರಿಂದ ಮೈಸೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿರುವ ಆಸ್ತಿಗಳ ನಿಖರ ಮಾಹಿತಿಯನ್ನು ಡಿಜಿಟಲ್ ಮ್ಯಾಪ್‌ನೊಂದಿಗೆ ಮಾಹಿತಿ ಕ್ರೋಡೀಕರಿಸಬಹುದಾಗಿದೆ. ಈಗಾಗಲೇ ಮೈಸೂರಿನ ಕೆಲವರು ತಮ್ಮ ಆಸ್ತಿಯಲ್ಲಿ ಸ್ವಯಂ ಘೋಷಣೆ(ಸೆಲ್ಫ್ ಡಿಕ್ಲೇರ್) ಮಾಡಿಕೊಂಡಿದ್ದಾರೆ. ಈ ವೇಳೆ ಕೆಲವರು ತಪ್ಪು ಮಾಹಿತಿ ನೀಡಿರಬಹುದು. ಮತ್ತೆ ಕೆಲವರು ವಾಣಿಜ್ಯ ಉದ್ದೇಶವನ್ನು ಮರೆಮಾಚಿರಬಹುದು. ಇದರಿಂದ ಪಾಲಿಕೆ ತೆರಿಗೆ ರೂಪದಲ್ಲಿ ಸಂಗ್ರಹಿಸುವ ಆದಾಯದ ಮೂಲಕ್ಕೆ ಹಿನ್ನಡೆಯಾಗುವ ಸಂಭವವೂ ಹೆಚ್ಚಾಗಿದೆ. ಆದರೆ 3ಡಿ ಏರಿಯಲ್ ಲಿಡಾರ್, ಜಿಪಿಎಸ್ ಸರ್ವೆ ಮಾಡುವುದರಿಂದ ಆಸ್ತಿಯ ನಿಖರ ಮಾಹಿತಿ ದಾಖಲಾಗಲಿದ್ದು, ಪಾಲಿಕೆಗೆ ನಿಖರ ಪ್ರಮಾಣದಲ್ಲಿ ತೆರಿಗೆ ಕಟ್ಟಬೇಕಾದ ಮಾಹಿತಿ ಆಸ್ತಿ ಮಾಲೀಕರಿಗೆ ಲಭ್ಯವಾಗಲಿದೆ. ಅಲ್ಲದೆ, ಪಾಲಿಕೆ ಆದಾಯ ಸಂಗ್ರಹವೂ ಹೆಚ್ಚಾಗಲಿದೆ. ಸೋರಿಕೆ ತಡೆಗಟ್ಟಿದಂತಾಗುತ್ತದೆ.

ಅಲ್ಲದೆ, ಏರಿಯಲ್ ಸರ್ವೆಯಿಂದಾಗಿ ಆಯಾ ಬಡಾವಣೆಯಲ್ಲಿ ರಸ್ತೆ, ಚರಂಡಿ, ಒಳಚರಂಡಿ ಮಾರ್ಗ, ರಸ್ತೆ ವಿನ್ಯಾಸ ಸೇರಿದಂತೆ ವಿವಿಧ ಮಾಹಿತಿ ನಕ್ಷೆಯೊಂದಿಗೆ ಸರ್ವೆಯಲ್ಲಿ ನಮೂದಾಗುವುದರಿಂದ ಬಡಾವಣೆಯ ಅಭಿವೃದ್ಧಿಗೆ ಕೈಗೊಳ್ಳಬೇಕಾದ ಯೋಜನೆಗಳಿಗೆ ಪೂರಕವಾದ ಮಾಹಿತಿ ಸುಲಭವಾಗಿ ಲಭ್ಯವಾಗಲಿದೆ.

10ನೇ ವರ್ಷದ ಸವಿನೆನಪು



ಕೆ.ರಾಜೇಶ್ (ಕೆಂಪ)

ದುಃಖತಪ್ತರು: ತಾಯಿ ಲಕ್ಷ್ಮೀ, ತಂದೆ ಕುಮಾರ, ತಂಗಿ ರಾಧಿಕ ಮತ್ತು ಚೇತನ ರಾಜ್, ಮಾನ್ಯ, ಗೌರವ್ ಮರಿಗೌಡರ ಕುಟುಂಬವರ್ಗ, ಮಾಕನಹುಂಡಿ.

3ನೇ ವರ್ಷದ ಪುಣ್ಯಸ್ಮರಣೆ



ಎನ್.ರವಿ

ನಿಮ್ಮ ಆತ್ಮಕ್ಕೆ ಶಾಂತಿ ಕೋರುವ ತಂದೆ ನಾರಾಯಣ, ತಾಯಿ ರೇವತಿ, ಶ್ವೇತ, ಮದನ್, ಪೂರ್ಣಿಮ, ಹರೀಶ್.ಆರ್

WANTED

1. Form Supervisor (ಹಳ್ಳಿಯಿಂದ ಬಂದವರಿಗೆ ಆಧ್ಯತೆ ಕೊಡಲಾಗುವುದು) Salary: 15000 to 20000/-
2. Car Dirver Cum Office Assistant Salary: 15000 to 20000/-
3. Front Office Assistant (Should Know to Speak Hindi & Tmail) Salary: 15000 to 20000/-
4. Truck Driver (Heavy license)

Whats app Number

63660 42375

In Loving Memory



Dr. P. Boregowda, Ph.D., K.A.S. (Retd.)
16 July 1952 - 26 February 2026

With deep sorrow, we announce his passing on 26 February 2026. He will be remembered for his integrity and dedicated public service.

11th Day Ceremony
Sunday, 8 March 2026 | 11:00 AM
Kethupura Village, T. Narasipura Taluk, Mysuru District

All are kindly invited.

Family Members
Dr. P. Boregowda & Smt. Prabha
Prathistana Trust Members
9902288226 / 9886565757



NOT GETTING YOUR STAR OF MYSORE & ಮೈಸೂರು ಮಿತ್ರ
Call: 98452-96447 / 99003-82840

9ನೇ ವರ್ಷದ ಪುಣ್ಯಸ್ಮರಣೆ



ನೀವು ನಮ್ಮನ್ನಗಲಿ ಇಂದಿಗೆ 9 ವರ್ಷ ಕಳೆದರೂ ಸದಾ ನಿಮ್ಮ ನೆನಪಿನಲ್ಲಿರುವ ತಮ್ಮ: ಶ್ರೀನಿವಾಸ ಮತ್ತು ಶಾಂತಿ ಶ್ರೀನಿವಾಸ ಹಾಗೂ ಕುಟುಂಬ ವರ್ಗದವರು

ಸಿ.ಕುಮಾರಸ್ವಾಮಿ BSNL
ಗಾಂಧಿನಗರ

ಬೇಕಾಗಿದ್ದಾರೆ

ಮೈಸೂರಿನ ಖಾಸಗಿ ಕಂಪನಿಗೆ, Fortuner ಮತ್ತು Automatic ಕಾರು ಓಡಿಸುವ ಡ್ರೈವರ್‌ಗಳು ಬೇಕಾಗಿದ್ದಾರೆ. ಸಂಬಳ: 25,000-30,000 ಮತ್ತು ಟೆಲಿಕಾಲಿಂಗ್ ಕಛೇರಿಯ ಕೆಲಸ ಮಾಡಲು ಹುಡುಗಿಯರು ಬೇಕಾಗಿದ್ದಾರೆ. ಉಳಿದುಕೊಳ್ಳಲು PG ವ್ಯವಸ್ಥೆ ಇರುತ್ತದೆ

9187412584 / 9187312582

Ramadan FESTIVE SALE
BUY 2 GET 1 FREE
PICK THE BEST FOR UR FEET
ON GENTS & LADIES FOOTWEAR
ON ALL IN-HOUSE BRANDS
SHOE WORLD™ ESTD.1998
FOOTWEAR & ACCESSORIES
Best Brands at Your Feet...
CREDIT CARDS ACCEPTED. SUNDAY OPEN
Ph : 2424252
11am to 8-30pm
100 FT ROAD, RAMASWAMY CIRCLE, MYSORE - 4.





LOANS HUB
ALL LOANS UNDER ONE ROOF
- Business Loans
- Housing Loans
- Mortgage Loans
- Balance Transfer & Top up

TRUSTED SERVICE NO SERVICE CHARGES
SRI SAI FINANCIAL SERVICES
Railway Gate Road KG Koppal Mysore
Contact : 88844 47314 / 88844 47318

G9 projects *Designing your Dreams* Vee2 Developers
POORVA SHELTERS
PHASE - I, II & III
Behind Marvel PU College
PRICE STARTS WITH ₹ 2,299/-SQ.FT
8088-707-707



ಮೈಸೂರು ಮಿತ್ರ 46
ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ: ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು